REGISTERED NO. M. 1393. ೨೪ ಪುಟಗಳು ಬಿಡಿ ಸಂಚಿಕೆ ಒಂದಾಣೆ



ಕಂಠೀರವ

ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ ।
ಶಸ್ತ್ರಸ್ತ್ರದ್ವದಮೀಷು ಸಂವ್ಯವಹೃತಿಪ್ರಾಗಲ್ಭ್ಯಮಾತ್ರೋಽನ್ವಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ರೀಕಂಠಕಂಠೀರವಃ ॥

ಪ್ರತಿ ಮಂಗಳವಾರ ಪ್ರಕಟವಾಗುವ ಶ್ರೇಷ್ಠವರ್ಗದ
ಕನ್ನಡ
ವಾರ್ತಾಪತ್ರಿಕೆ.

ನರರ ಕುಲಗಳೊಳಾರ್ಯವಂಶವು, । ಧರೆಯ ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೨ ಮಂಗಳೂರು ೧೯೩೫ನೇ ಇಸವಿ ದಶಂಬರ ತಾರೀಕು ೩೧ನೇ ಮಂಗಳವಾರ ಸಂಚಿಕೆ ೩೯.

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್‌ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ.

ಅಮೃತಾಂಜನ ಡಿಪೋವಿನ, ಮೂರು-ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

(Regd.)

अमृतांजन

અમૃતાંજન

ಅಮೃತಾಂಜನ ಡಿಪೊ

ಬೊಂಬಾಯಿ——ಮದ್ರಾಸ್——ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

TO INSURE
OR
TO REPRESENT

CONSULT

The Bombay Life Assurance Co., Ltd.

ESTD. 1908.

OFFERS

(1) Attractive schemes of Assurance to suit individual needs.
(2) Rebate for yearly payment of premiums.
(3) Additional Rebate for larger Assurances.
(4) Permanent Disability Benefits without extra.
(5) Increased rate of Bonuses.
(6) Accident Risk on a small extra payment.

ATTRACTIVE RATES OF COMMISSION & BONUSES TO AGENTS.

For particulars apply to any of our offices:—

KOCHIKAR BROTHERS,
BRANCH SECRETARIES.

Offices at	P. B. 337 Mount Rd. Madras.	Visveswarapuram Circle Bangalore City.	Huzur Rd. Calicut.	Car Street Mangalore.	Udipi S. India.	Charni Rd. Girgaum Bombay No. 4.

THE MYSORE INSURANCE
THE MYSORE INSURANCE Co LTD BANGALORE CITY

ಕರ್ಣಾಟಕ ವಿಮಾಮಂಡಲದ ಕೀರ್ತಿಜ್ಯೋತಿ!

ಪ್ರಥಮ ವರ್ಷದಲ್ಲೇ ಆದರ್ಶ ಉದ್ಯಮ!! ನಿಖಿಲ ಕರ್ಣಾಟಕಕ್ಕೇ ಪ್ರಥಮ ಸ್ಥಾನ!!!

ಕರ್ಣಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯ ನಡೆಸಿಲ್ಲ.

ಕನ್ನಡಿಗರ ಬಾಳಿನ ಬೆಳಕು ಯಾವುದು?

ಮೈಸೂರು ಜೀವವಿಮಾ ಕಂಪೆನಿ, ಬೆಂಗಳೂರು.

ಇದು ಕನ್ನಡನಾಡಿನ ಕೌತುಕ! ಕನ್ನಡಿಗರ ಸಾಹಸದ ಕನ್ನಡಿ!! ಕನ್ನಡಿಗರ ಭಾಗ್ಯದ ನಿಧಿ!!!

ಮುಂಬೆಳಗೇ ದಿನದ ಕುರುಹು!

ಇಂದಿನ ಪ್ರಗತಿಯೇ ಮುಂದಿನ ಭದ್ರತೆಯ ಹೆಗ್ಗುರುತು!!

1 ಲಕ್ಷ ರೂ.ಗಳ ಷೇರುಗಳು ಮುಗಿದು ಹೋದುವು. 6½ ಲಕ್ಷ ರೂ.ಗಳ ವಿಮಾ ದರಖಾಸ್ತುಗಳು ಬಂದಿವೆ.

ನಮ್ಮ ವೈದ್ಯಪರೀಕ್ಷೆಯಿಲ್ಲದ ಪದ್ಧತಿಗಳು ವಿಮಾಲೋಕಕ್ಕೇ ನೂತನ ಆದರ್ಶ!
ಸರ್ವರ ಅನುಕೂಲ, ಆವಶ್ಯಕತೆಗಳಿಗೆ ಸರಿಹೊಂದುವ ಮತ್ತು ನವೀನ ವೈದ್ಯಪರೀಕ್ಷೆಯಿರುವ ವೈದ್ಯಪರೀಕ್ಷೆಯಿಲ್ಲದಿರುವ ವಿಮಾಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು!

ತಿಂಗಳಿಗೆ 200 ರೂಪಾಯಿಗಳನ್ನು ಸಂಪಾದಿಸಬೇಕೆಂಬ ಆಶೆ ನಿಮಗಿದೆಯೇ?

ಹಾಗಾದರೆ ನಮ್ಮ ಏಜಂಟರಾಗಿ! ವೇತನದ ಮೇಲೂ ಕೆಲಸ ಮಾಡಲು ಅವಕಾಶವಿದೆ.

ಹೆಚ್ಚು ಮಾಹಿತಿಗೆ:—

ಮೈಸೂರು ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಶ್ರೀ ನರಸಿಂಹರಾಜ ರೋಡು, ಬೆಂಗಳೂರು ಸಿಟಿ.

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜಂಟ್ಸ್.

THE CANARA BANKING CORPORATION UDIPI, LTD.

(*Incorporated in British INDIA.*)

ESTD:—1906.

Head Office:—UDIPI, S. K.

BRANCHES:-

1. Udipi, 2. Coondapoor, 3. Car Street—Mangalore, 4. Bunder—Mangalore, 5. Shimoga, 6. G. T.-Madras, 7. Mercara and 8. Virarajendrapet.

DEPOSITS.

1922	1926	1930	1934
Rs. 2,28,419/—	6,43,940/—	20,23,837/—	24,95,329.

30—11—1935.

RS. 27,40,312/—.

SAVINGS BANK ACCOUNTS.

INTEREST allowed at 3½% p. a.

FACILITIES:—

1. Withdrawal by **Cheques**. 2. Production of pass books unnecessary at the time of withdrawal. 3. Accounts transferred FREE of charge from one office to another.

ಅಶೋಕ

ಬೋನಸ್
ಪ್ರತಿ ಸಾವಿರಕ್ಕೆ ರೂ. 10-
ಅದೂ
ಪ್ರಥಮ ಮೂಲ್ಯವೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾಥಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ಡೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸೇಟ್ ರಾಂಚೋಡ್‌ಲಾಲ್, ಕಟ್ನಿಯ ಸಿಮೆಂಟ್ ಮತ್ತೂ ಇಂಡಸ್ಟ್ರೀಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್‌ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ವಿ. ಮಾವಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಕಂಪೆನಿಯ ಏಕ್ಚುವೇರಿಯಾದ ಶ್ರೀ. ಜಿ. ಎಸ್. ಮರಾಠೇ, ಎಂ. ಏ., ಏ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯವೇತನದ ಫಲವು ಉತ್ತೇಜನಕಾರಿಯೆಂದು ಎಣಿಸಬೇಕು. ನಿಮ್ಮ ಕಂಪೆನಿಯು ಕಷ್ಟದ ಸಮಯವಾದ ಒಂದೊಂದು ಅವಧಿಯನ್ನೀಗ ದಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಅನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮಟ್ಟಿಗೆ ಸಾರ್ವಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ಮಾನಸಿಕ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚದಿರದೆಂದು ನಾನು ಭಾವಿಸುತ್ತೇನೆ...ಆದುದರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ನಂಬಿಕೆ.'

ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

THE ASHOK INSURANCE CO., LTD,

9, Forbes Street, Fort, BOMBAY. **Raikhad, AHMEDABAD.**

ಅಥವಾ

ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

TO THE READERS
AND ADVERTISERS
KANTEERAVA
WISHES A BRIGHT
AND PROSPEROUS
NEW YEAR.

ಸ್ವೀಕಾರ

ಕೆ. ಟಿ. ಡೋಂಗರೆ ಮತ್ತು ಕಂಪೆನಿ, ಮುಂಬಾಯಿ, ಇವರು ಕಳುಹಿಸಿ ಕೊಟ್ಟಿರುವ ೧೯೩೬ನೇ ಇಸವಿಯ ಅಂದವಾದ ಕ್ಯಾಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಉಡುಪಿಯ ಶ್ರೀ.ಗಳಾದ ಪಿ. ಏ. ಪೈಗಳವರ ಹೊಸ ವರ್ಷದ 'ಸ್ವರಾಜ್ಯ ಡೈರಿ' ಅನೇಕ ರಾಷ್ಟ್ರೀಯ ವಿಚಾರಗಳನ್ನೂ, ನಿತ್ಯವ್ಯವಹಾರಕ್ಕೆ ಬೇಕಾದ ಮುಖ್ಯಾಂಶಗಳನ್ನೂ ಒಳಗೊಂಡು, ತುಳುನಾಡ್ ಛಾಪಖಾನೆಯ ಸುಂದರವಾದ ಮುದ್ರಣದಿಂದ ಕಂಗೊಳಿಸುತ್ತದೆ. ಪ್ರತಿಯೊಬ್ಬ ಕನ್ನಡಿಗನ ಬಳಿಯಲ್ಲಿಯೂ ಇರಲು ಯೋಗ್ಯವು.

ಜಾಮನಗರದ ವೈದ್ಯ ಶಾಸ್ತ್ರೀಯವರು ಕಳುಹಿಸಿ ಕೊಟ್ಟಿರುವ ೧೯೩೬ನೇ ಇಸವಿಯ ಅಂದವಾದ ಆತಂಕನಿಗ್ರಹ ಡೈರಿಯನ್ನು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ವಿನೋದ ಭಾರತ:-ನಗಿಸಿ ನಗಿಸಿ ಅಳಿಸುವ ಸಚಿತ್ರ ವಿಚಿತ್ರ ವಿನೋದಮಯ ವಾರ ಪತ್ರಿಕೆ—ಸಂಪಾದಕರು ಶ್ರೀ. ಮಂಗಳೂರು ಜಾರಪ್ಪ, ಸಹಾಯಕ ಸಂಪಾದಕರು—ಶ್ರೀ. ಬಿ. ನರ್ಸಪ್ಪ—ಚಂದಾ: ಊರವರು ವರ್ಷ ೧ಕ್ಕೆ ರೂ. ೨—೦—೦ ತಂದು ಕೊಡಬೇಕು. ಪರ ಊರವರು ವರ್ಷ ೧ಕ್ಕೆ ರೂ. ೨—೫—೦ ರವಾನಿಸಬೇಕು. ಬಿಡಿ ಸಂಚಿಕೆಗೆ ಬರೇ ಅರ್ಧಾಣೆ—ಪ್ರತಿ ಬುಧವಾರ ಮಂಗಳೂರಲ್ಲಿ ಪ್ರಕಟವಾಗುವ ಈ ವಾರ ಪತ್ರಿಕೆಯ ಸಂಪಾದಕರೂ ಸಹಾಯಕ ಸಂಪಾದಕರೂ ಕನ್ನಡಿಗರಿಗೆ ಚಿರಪರಿಚಿತರು. ವಿಲಾಯತಿಯ ಪ್ರಖ್ಯಾತ 'ಪಂಚ್' ಪತ್ರಿಕೆಯಂತೆ ತಮ್ಮ ಪತ್ರಿಕೆಯನ್ನು ಮಾಡಬೇಕೆಂಬುದು ಸಂಪಾದಕರ ಧ್ಯೇಯವಿದ್ದಂತೆ ತೋರುತ್ತಿದೆ. ಕನ್ನಡಿಗರ ಉದಾರಾಶ್ರಯದಿಂದ ಇದು ಕೈಗೂಡಲೆಂದೂ, ವಿನೋದ ಭಾರತವು ಕರ್ಣಾಟಕಕ್ಕೆಲ್ಲ ಆದರ್ಶಪ್ರಾಯವಾಗಿ ಚಿರಾಯುವಾಗಿ ಬಾಳಲೆಂದೂ ಹಾರೈಕೆ.

ಮುಸ್ಲಿಂ ಸಂದೇಶ—ಧಾರವಾಡ:—ಸಂಪಾದಕರು ಮಿ. ಇಮಾಮುದ್ದೀನ ಕಿಲ್ಲೇದಾರ—ವಾ. ಚಂದಾ: ರೂ. ೧—೮—೦. ಹಿಂದೂ ಮುಸಲ್ಮಾನರಲ್ಲಿ ಅವರವರ ಧಾರ್ಮಿಕ ವಿಚಾರಗಳ ಯಥಾರ್ಥ ಜ್ಞಾನವು ಹರಡಿ, ಎರಡು ಸಮಾಜಗಳೊಳಗೂ ಪರಸ್ಪರ ಪ್ರೇಮವನ್ನು ಬೆಳೆಸಬೇಕೆಂಬ ಆಶಯದಿಂದ ಹೊರಟ ಮಾಸಪತ್ರಿಕೆಯಿದು ಚಿರಾಯುವಾಗಿ ಬಾಳಲೆಂದು ಹಾರೈಸುತ್ತೇವೆ.

ಭಾರತ ರಾಜಕೀಯ ದೃಶ್ಯ:-ಲೇಖಕ: ಕಣಕುಪ್ಪಿ ಗುರುಪಾದಪ್ಪ, ಶ್ರೀ ಜಯದೇವ ಪ್ರೆಸ್, ಚೌಕಿಪೇಟೆ, ದಾವಣಗೆರೆ. ಕಳೆದ ೫೦ ವರ್ಷಗಳಲ್ಲಿ ಭಾರತ ರಾಜಕೀಯ ರಂಗದಲ್ಲಿ ನಡೆಯುತ್ತ ಬಂದಿರುವ ಕಾರ್ಯಕಲಾಪಗಳ ವಿವರಣೆಯು ಇದರಲ್ಲಿ ಕೊಡಲಾಗಿದೆ. ಹಿಂದೆ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಮಾಲೆಗಳ ಸಂಗ್ರಹವಿದು. ಭಾರತ ರಾಜಕೀಯ ಕಲಾಪಗಳನ್ನು ತಿಳಿದುಕೊಳ್ಳುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಅಂಥವರಿಗಿದು ತುಂಬಾ ಸಹಕಾರಿ.

ಧಮ್ಮಪದ:—ಕನ್ನಡದ ಅನುವಾದ, ಟಿಪ್ಪಣಿ, ಪರಿಶಿಷ್ಟಗಳೊಡನೆ-ಅನುವಾದಕ: ವೈ. ಸುಬ್ಬರಾವ್, ಪ್ರಕಾಶಕ, ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಚಾಮರಾಜಪೇಟೆ, ಬೆಂಗಳೂರು ಸಿಟಿ. ಬೆಲೆ: ೧೦ ಆಣೆ. ಹದಿನಾಲ್ಕು ಶತಮಾನಗಳ ಹಿಂದೆ ಬೌದ್ಧಮತವು ಭರತಖಂಡದಲ್ಲಿ ಹುಟ್ಟಿ ಬೆಳೆದು ಪ್ರಸಿದ್ಧವಾಯಿತು. ಅದರ ಸ್ಥಾಪಕನಾದ ಗೌತಮ ಬುದ್ಧನು ಅವತಾರ ಪುರುಷನೆಂದು ಗಣಿಸಲ್ಪಡುತ್ತಿರುವನು. ಧಮ್ಮಪದವು ಬೌದ್ಧರಲ್ಲಿ ಬಹಳ ಪೂಜ್ಯವಾದ ಸ್ಥಾನವನ್ನು ಹೊಂದಿರುತ್ತದೆ. ಭಗವದ್ಗೀತೆಯಂತೆಯೇ ಪವಿತ್ರವಾದ ಗ್ರಂಥವಿದು. ಬೌದ್ಧಧರ್ಮವು ಮೂಲ ರೂಪದಲ್ಲಿ ಹೇಗಿರುವದೆಂಬುದನ್ನು ತಿಳಿಯಬೇಕೆನ್ನುವವರಿಗೂ, ವೇದಾಂತಕ್ಕೂ ಬೌದ್ಧ ದರ್ಶನಕ್ಕೂ ಇರುವ ಸಾಮ್ಯ ವೈಷಮ್ಯಗಳನ್ನು ತಿಳಿಯಬೇಕೆನ್ನುವವರಿಗೂ ಈ ಚಿಕ್ಕ ಪುಸ್ತಕವು ತುಂಬಾ ಪ್ರಯೋಜನಕಾರಿಯು.

ಹುಚ್ಚಾಟಗಳು:—ಬರೆದವರು-ದ. ರಾ. ಬೇಂದ್ರೆ, ಮುದ್ರಕರು-ಬಳವಂತ ನಾರಾಯಣ ಬಾಗಲವಾಡಿ, ಮೋಹನ ಮುದ್ರಣಾಲಯ, ಧಾರವಾಡ. ಪ್ರಕಾಶಕರು—ಮಂಗಳೂರ ಗೋವಿಂದರಾಯರು, ಸಾಹಿತ್ಯ ಭಾಂಡಾರ, ಹುಬ್ಬಳ್ಳಿ. ಬೆಲೆ ೧ ರೂಪಾಯಿ. ಇದರಲ್ಲಿ 'ದೆವ್ವನ ಮನೆ' 'ಹಳೆಯ ಗೆಣೆಯರು' 'ಸಾಯೋ ಆಟ' 'ತಿರುಕರ ಪಿಡುಗು' 'ಗೋಲ್' ಎಂಬ ೫ ರೂಪಕಗಳು ಸಂಕಲಿತವಾಗಿವೆ. ಪೈಕಿ ನಾಲ್ಕು 'ಹುಚ್ಚಾಟ'ಗಳು. ಕಡೆಯದು ಗಂಭೀರವಾದ ವಸ್ತುವನ್ನು ಬರೆದ ದೃಶ್ಯ. ಇದು ಹಿಂದೆ ಶ್ರೀ. ಎಂ. ಗೋವರ್ಧನ ರಾಯರ ಸಂಪಾದಕತ್ವದಲ್ಲಿ ಕಾರ್ಕಳದಿಂದ ಹೊರಡುವ 'ಶಕ್ತಿ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟಿತವಾದದ್ದು. ಕನ್ನಡ ಸಾಹಿತ್ಯದಲ್ಲಿ ಕೇವಲ ಹಾಸ್ಯರಸದ ರೂಪಕಗಳ ಕೊರತೆಯನ್ನು ಈ ಪುಸ್ತಕವು ದೂರ ಮಾಡುತ್ತದೆ. ಸಮಾಜವೆಲ್ಲ ಸಾಮಾಜಿಕ ಕ್ರಾಂತಿಯಲ್ಲಿರುವಾಗ ಇಂಥ 'ಹುಚ್ಚಾಟ'ಗಳು ಬಯಲಿಗೆ ಬಂದದ್ದು ಸ್ತುತ್ಯ. ಇವುಗಳೊಳಗಿನ ನಗೆಯಿಂದ ಯಾರೂ ನೊಂದುಕೊಳ್ಳಲಾರರು. ಕರ್ಣಾಟಕಕ್ಕೆ ಶ್ರೀ. ಬೇಂದ್ರೆಯವರು ತುಂಬಾ ಪರಿಚಿತರು. ಇಂತಹ ಪುಸ್ತಕಗಳನ್ನು ಇನ್ನು ಮುಂದೆಯೂ ಸಮಾಜದ ಮುಂದಿಟ್ಟು ಕನ್ನಡಿಗರ ಪ್ರೀತಿಗೂ ಗೌರವಕ್ಕೂ ಕಾರಣಭೂತರಾಗಲೆಂದು ನಮ್ಮ ಕೋರಿಕೆ.

ನೋಟೀಸು.

ಹಿಂದುಸ್ಥಾನ ಸಿನೇಮಾ ಕಂಪೆನಿ ಲಿಕ್ವಿಡೇಟರ ಮಿಜಾರ ಕೇಶವ ಪೈಯು ತಿಳಿಸುವದು:-ಎನ್. ಆರ್. ಬಂಟವಾಳಕಾರರು ಕಂಪೆನಿಗೆ ಅಡವು ಜವಾಬುದಾರಿ ಮಾಡಿಕೊಟ್ಟ ನಾಟಕದ ಫರ್ದೆಗಳು ವ ಇತರ ಸಾಮಾನುಗಳನ್ನು ಇದೇ ಬರುವ 1936ನೇ ಇಸವಿ ಜನವರಿ ತಾರೀಕು 4ನೇ ದಿವಸ ಅಪರಾಹ್ನ ಗಂಟೆ 3ಕ್ಕೆ ದಿ ಬೇಂಕ್ ಆಫ್ ಮಂಗಳೂರು ಇವರ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವದು. ಏಲಮಿನ ಐವಜನ್ನು ಕೂಡಲೇ ವಸೂಲು ಕೊಡತಕ್ಕದ್ದು.

ಮಂಗಳೂರು,
27—12—1935.

M. Keshava Pai.

THE
Popular Insurance Co., Ltd.
Head Office:-MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮುಖ್ಯ ಕಾರ್ಯಾಲಯ:–ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ಣಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. **ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.**

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ.
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/- ಬೋನಸ್ ಹಂಚಲಾಗುವುದು

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರ ಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ **ಬೇಕು!**

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

Ford

ANNOUNCING
FOUR SEATER
10 H. P.
TOURING CARS



THE HOOD WHEN LOWERED FITS
ITSELF FLUSH WITH THE BODY.

U. SUBRAYA NAYAK,
FORD DEALER.
SHIMOGA & MANGALORE.

ತೊನ್ನಿಗೆ ಅದ್ಭುತ ಔಷಧಿ
(ರಿಜಿಸ್ಟರ್ಡ್)

ಗುಣ ದೊರಕದಿದ್ದರೆ ರೂ. 1000 ಬಹುಮಾನ!

18 ಪ್ರಕಾರಗಳ ಎಲ್ಲಾ **ಕುಷ್ಟ ರೋಗಗಳೂ, ಬಿಳಿ ತೊನ್ನು, ಚರ್ಮವ್ಯಾಧಿಗಳೂ** ಮತ್ತು **ಮೇಹ ಸಂಬಂಧ ರೋಗಗಳೂ,** ಬುಡ ಸಮೇತ ಕಿತ್ತುಹೋಗಿ, ಖಂಡಿತವಾಗಿಯೂ ಗುಣಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಇಂಜಿಕ್ಶನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಟ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:— ನಾನು ನಿಮ್ಮ **ಅತ್ಯಾಶ್ಚರ್ಯ ಕುಷ್ಟರೋಗ ನಿರ್ಮೂಲಿನಿ**ಯನ್ನು ಇಬ್ಬರು ಕುಷ್ಟರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಉತ್ಕೃಷ್ಟವಾಗಿತ್ತು. **ಲಕ್ಷ್ಮಿ ಮತ್ತು ಕಂಪೆನಿ**ಯವರ ಸಿದ್ಧೌಷಧದಿಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ ರಕ್ತವನ್ನು ಪರೀಕ್ಷಿಸಿದಲ್ಲಿ, ಅದು ಕುಷ್ಟ ರೋಗದ ಸೋಂಕಿಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇನೂ ಅಗತ್ಯವಾಗಿಲ್ಲವೆಂದೂ ನಾನು ಕಂಡಿರುತ್ತೇನೆ.

ಯಾವತ್ತೂ ಮಾಹಿತಿಗಾಗಿ ಮತ್ತು ಕೆಟಲಾಗಿಗೆ ಬರೆಯುವರೆ ವಿಳಾಸ:—

ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ಟೇರ್, ಆರ್. ಎಸ್. ಪೋಸ್ಟ್.

ಗುಪ್ತಮಂತ್ರ
100 ರೂಪಾಯಿಗಳ ಬಹುಮಾನ.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧಿಸದ ಕೆಲಸಗಳು ಈ 'ಮಂತ್ರ'ದ ಏಳು ಬಾರಿಯ ಪುನರುಚ್ಚಾರಣೆಯಿಂದಲೇ ಸಾಧ್ಯವಾಗುವುವು. ಅದರ ಪರಿಣಾಮವು ನೆಟ್ಟಗಾಗುವಂತೆ ಮಾಡಲು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ಯಾವ ಸಿದ್ಧತೆಯೂ ಇಲ್ಲದೆ ಅದು ಒಳ್ಳೆಯ ಫಲ ಕೊಡುವುದು. ಆಕೆ ಎಷ್ಟೇ ಕಠಿನ ಮನಸ್ಸಿನವಳಾಗಿಯೂ, ಗರ್ವಿಷ್ಠೆಯಾಗಿಯೂ ಇರಲಿ! ಈ ಮಂತ್ರವನ್ನು ಓದಿದಾಗ ಅವಳಲ್ಲಿ ನಿಮ್ಮ ಮೇಲಿನ ಮಮತೆಯುಂಟಾಗಿ, ನಿಮ್ಮೊಡನೆಯೇ ಯಾವಾಗಲೂ ಇರಬೇಕೆನ್ನುವ ಹಂಬಲು ಹುಟ್ಟುವುದು. ಇದಕ್ಕೆ 'ವಶೀಕರಣ ಮಂತ್ರ'ವೆನ್ನುವರು. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುವುದು; ನಿಮಗೆ ಕೆಲಸವನ್ನೂ 'ಎಡ್ವಾನ್ಸ್'ನ್ನೂ ಕೊಡಿಸುವುದು; ವ್ಯಾಜ್ಯ ವ್ಯವಹಾರಗಳಲ್ಲಿ ನೀವು ಗೆಲ್ಲುವಂತಾಗುವುದು; ವ್ಯಾಪಾರದಲ್ಲಿ ನಿಮಗೆ ಲಾಭ ಬರುವುದು. ಇದು ಸುಳ್ಳೆಂದು ರುಜುವಾತಾದಲ್ಲಿ ನಿಮಗೆ ನಮ್ಮ ಬಹುಮಾನ—ರೂ. 100! ಪೋಸ್ಟೇಜ್ ಕೂಡ ಬೆಲೆ ರೂ. 2—7—0.

ಪತ್ರವ್ಯವಹಾರ ಇಂಗ್ಲೀಷಿನಲ್ಲೀ.

Siddha Manthra Ashram,
No. 174, P. O. Katri Sarai, (GAYA.)

ಈ ವಾರದ ಕಥೆ—

ಒಡವೆಯ ಒತ್ತೆ.

(ಲೇಖಕ:—ಶ್ರೀ| ಯಂ. ಆರ್. ಶಾಸ್ತ್ರಿ, ಮಂಗಳೂರು.)

All rights reserved.

ಕೆಲವು ದಿನಗಳಿಂದ ರಮಾನಂದನಿಗೆ ನಿಂತಲ್ಲಿ ನಿಲ್ಲುವಷ್ಟು ಬಿಡುವಿಲ್ಲ; ಮನಸ್ಸಿಗೆ ಶಾಂತಿಯಿಲ್ಲ. ತನ್ನ ಮೇಲೆ ಕೋರ್ಟುವ್ಯವಹರಣೆ ನಡಿಸಿ, ನೂರು ರೂಪಾಯಿಗಳನ್ನು ಡಿಕ್ರಿ ಮಾಡಿಸಿಕೊಂಡ ರಾಮ ಭಟ್ಟರ ಹಣವನ್ನು ಕಟ್ಟಲಿಕ್ಕೆ ಇನ್ನು ಎಂಟು ದಿನಗಳ ಅವಧಿಯಿದೆಯಷ್ಟೆ. ಅಷ್ಟರೊಳಗೆ ಯಾರ ಸಹಾಯದಿಂದಾದರೂ ಹಣವನ್ನು ಕಟ್ಟದಿದ್ದರೆ ತನ್ನ ಮಾನವುಳಿಯದು. ಅವನ ಮೇಲೆ ದಾವೆ ಹೂಡಿದವರೂ ಅವನ ಮಾನಖಂಡನೆ ಮಾಡಬೇಕೆಂದೇ ಇಷ್ಟೆಲ್ಲ ಮಾಡಿದ್ದು. ಒಂದೆರಡು ತಿಂಗಳೊಳಗೆ ಐವೇಜನ್ನು ಕೊಟ್ಟುಬಿಡುತ್ತೇನೆಂದು ಎಷ್ಟು ಸಲ ಬೇಡಿಕೊಂಡರೂ ಒಪ್ಪದೆ, ಮಾನಕ್ಕಾಗಿ ಪೇಚಾಡುವ ಆ ಬಡ ಉಪಾಧ್ಯಾಯನ ತಲೆಯ ಮೇಲೆ ಕೋರ್ಟು ಖರ್ಚು, ವಕೀಲರ ಫೀಸು ಎಲ್ಲಾ ಹೊರಿಸಿ ಅವನ ಚಂದ ನೋಡಬೇಕೆಂದು ನ್ಯಾಯಸ್ಥಾನಕ್ಕೆ ದೂರು ಕೊಟ್ಟದ್ದು. ಹೇಗಾದರೂ ಅವರ ಉದ್ದೇಶಗಳೆಲ್ಲ ನೆರವೇರಿದವು. ರಮಾನಂದನಿಗೆ ಮಾತ್ರ ಇದರಿಂದ ಪಾರಾಗುವುದು ಹೇಗೆಂದು ತಿಳಿಯಲಿಲ್ಲ.

ರಮಾನಂದನು ಹೈಯರ್ ಗ್ರೇಡಿನ ಬಡ ಉಪಾಧ್ಯಾಯ; ತಿಂಗಳಿಗೆ ಇಪ್ಪತ್ತೈದು ರೂಪಾಯಿ ವೇತನ ಸಿಗುತಿತ್ತು. ಅವನು ಮಾಸ್ತರಿಕೆ ನೋಡಲಿಕ್ಕಾರಂಭಿಸಿ ಹನ್ನೆರಡು ವರ್ಷಗಳಾದವು. ಹೀಗಿದ್ದು, ಅವನಲ್ಲಿ ನೂರು ರೂಪಾಯಿಗಳಿಲ್ಲವೆಂದರೆ ನಿಮಗೆ ಆಶ್ಚರ್ಯವಾಗಬಹುದು. ಅವನ ವಿಷಯ ತಿಳಿದವರಿಗೇ ಗೊತ್ತು. ಅವನೇನಾದರೂ ಒಂದೇ ಜೀವವಲ್ಲ. ಹೆಂಡತಿಯೊಬ್ಬಳಿದ್ದಾಳೆ. ಒಬ್ಬ ಮಗನಿದ್ದಾನೆ. ಅಂದ ಮೇಲೆ ಇಪ್ಪತ್ತೈದು ರೂಪಾಯಿಗಳಲ್ಲಿ ಉಳಿಯುವದೆಲ್ಲಿಂದ? ತಿಂಗಳಲ್ಲಿ ೩೦ನೇ ತಾರೀಕಿನ ವರೆಗೆ, ಸಿಗುವ ಸಂಬಳದಷ್ಟೆ ಸಾಲ ಮಾಡಿ, ಸಂಬಳ ಸಿಗುವ ವರೆಗೆ ಮತ್ತೇನೂ ಖರ್ಚು ಮಾಡದೆ, ಸಂಬಳ ಸಿಕ್ಕಿದ ದಿನ ಸಂಜೆಗೆ ಎಲ್ಲರ ಹಣವನ್ನೂ ಕೊಟ್ಟು ಬರೀ ಕಿಸೆಯಿಂದ ಮನೆಗೆ ಬರುವವನು ರಮಾನಂದ. ಅವನು ಹನ್ನೆರಡು ವರ್ಷ ಮಾಸ್ತರಿಕೆಯಿಂದ ಮಾಡಿದ ಸೊತ್ತೆಂದರೆ ಹೆಂಡತಿಯ ಮೈಮೇಲಿರುವ ಕೆಲವು ಆಭರಣಗಳು. ಹೆಚ್ಚೆಂದರೆ ಐನೂರು ರೂಪಾಯಿ ಬರಬಹುದು. ಮನೆಯಲ್ಲಿರುವ ಸಾಮಾನುಗಳು ಸಹಾ ಅವನ ತಂದೆ ಸತ್ತು, ಅವನ ಪಾಲಿಗೆ ಬಂದದ್ದು.

ಇಷ್ಟರಲ್ಲಿಯೇ ರಮಾನಂದನೊಬ್ಬ ದರಿದ್ರನೆಂದು ತಪ್ಪಾಗಿ ತಿಳಿಯಬೇಡಿ. ಅವನು ಯಾರ ಬಾಯಿಯಿಂದಲೂ ಕೆಟ್ಟ ಮಾತುಗಳನ್ನು ಕೇಳಿದವನಲ್ಲ. ಯಾರ ಸಾಲವನ್ನೂ ತಿಂದು ಹಾಕಿದವನಲ್ಲ. ಒಳ್ಳೆಯ ಉಪಾಧ್ಯಾಯರಿಗಿರಬೇಕಾದ ಎಲ್ಲಾ ಗುಣಗಳೂ ಅವನಲ್ಲಿದ್ದವು. ಕಾಣುವವರಿಗೆ ದೋಷವೊಂದೆ—ಕೈಯಲ್ಲಿ ಹಣ ಉಳಿಯದಿದ್ದುದು. ಅದು ಉಪಾಧ್ಯಾಯರಾದವರ ಹಣೆಯ ಬರಹವೇ ಹಾಗೆ. ಅವರ ಬಡತನವನ್ನು ಕೇಳುವವರೂ ಇಲ್ಲ; ಅವರ ಗೋಳು ಮುಗಿಯಲಿಕ್ಕೂ ಇಲ್ಲ. ಉಪಾಧ್ಯಾಯರ ಸ್ಥಿತಿಯು ಈ ಕಲಿಯುಗಾಂತ್ಯದ ವರೆಗೂ ಒಳ್ಳೇದಾಗಲಿಕ್ಕಿಲ್ಲವೆಂದಾದ ಮೇಲೆ ರಮಾನಂದನಲ್ಲಿ ತಿಂಗಳ ಕೊನೆಯ ವರೆಗೆ ಸಂಬಳ ಉಳಿಯದಿದ್ದುದು ಅವನ ತಪ್ಪೇ?

ಹೇಗಿದ್ದರೂ ಅವನು ಮರ್ಯಾದೆಯಿಂದ ಕಾಲಹರಣ ಮಾಡುತಿದ್ದನು. ಇಷ್ಟರ ವರೆಗಿನ ಜೀವಿತದಲ್ಲಿ, ಅವನ ಮನಸ್ಸನ್ನು ಹಿಂಡಿ ಹಿಪ್ಪೆ ಮಾಡಿದ್ದೆಂದರೆ ರಾಮ ಭಟ್ಟರ ಸಾಲವೊಂದೆ. ಅದೂ ಹೆಂಡತಿಯ ಒಡವೆಗಳಿಗೋಸ್ಕರವಾಗಿಯೇ ಮಾಡಿದ ಸಾಲ. ಅದನ್ನೊಮ್ಮೆ ಕೊಟ್ಟು ತೀರಿಸಿದನೆಂದರೆ—ಮುಂದಕ್ಕೆ ಅವನು ತಿಂಗಳಿಗೆ ೨೫ ರೂಪಾಯಿಗಿಂತ ಹೆಚ್ಚು ಸಾಲ ಮಾಡುವವನೇ ಅಲ್ಲ. ಅದನ್ನು ಅವನು ನಿಶ್ಚಯ ಮಾಡಿಕೊಂಡಿದ್ದನು.

ತನಗೆ ನೂರು ರೂಪಾಯಿಗಳನ್ನು ಒಂದೇ ಗಂಟಾಗಿ ಕೊಡುವವರಾರು? ಯಾರು ತನಗೆ ಆಪತ್ಕಾಲದಲ್ಲಿ ಸಹಾಯ ಮಾಡುವರೆಂದು ಅವನು ತಿಳಿದಿದ್ದನೊ ಅವರನ್ನೆಲ್ಲ ಪರೀಕ್ಷಿಸಿ ಆಯಿತು. ಯಾರಿಂದಲೂ ಚಿಕ್ಕಾಸೂ ದೊರೆಯಲಿಲ್ಲ. ಅವನ ಸಂಬಂಧಿಕರು ಧನಿಕರಾಗಿದ್ದರೂ ಬಂಧುಗಳಲ್ಲಿ ಸಾಲ ಮಾಡುವುದು ಅಷ್ಟು ಶ್ರೇಯಸ್ಕರವಲ್ಲವೆಂದು ಆ ಯೋಚನೆಯನ್ನೆ ಬಿಟ್ಟಿದ್ದನು. ತನ್ನ ಮಾನ ಉಳಿಸಲಿಕ್ಕೆ ಇನ್ನಾವ ಹಾದಿಯೆಂದು ಚಿಂತಿಸಿ, ಕೊನೆಗೆ ನಿಶ್ಚಯ ಮಾಡಿದನು—ತನ್ನ ಹೆಂಡತಿಯ ಆಭರಣಗಳನ್ನು ಬೇಂಕಿನಲ್ಲಿ ಒತ್ತೆಯಿಟ್ಟು ಸಾಲ ತೆಗೆದುಕೊಳ್ಳುವುದು. ಒಮ್ಮೆಗೆ ಹೇಗಾದರೂ ರಾಮ ಭಟ್ಟರ ಬಲೆಯಿಂದ ಪಾರಾಗುವುದು. ಮತ್ತೆ ದೇವರಿಟ್ಟಂತಾಗುತ್ತದೆ. ಆಭರಣಗಳನ್ನಿಡುವ ಯೋಗ ಹೆಂಡತಿಗಿದ್ದರೆ ಅದನ್ನು ಬಿಡಿಸಿ ತರುವುದು. ಹೀಗೆ ಯೋಚಿಸಿ, ಹೆಂಡತಿಯಲ್ಲಿ ಅದರ ಪ್ರಸ್ತಾಪವೆತ್ತಿದನು.

ಹೆಂಡತಿ ನಿರಾಕರಿಸುವಳೇ? ತನ್ನ ಗಂಡನ ಮಾನ ಹೋಗುವ ಕಾಲಕ್ಕೆ ತಾನು ಆಭರಣಗಳನ್ನಿಟ್ಟುಕೊಂಡು ಮೆರೆಯುವುದೇ? ಅದೂ ಆಭರಣಕ್ಕಾಗಿಯೇ ಆದ ಸಾಲ. ಆದ್ದರಿಂದ ಒಡವೆಗಳನ್ನು ಕೊಡುವೆನೆಂದಳು. ಆದರೆ ಮೊದಲಾಗಿ ಯಾಕೆ ಬೇಂಕಿನಿಂದ ಸಾಲ ಪಡೆಯಬೇಕು? ಅದೇ ದಿನ ಆಭರಣಗಳನ್ನಿಟ್ಟು, ತೆಗೆದುಕೊಂಡರೆ ಸಾಕಲ್ಲವೇ? ಏಳೆಂಟು ದಿನಗಳ ಬಡ್ಡಿಯಾದರೂ ಕಡಿಮೆಯಾದೀತೆಂದು ಹೇಳಿ ಗಂಡನನ್ನು ಸಮಾಧಾನ ಪಡಿಸಿದಳು.

ಹೀಗೆ ಹೇಳಲಿಕ್ಕೆ ಕಾರಣವಿಷ್ಟೆ—ಒಡವೆಗಳು ಅವಳಲ್ಲಿದ್ದಿಲ್ಲ. ಮನೆಯ ಕೆಲಸದವಳು ತನ್ನ ಮಗಳ ಮದುವೆಗೆಂದು ಬೇಡಿ ಕೊಂಡುಹೋಗಿದ್ದಳು. ಅವಳು ಕೊಟ್ಟದ್ದೂ ಗಂಡನಿಗೆ ತಿಳಿಯದಂತೆ. ಹೀಗಿರುವಾಗ ಇವೆಲ್ಲ ಬಯಲಿಗೆ ಬರುವುದೇಕೆಂದು ಅದೇ ದಿನ ತನ್ನ ಒಡವೆಗಳನ್ನು ಕೊಡುವುದಾಗಿ ಹೇಳಿದಳು. ರಮಾನಂದನೂ ಅದಕ್ಕಾಗಿ ಹೆಚ್ಚು ಆತುರ ಪಡಲಿಲ್ಲ. ಹೇಗಿದ್ದರೂ ಬೇಂಕಿನಲ್ಲಿ ಬೇಕಾದಾಗ ಹಣ ದೊರೆಯುವುದಲ್ಲವೇ? ಆದ್ದರಿಂದ ಉಳಿದ ಏಳು ದಿವಸಗಳನ್ನು ನಿಶ್ಚಿಂತೆಯಿಂದ ಕಳೆದನು.

ಈ ಮಧ್ಯದಲ್ಲಿ ಒಂದು ಸಂಗತಿ ನಡೆಯಿತು. ರಮಾನಂದನ ಶಾಲೆಯ ಹೆಡ್‌ಮಾಸ್ತರರು ತನ್ನ ಮಗಳ ಮದುವೆಗೆ ರಮಾನಂದನನ್ನು ಆಮಂತ್ರಿಸಲಿಕ್ಕೆಂದು ಅವನ ಮನೆಗೆ ಬಂದರು. ಅವರು ಮದುವೆಯ ವೆಚ್ಚಕ್ಕಾಗಿ, ತನ್ನ ಆಸ್ತಿ ಜವಾಬ್ದಾರಿಯ ಮೇಲೆ ೭೫—೦—೦ ರೂಪಾಯಿಗಳನ್ನು ಕೊಡಬೇಕೆಂದು ಒಮ್ಮೆ ರಮಾನಂದನೊಡನೆ ಕೇಳಿದ್ದರು. ಮದುವೆಯ ದಿನ ಕೂಡಿದ ಹಣದಿಂದಲೇ ಅದನ್ನು ಹಿಂತೆರುವೆನೆಂದೂ ಹೇಳಿದ್ದರು. ಆದರೆ, ರಮಾನಂದನ ಕೈಯಲ್ಲಿ ಆಗ ಹಣವಿದ್ದಿಲ್ಲ. ಈಗ ಮನೆಗೆ ಬಂದವರೊಡನೆ ಕೇಳಿದನು—'ಅಯ್ಯಾ, ನಿಮಗೆ ಹಣವು ದೊರೆಯಿತೆ?' ಹೆಡ್‌ಮಾಸ್ತರರು—'ಇಲ್ಲ; ಒಬ್ಬರು ಕೊಡುತ್ತೇನೆಂದು ಹೇಳಿದ್ದರಷ್ಟೆ. ಕೊಟ್ಟರಾಯಿತು. ಇಲ್ಲದಿದ್ದರೆ ನನ್ನ ಕೈಕಟ್ಟಿದಂತಾಗಬಹುದು.'

ರಮಾನಂದ:—'ನನ್ನನ್ನು ಜೈಲಿಗೆ ಕಳುಹಿಸಬೇಕೆಂದು ರಾಮ ಭಟ್ಟರು ದಾವೆ ಹೂಡಿ ಡಿಕ್ರಿ ಪಡಕೊಂಡಿದ್ದಾರೆ. ಅದನ್ನು ಕಟ್ಟಲಿಕ್ಕೆ ಇನ್ನು ನಾಲ್ಕು ದಿನಗಳ ಅವಧಿಯಿದೆಯಷ್ಟೆ. ಹೆಂಡತಿಯ ಒಡವೆಗಳನ್ನು ಒತ್ತೆಯಿಟ್ಟು ಬೇಂಕಿನಿಂದ ಹಣ ಸಾಲ ತೆಗೆದುಕೊಳ್ಳುತ್ತೇನೆ. ನಿಮಗೂ ಬೇಕೆಂದಿದ್ದರೆ ಸ್ವಲ್ಪ ಹೆಚ್ಚು ತೆಗೆದುಕೊಂಡರಾಯಿತು. ಹಣಕ್ಕಾಗಿ ನೀವು ಇನ್ನು ಚಿಂತಿಸಬೇಡಿ, ನಾನಿದ್ದೇನೆ.'

ಹೆಡ್‌ಮಾಸ್ತರ್:—'ನೀವು ಯಾವಾಗ ಸಾಲ ತೆಗೆದುಕೊಳ್ಳುತ್ತೀರಿ?'

ರಮಾನರಿದ:—'ನಾಡದು ಶನಿವಾರವೇ! ನೀವು ಸಾಧಾರಣ ಬೆಳಿಗ್ಗೆ ಹತ್ತು ಗಂಟೆ ಸಮಯಕ್ಕೆ ಇಲ್ಲಿಗೆ ಹೊರಟು ಬನ್ನಿ. ಒಟ್ಟಿಗೆ ಬೇಂಕಿಗೆ ಹೋಗೋಣ. ಅಲ್ಲಿಯೇ ನಿಮಗೆ ಹಣವನ್ನು ಕೊಡುತ್ತೇನೆ.'

ಹೆಡ್‌ಮಾಸ್ತರರಿಗೆ ಸಂತೋಷವಾಯಿತು. ಸ್ವಲ್ಪ ಹೊತ್ತು ರಮಾನಂದನೊಡನೆ ಮಾತನಾಡಿ ತರುವಾಯ ಅವರು ಹೊರಟು ಹೋದರು.

ರಮಾನಂದನ ಮನೆಯಾಕೆ ತನ್ನ ಆಭರಣಗಳನ್ನು ಮದುವೆ ಕಳೆದ ಕೂಡಲೇ ತಂದು ಕೊಡಬೇಕೆಂದು ಕೆಲಸದವಳಿಗೆ ಹೇಳಿ ಕಳುಹಿಸಿದಳು. ಅದರಂತೆ ಎಲ್ಲಾ ಆಭರಣಗಳೂ ಗುರುವಾರ ದಿನವೇ ಅವಳಿಗೆ ಸಿಕ್ಕಿದವು.

ಶನಿವಾರವೂ ಬಂತು. ಹತ್ತು ಗಂಟೆಯಾದೊಡನೆ ರಮಾನಂದನು ಊಟ ತೀರಿಸಿ, ಹೊರಟು ಹೆಡ್‌ಮಾಸ್ತರರ ಆಗಮನವನ್ನು ನಿರೀಕ್ಷಿಸುತ್ತ ಕುಳಿತನು. ಅರ್ಧಗಂಟೆಯೊಳಗಾಗಿ ಅವರ ಸವಾರಿ ಬಂತು. ರಮಾನಂದನು ಹೆಂಡತಿಯ ಒಡವೆಗಳ ಕಟ್ಟನ್ನು ಹಿಡಿದುಕೊಂಡನು. ಇಬ್ಬರೂ ಮನೆಯಿಳಿದು ಹೊರಟರು.

ಅವರು ಮನೆ ಬಿಟ್ಟು ಅರ್ಧಮೈಲು ಬರುವಷ್ಟರಲ್ಲಿ, ದೂರದಲ್ಲಿ ಭಟ್ಟರು ಎದುರು ಬರುತ್ತಿರುವುದು ಕಾಣಿಸಿತು. ಕೆಲಸದ ಮೇಲೆ ಹೋಗುವಾಗ ಇಂತಹ ಅಧಮನ ಭೇಟಿಯಾಯಿತಲ್ಲಾ ಎಂದು ರಮಾನಂದನು ನೊಂದುಕೊಂಡನು. ಆದರೂ ಕೈಯಲ್ಲಿ ಒಡವೆಗಳಿವೆ. ಬೇಂಕಿನಲ್ಲಿ ಹಣವಿದೆ. ಅಂದ ಬಳಿಕ ಯಾರ ಮುಖಾವಲೋಕನದಿಂದಲೂ ತಾನು ಜೈಲಿಗೆ ಹೋಗುವ ಸಂದರ್ಭ ಬರಲಿಕ್ಕಿಲ್ಲವೆಂದು ರಮಾನಂದನಿಗೆ ಧೈರ್ಯವಿತ್ತು. ಆದ್ದರಿಂದಲೇ ಭಟ್ಟರು ಸಮೀಪಿಸುತ್ತಿರುವಾಗ ಅವರಿಗೆ ಕೇಳುವಂತೆ ಹೆಡ್‌ಮಾಸ್ತರರೊಡನೆ ಹೇಳಿದನು—'ನೋಡಿ. ಭೇತಾಳನಂತೆ ಬರುತ್ತಿದ್ದಾನೆ. ಈ ತೊತ್ತಿನ ಮಗನು ನನ್ನನ್ನು ಜೈಲಿಗೆ ಕಳುಹಿಸುವನಂತೆ. ಇವನಂಥವನಿಗೂ ಅಷ್ಟು ಪ್ರಾಯವಾಯಿತೇ? ಸತ್ತು ಹೋದ ಇವನ ತಂದೆ ಬಂದರೂ ನನ್ನನ್ನು ಒಂದು ದಿನ ಜೈಲಿಗೆ ಕಳುಹಿಸಲು ಸಾಧ್ಯವಾಗದು.'

ಇದನ್ನು ಕೇಳಿ, ಭಟ್ಟರ ಮುಖ ಕಪ್ಪಾಯಿತು. ಕಣ್ಣುಗಳು ಕೆಂಪೇರಿದವು. ಆದರೆ ಮಾಡುವುದೇನು? ರಮಾನಂದನೊಬ್ಬನಾಗುತಿದ್ದರೆ ಅವರಾದರೂ ಒಂದು ಕೈ ನೋಡುತಿದ್ದರು. ಅವನೊಟ್ಟಿಗೆ ಇನ್ನೊಬ್ಬರಿದ್ದುದರಿಂದ ಕಲಹಕ್ಕಿಳಿದರೆ ಕೈ ಸಾಗದೆಂದು ನಿಶ್ಚೈಸಿ, ಔಡುಗಚ್ಚುತ್ತಾ ಮುಂದೊತ್ತಿದರು.

ಇಬ್ಬರೂ ಭಟ್ಟರ ವಿಷಯ ಮಾತಾಡುತ್ತ ಹನ್ನೊಂದೂ ಕಾಲು ಗಂಟೆಗೆ ಸರಿಯಾಗಿ ಬೇಂಕಿಗೆ ಬಂದರು. ರಮಾನಂದನು ಅಧಿಕಾರಿಗಳೊಡನೆ ತನ್ನ ಸಂಗತಿಯನ್ನು ಹೇಳಿಕೊಂಡನು. ಅವರು ಸಾಲ ಕೊಡಲೊಪ್ಪಿದರು. ರಮಾನಂದನು ಒಡವೆಗಳನ್ನು ಅವರ ಕೈಗೆ ಕೊಟ್ಟನು. ಅವರು ಅವುಗಳನ್ನು ತೂಕ ಮಾಡಿದರು. ಒರೆಗಲ್ಲನ್ನೂ ಮುಚ್ಚೆಯನ್ನೂ ತಂದು ಬಣ್ಣ ನೋಡಿದರು. ಒಂದು ಒಡವೆಯನ್ನು ಕತ್ತರಿಯಿಂದ ತುಂಡು ಮಾಡಿದರು. ಬಳಿಕ ರಮಾನಂದನೊಡನೆ—'ಅಯ್ಯಾ, ಈ ಒಡವೆಗಳನ್ನು ಒಟ್ಟಿಗೆ ಎಷ್ಟು ಪವನಿಗೆ ಮಾಡಿಸಿದ್ದು?' ಎಂದು ಕೇಳಿದರು.

'ಇಪ್ಪತ್ತಮೂರು ಪವನುಗಳಿಗೆ, ಸ್ವಾಮೀ!'

'ಮಾಡಿಸಿ ಎಷ್ಟು ಕಾಲವಾಯಿತು?'

'ಎರಡು ವರ್ಷವಾಯಿತಷ್ಟೆ.'

'ಈಗ ನೀವು ಎಷ್ಟು ರೂಪಾಯಿ ಬೇಕೆಂದಿರಿ?'

'ಇನ್ನೂರು, ಸ್ವಾಮೀ!' ಅಧಿಕಾರಿಯು ನಗುತ್ತ 'ಇದಕ್ಕೇನಾದರೂ ಹೆಚ್ಚೆಂದರೆ ಎಂಟಾಣೆ ಕೊಡಬಹುದು.' ಎಂದನು.

ರಮಾನಂದನು ಗಾಬರಿಗೊಂಡು ಅದೇಕೆಂದು ಕೇಳಿದನು. ಅಧಿಕಾರಿಯು ಪುನಃ ನಕ್ಕನು.

'ನಮ್ಮಲ್ಲಿ ತಾಮ್ರದ ಒಡವೆಗಳ ಮೇಲೆ ಹಣಕೊಡುವ ಪದ್ಧತಿಯೇ ಇಲ್ಲ. ನಮ್ಮನ್ನು ಪರೀಕ್ಷಿಸಲೆಂದು ಈ ಒಡವೆಗಳನ್ನು ತಂದಿರುವಿರೊ?'

ರಮಾನಂದನು ಒಡವೆಗಳನ್ನು ತೆಗೆದುಕೊಂಡು ನೋಡಿದನು. ಎಲ್ಲವೂ ತಾಮ್ರಕ್ಕೆ ಒಪ್ಪಕೊಟ್ಟ ಒಡವೆಗಳೇ ಆಗಿದ್ದವು!

DIAMONDSI DIAMONDSI
BEST BRILLIANCYI

K. R. K. SHET,
Near Mission High School, MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್‌ಸ್ಟೆಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

**ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ
ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.**

ನಮ್ಮ ಒಂದು ಬ್ರಾಂಚು ಸದ್ಯದಲ್ಲೆ ಹಂಪನಕಟ್ಟೆಯಲ್ಲಿ
ತೆರೆಯಲಾಗುವುದು.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶ್ಶನ್ ಹೈ ಸ್ಕೂಲ್ ಬಳಿ, ಮಂಗಳೂರು.

The United India Life Assurance Co., Ltd.

Head Office: MADRAS. — ESTABLISHED: 1906. — Branch for Karnatak: UDIPI.

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

For particulars apply to:—

M. K. SRINIVASAN, B. A., B. L.,
Managing Director.

OR

PANGALKAR BROTHERS,
DISTRICT & GENERAL AGENTS:
KODIALBAIL, MANGALORE.

ಈಸ್ಟ್ ಎಂಡ್ ವೆಸ್ಟ್

ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

1913.

ಕಂದ ಪದ್ಯ.

ಗಳಿಸಿದ ಧನವನು ಮಾನವ ।
ರುಳಿಸುವಂತೆ ಭದ್ರದ ವಸ್ತು ದೊರಕಿತು ನಿಮಗೆ ।
ತಲೆಯಾಂತರ ನಿಮ್ಮವರ ।
ಪಲವಿಧ ರಕ್ಷಿಪುದುತ್ತಮದೀ ಕಂಪೆನಿಯೂ ॥ ೧ ॥
ತೆರುವ ಹಣವು ಪ್ರೀಮಿಯುಮಿನ ।
ಎರಡೂವರೆಯುಂತೊಳದು ವರುಷಕೆ ಶೇಕಡಕೆ ॥
ದರ ತಗ್ಗಿಸಿದರು ಮರೆಯದೆ ।
ಪರಮಾಪ್ತರು ವಿಮಾದಾರರಾಗಿರಿ ಮುದದಿ ॥ ೨ ॥
ಪೂರ ಜೀವಮಾನದ ವಿಮೆ ।
ಕಾರಣದುಂಬಳಿ ವಿಮೆಗಳ ಲಾಭವು ಪದಿನೈದ ॥
ಸೇರಿಸಿ ಧನವನು ಕೊಡುವೆವು ।
ಪೂರಿತ ಸಂಗತಿ ತಿಳಿಯಿರಿ ವಿಳಾಸಕೆ ಬರೆದು ॥ ೩ ॥
ಕಡು ಸಾಹಸದಿಂ ಸಿರಿಯುತ ।
ಪಡುಬಿದರೆ ಸಹೋದರರೆನ್ನುವ ನವತರುಣರು ॥
ಬಿಡದೀ ಕಂಪೆನಿಯೊಳು ಬಲು ।
ದುಡಿಯುತ ಪ್ರಾಮುಖ್ಯದ ಕೆಲಸವನು ವಹಿಸಿ ದರು॥೪॥

ಕಂಪೆನಿಯ ವಿಳಾಸ:—

ಪಡುಬಿದ್ರಿ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಕರ್ಣಾಟಕ ಮತ್ತು ಮಹಾರಾಷ್ಟ್ರ
40, ನಾರಾಯಣಲಾಲ್ ಬನ್ಸಿಲಾಲ್ ಭವನ,
ಬೆಲಾಸಿಸ್ ರೋಡ್,
ಮುಂಬಯಿ ನಂಬ್ರ 8.

ಉನ್ಮಾದ ರೋಗಕ್ಕೆ

ಅತ್ಯುತ್ತಮ ಔಷಧ.

(ಹುಚ್ಚು ರೋಗಕ್ಕೆ ಕೈಕಂಡ ಮದ್ದು).

ರೋಗವು ಎಷ್ಟೇ ಘೋರವಾಗಿರಲಿ, ಎಷ್ಟೇ ಹಳೆಯದಾಗಿರಲಿ, ನಮ್ಮ ಔಷಧದ ಉಪಯೋಗದಿಂದ **ಖಂಡಿತವಾಗಿ ಗುಣವಾಗುವುದು.** ಒಂದೇ ವಾರದ ಉಪಯೋಗದಿಂದ ರೋಗವು ಹಿಮ್ಮೆಟ್ಟುವುದು. ಅಪಸ್ಮಾರ, ಹಿಸ್ಟೀರಿಯಗಳೂ ಶಾಂತಿ ಹೊಂದುವುವು.

ವಾರದ ಔಷಧಕ್ಕೆ ಕ್ರಯ ರೂ. 3—8—0.

ಮಾಳ ನಾರಾಯಣ ಭಟ್ಟ, ವೈದ್ಯ,
'ಸಿದ್ಧೌಷಧ ಭವನ', ಪಡ್ನೂರು ಗ್ರಾಮ,
ಪೋಸ್ಟು ವಿಟ್ಲ, ದ. ಕನ್ನಡ.

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಮರಾಠಿ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಚೀಜುಗಳ ಗ್ರಾಮೋಫೋನಿನಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.
ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೨ ಆಣೆ.
ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

S. V. PHATAK.
Fort, MIRAJ. (S.M.C.

JAYA LAXMI BANK, LTD.,
MANGALORE.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್.,
ಮಂಗಳೂರು.

ಶಾಖೆಗಳು:—ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರೆಟರಿ.

ಹೊಸ AMERICAN EVEREADY

TRADE MARK



ಅಮೇರಿಕನ್ ಎವರೆಡಿ
ಸರ್ವಿಸ್ ಲ್ಯಾಂಪಿನ

ಮುಂಬತ್ತಿಯ ಬೆಳಕಿನ ಲಕ್ಷಣವನ್ನು ಒಳಗೊಂಡ ಫೋಕಸಿಂಗ್ ಫ್ಲಾಶ್ ಲ್ಯಾಟುಗಳು.

**ಕಡಿಮೆ ಕ್ರಯ
ಉಚ್ಚ ತರಗತಿ.**

**ಬಾಳಿಕೆಯುದು
ಅಂದವಾದುದು
ಮಿತವ್ಯಯದ್ದು.**

ಕಾರಖಾನೆಯ ಪ್ರತಿನಿಧಿಗಳು: ಡಾಜ್ ಎಂಡ್ ಸಯ್ಮೋರ್ ಲಿಮಿಟೆಡ್ ಕಲ್ಕತ್ತಾ, ಬೊಂಬಾಯಿ, ಮದ್ರಾಸ್, ಕರಾಚಿ, ಲಾಹೋರ್, ಡೆಹಲಿ.

H65

ಯು. ಎಸ್. ಎ.ಯಲ್ಲಿ ತಯಾರಿಸಲ್ಪಟ್ಟುದು.

REPUTATION.

A Bank's reputation is not gained from the magnificence of its building nor from the elegance of its glittering fixtures.

True reputation is gained only through public knowledge of the high character and ability of its management and often high ideals of service to the community. For about a decade the Central Bank has enjoyed a reputation for efficient management, sound banking principles and careful yet liberal policies.

To maintain this reputation every effort is made to give to all transactions large or small a sympathetic consideration and extend the most liberal courtesies consistent with sound banking practice.

The entire facilities of the Central Bank are yours to command.

THE CENTRAL BANK LIMITED,

(INCORPORATED IN TRAVANCORE)

Bunder Road, MANGALORE.

KOHINOOR
EAU DE COLOGNE
PREPARED BY
JASHINGLAL MOTILAL
THE KOHINOOR WORKS
PERFUMERS

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೮೭೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. **ಮಸ್ಕ್ ಲವೆಂಡರ್**-ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾದ ಸೆಂಟು.

೩. **ಅನಂಸ್ ಸ್ನೋ**—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. **ಬ್ರಿಲಿಯಂಟೀಯಿನ್**—ಕೂದಲಿನ ಸೌಂದರ್ಯಕ್ಕೋಸ್ಕರ ಅರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. **ಬ್ರಾಹ್ಮೀ ತೈಲ**—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದಿರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳಸುತ್ತದೆ.

೬. **ದ್ರಾಕ್ಷಾಸವ**-ಮಂದಾಗ್ನಿ, ಅಜೀರ್ಣ, ಶ್ವಾಸ, ದಮ, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. **ಆರಾಮೋತಿಹಾಲ್**—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. **ವೆಜಿಟೇಬಲ್ ಪೈನ್-ಹಂಟರ್**-ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳಿಗೋಸ್ಕರ ಕುಡಿಯತಕ್ಕ ಔಷಧ.

೯. **ರತ್ನಾಂಜನ ಪೇನ್ ಬಾಮ್**-ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ

೧೦. **ಕ್ರೀಸೋರಿಂಗಾ**—ಕಪ್ಪು ಅಥವಾ ಕೆಂಪು ಹುಳುಕಡ್ಡಿಯನ್ನು ನಿರ್ಮೂಲವಮಾಡುತ್ತೆ.

೧೧. **ಓಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್**— ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

DRAKSHASAV
KOHINOOR WORKS BOMBAY

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

ದಾಸಯ್ಯನ ಜೋಳಿಗೆ

ಒಂದು ವಿಶೇಷ ಸಂಗತಿ. ಯಾರಾದರೂ ಜಾತಿ ಕೆಡುತ್ತೇವೆಂದರೆ ಸರಿ; ನಮ್ಮ ಜಾತಿಗೆ ಬರಬೇಕು, ನಮ್ಮ ಜಾತಿಗೆ ಬರಬೇಕು. ನಮ್ಮಲ್ಲಿ ನಿಮಗೆ ಸತ್ಯವು ಸಿಕ್ಕುತ್ತದೆ. ನಮ್ಮಲ್ಲಿ ನಿಮಗೆ ಸ್ವತಂತ್ರ ಸಿಕ್ಕುತ್ತದೆಂದು ಇತರ ಮತದವರು ಹೊರಟರೂ ಅನ್ನಿ. ಡಾ॥ ಅಂಬೇಡ್ಕರರು 'ಹಿಂದೂಮತ ಬೇಡ. ನನಗೆ ಮತಾಂತರ ಹೊಂದಲು ಅಪೇಕ್ಷೆ ಇದೆ' ಎಂದ ಕೂಡಲೆ ನಮ್ಮ ಜಾತಿಗೆ ಬನ್ನಿ ಎಂದು ಮುಸಲರೂ, ನಮ್ಮ ಜಾತಿಗೆ ಬನ್ನಿ ಎಂದು ಬುದ್ಧರೂ, ನಮ್ಮ ಜಾತಿಗೆ ಬನ್ನಿ ಎಂದು ಇತರರೂ ವೀಳ್ಯವನ್ನು ಕೊಟ್ಟರು.

ಹೋಗಬೇಡಿರೆಂದು ಹಿಂದುಗಳೂ, ಸ್ವಾಮಿಗಳೂ ಕೇಳಿಕೊಂಡರು. ಅವರು ಹೋಗಲಿಲ್ಲ; ಅದಾಗಲಿಲ್ಲ. 'ಹಿಂದೂಗಳು ತಮ್ಮ ಹರಿಜನರಿಗೆ ಮೇಲ್ಮೆಯನ್ನು ಮಾಡದಿದ್ದರೆ ಬೇರೆ ಜಾತಿಗೆ ಹೋಗುವುದು ಲೇಸೆ'ಂದು ಹೇಳಿದ್ದು ಬಹುಶಃ ಹಿಂದೂಗಳ ಮನಸ್ಸನ್ನು ಪರೀಕ್ಷಿಸುವುದಕ್ಕಿರಬಹುದು. ಹಾಗೆಂದರೆ ಹಿಂದೂಗಳು ಸಹಾನುಭೂತಿ ತೋರಿಸಬಹುದೂ ಎಂತ ಇರಬಹುದು. ಅದಿರಲಿ! ವಿದ್ಯಾವಂತರು ಜಾತಿ ಕೆಟ್ಟರೆ ಅದರಲ್ಲಿ ವಿಶೇಷವೇನೂ ಇಲ್ಲ. ಅವರನ್ನು ಹಿಂಬಾಲಿಸಿದ ಅವಿದ್ಯಾವಂತರು ಜಾತಿ ಕೆಟ್ಟರೆ ಅವರಿಗೆ ಗುಣವಾಗುವುದೇನು?

ಹರಿಜನರು ತಿಂದು ಕುಡಿಯುವುದನ್ನು ಬಿಡಬೇಕು. ಅಸಹ್ಯವಾದ ಕೆಲಸಗಳನ್ನು ಬಿಡಬೇಕು. ಆಚಾರವ್ಯವಹಾರಗಳಲ್ಲಿ ಉತ್ತಮ ರೀತಿ ವರ್ತಿಸಬೇಕು. ಆಗ್ಗೆ ಸಮಾಜದಲ್ಲಿ ಬೆರೆಯಲು ಅವಕಾಶವುಂಟು. ಮೊನ್ನೆ ಸಿನಿಮಾದಲ್ಲಿ ಹರಿಜನ ವಿದ್ಯಾರ್ಥಿಗಳು ದಾಸಯ್ಯನ ಸುತ್ತಮುತ್ತಲೂ ತುಂಬಿದ್ದರು. ಹೋಟಲಲ್ಲಿ ತಿಂದು ಕೈತೊಳೆದರು. ನಾಟಕದಲ್ಲಿ ಮಗ್ಗಲಲ್ಲಿ ಕುಳಿತು ಮಾತನಾಡಿದರು. ಅವರ ಉಡಿಗೆತೊಡಿಗೆಗಳಿಂದ ಅವರು ಹರಿಜನರೆಂದು ಹೇಳಲಿಕ್ಕೆ ಆಗಲಿಲ್ಲ. ಹೀಗೆ ಮುಂದುವರಿದ ಹಾಗೆಲ್ಲಾ ಹರಿಜನರಿಗೆ ಅವಕಾಶ ತಾನಾಗಿ ಸಿಕ್ಕುವುದು. ಅದಕ್ಕೆ ಜಾತಿಯನ್ನೆ ಬಿಡಬೇಕೆ?

ನಮ್ಮಲ್ಲಿ ಅಂಥ ಮಾತು ಬಣಜಾರರಲ್ಲಿ ಹುಟ್ಟಿದೆ. ಕಡೂರಲ್ಲಿ ಲಿಂಗಾಯಿತರು ದೇವರ ಗುಡಿಗೆ ಬಿಡಲಿಲ್ಲವೆಂದು ಮುಸಲ್ಮಾನರಾಗಬೇಕೆಂದು ಕೆಲವು ಬಣಜಾರರು ಹೊರಟಿದ್ದಾರಂತೆ. ಇದು ವೃಥಾ ಜಿಗುಪ್ಸೆಯ ಮಾತು ಮತ್ತು ಪ್ರಯತ್ನ. ದೇವರ ಪೂಜೆ ಎಂಬ ಹಕ್ಕು ಒಂದೇ ಜಾತಿಯವರಿಗೆ ಎಲ್ಲಿಯವರೆಗೆ ಬರುತ್ತದೊ ಅಲ್ಲಿಯ ವರೆಗೆ ಇಂಥ ತೊಂದರೆಗಳು ತಪ್ಪುವುದಿಲ್ಲ. ಅವರು ಒಳಗೆ ಬಿಡದಿದ್ದರೆ ಇವರು ಜಾತಿ ಬಿಡಬೇಕೆ? ಇವರೇ ಒಂದು ಶಿವಾಲಯವನ್ನು ನಿರ್ಮಿಸಿಕೊಂಡರೆ, ತಮ್ಮಲ್ಲೆ ಒಬ್ಬರು ಪೂಜೆಗೆ ನಿಂತರೆ ಆಯಿತು. ಇಷ್ಟು ಮಾಡಲಾರದ ಇವರು ಜಾತಿ ಕೆಟ್ಟರೆ ಏನಾಯಿತು?

ಒಂದು ವೇಳೆ ಮುಸಲ್ಮಾನರಾದರೆ ಆದದ್ದೇನು? ತಲೆಗೆ ಟೋಪಿ, ಕಾಲಿಗೆ ಷರಾಯಿ, ಪಾದಕ್ಕೆ ಚಡಾವು. ಹೆಂಗಸರಿಗೆ ಇದ್ದ ಸ್ವತಂತ್ರವೂ ಹೋಗಿ ಘೋಷಾ ಬರುವುದು. ಆಗ್ಗೆ ಲಿಂಗಾಯತರ ಗುಡಿಗೆ ಬಂದಂತಾಯಿತೇನಪ್ಪ? ಇಲ್ಲ ಸ್ವರ್ಗಕ್ಕೇರಿದಂತಾಯಿತೊ? ಅದೇಕೆ? ಬಣಜಾರರಾಗಿಯೇ ಇದ್ದು ಮುಸಲ್ಮಾನ್‌ರ ದೇವರನ್ನೆ ಆರಾಧಿಸಬಹುದಲ್ಲ? ಹಿಂದೂಗಳು ಬಾಬಯ್ಯನ ಪೂಜೆ ಮಾಡುವುದಿಲ್ಲವೆ? ಗುಡಿಯೊಳಗೆ ಲಿಂಗವಿರುವುದೆಂದು ನಂಬಿ ಹೋರಾಟ ಮಾಡುವುದು ಬಣಜಾರರಿಗೆ ಒಳ್ಳೇದಲ್ಲ. ತಮ್ಮಲ್ಲೇ ಅಡಗಿರುವ ಲಿಂಗವನ್ನು ಪೂಜೆ ಮಾಡಬಾರದೆ?

ಸರ್ಕಾರದವರು ತಾವು ಹೇಗೇ ಆಚರಿಸಲಿ, ಪ್ರಜಾಭಿಪ್ರಾಯಕ್ಕೆ ಮನ್ನಣೆಕೊಡುವರು. ಅದಕ್ಕಾಗಿ ಮಹಾಜನರು ಸರ್ಕಾರದವರಿಗೆ ಕೃತಜ್ಞರಾಗಿರಬೇಕು. ಸರ್ಕಾರದವರೂ ಅಷ್ಟೆ. ಮಹಾಜನರು, ಅದರಲ್ಲಿ ಪತ್ರಿಕಾಕರ್ತರು, ಸರ್ಕಾರಕ್ಕೆ ಬೆಂಬಲವಾಗಿ ನಿಂತು ರಾಜ್ಯಭಾರದಲ್ಲಿ ಶಾಂತಿಯನ್ನು ಹೆಚ್ಚಿಸುವುದರ ಸಲುವಾಗಿ ಸರ್ಕಾರದವರು ಬಹಳ ಸಂತೋಷ ಪಡಬೇಕು. ಇದೇ ಪರಸ್ಪರ ಸಹಾಯ. ಪರಸ್ಪರ ಸೌಹಾರ್ದ.

ನಮ್ಮ ಲೆ॥ ಕೌನ್ಸಿಲ್‌ನಲ್ಲಿ ವ್ಯಭಿಚಾರ ನಿರೋಧ ಶಾಸನವನ್ನು ತರಲು ಪ್ರಯತ್ನ ನಡೆದು ಮಾತುಕತೆಗಳಾಗುತ್ತಿವೆ. ಮೈಸೂರಲ್ಲಿ ಅಂಥ ಸಂಸ್ಥೆಗಳು ಹೆಚ್ಚಾಗಿಲ್ಲವೆಂದೂ, ಈಗ ಅಂಥ ಶಾಸನವನ್ನು ಮಾಡುವ ಆವಶ್ಯಕತೆ ಇಲ್ಲವೆಂದೂ ಕೆಲವರ ವಾದ. ಮತ್ತೆ ಕೆಲವರು ಅನೀತಿಕಾರ್ಯಗಳು ಹೆಚ್ಚಿ ರೋಗಗಳು ಹರಡುತ್ತಿರುವುದೆಂದೂ ಅದನ್ನು ತಪ್ಪಿಸುವುದು ಅತ್ಯವಶ್ಯಕವೆಂದೂ ಹೇಳುವರು. ಆ ಮಾತುಗಳು ಹಾಗಿರಲಿ.

ವ್ಯಭಿಚಾರ ಮಾಡುವುದು ಪಾಪ. ಅದನ್ನು ಎಲ್ಲರೂ ಬಲ್ಲರು. ಹಾಗೆ ಹೇಳುವವರು ಎಷ್ಟೋ ಜನ ವ್ಯಭಿಚಾರಿಗಳಾಗಿರುತ್ತಾರೆ. ಹೇಳುವುದು ಹಾಗಿದ್ದರೂ ಮಾಡುವದು ಮಾತ್ರ ಬಿಟ್ಟಿಲ್ಲ. ಕಾಫಿ ಕುಡಿಯಬಾರದೆಂದು ಹೇಳುವ ದೊಡ್ಡ ಮನುಷ್ಯರು ಬಿಡದೇ ಕಾಫಿ ಕುಡಿಯುವ ಹಾಗೆ! ಮೈಸೂರಲ್ಲಿ ಸುಮಾರು ಅರ್ಧ ಶತಮಾನದಿಂದ ಹಿಂದೆ ವ್ಯಭಿಚಾರ ಮಾಡದವರು ದೊಡ್ಡ ಮನುಷ್ಯರೇ ಅಲ್ಲವೆಂಬ ಪ್ರತೀತಿ ಇತ್ತು. ಸಾಹುಕಾರರೂ, ಹಣವಂತರೂ, ಅಧಿಕಾರಿಗಳೂ ದೇವದಾಸಿಯರ ಸಂಪರ್ಕದಲ್ಲಿದ್ದಷ್ಟು ಮರ್ಯಾದಸ್ತರೆಂದೇ ಲಿಸ್ಟಿನಲ್ಲಿ ದಾಖಲಾಗುತ್ತಿದ್ದರು.

ಅಷ್ಟೇಕೆ? ಸ್ವರ್ಗದಲ್ಲಿ ಕೂಡ ವ್ಯಭಿಚಾರವುಂಟಲ್ಲವೆ? ರಂಭಾದಿ ಅಪ್ಸರೆಯರ ಒಳಿ ಭೂಲೋಕದಿಂದ ಹೋದವರು ಓಡಾಡುವುದಿಲ್ಲವೆ? ದೇವಲೋಕದಲ್ಲೆ ಹಾಗಿರುವಾಗ ಭೂಲೋಕದಲ್ಲಿ ಇದರ ಅಡಚನೆ ಏಕೆ? ವ್ಯಭಿಚಾರ ಗೃಹಗಳು ಇಲ್ಲವೆಂದು ಮಾಡಿದ ಮಾತ್ರಕ್ಕೇ ಆ ವೃತ್ತಿಯು ತಪ್ಪೀತೆ? ಆ ವೃತ್ತಿಯನ್ನು ತಪ್ಪಿಸಲಿಕ್ಕೆ ಶಾಸನ ಮಾಡುವುದು ಸುಲಭವೆ? ಗೃಹಗಳನ್ನು ಬೇಕಾದರೆ ನಿರ್ಮೂಲ ಮಾಡಬಹುದು. ಆ ವೃತ್ತಿಯನ್ನು ತಪ್ಪಿಸುವುದು ಅಸಾಧ್ಯ.

ಶಾಸನವೇನೋ ಉತ್ತಮವಾದ್ದು. ಅದನ್ನು ಜಾರಿ
ತರುವುದರಲ್ಲಿ ಮುಂದೆ ಬಹಳ ತೊಡಕುಗಳುಂಟು. ಮೊ
ಮೊದಲು ಕೆಲವರಿಗೆ ಶಿಕ್ಷೆಯೂ ಆಗಬಹುದು. ವ್ಯಭಿಚಾ
ಗಳು ತಮ್ಮ ವೃತ್ತಿ ಮಾತ್ರ ಬಿಡಲಾರರು. ವ್ಯಭಿಚಾರ ಮಾಡು
ಗಂಡುಸರಿಗೂ ಶಿಕ್ಷೆ ವಿಧಿಸಿ ಶಾಸನ ಮಾಡಬೇಕು. ಶಾಸನ
ಮಂಜೂರಾದರೆ ಗಂಡುಸರ ವಿಚಾರದಲ್ಲಿಯೂ ಒಂದು ಲೈನ
ಕಾಣಿಸುವುದು ಒಳ್ಳೆಯದು.

ಮತ್ತೊಂದು ವಿಚಾರ. ವ್ಯಭಿಚಾರಗಳಲ್ಲಿ ಎರಡು ವಿಧ
ಗಂಡಸರ ವ್ಯಭಿಚಾರ–ಹೆಂಗಸರ ವ್ಯಭಿಚಾರ. ಹೆಂಗಸರನ
ವ್ಯಭಿಚಾರಕ್ಕಾಗಿ ಇಟ್ಟುಕೊಳ್ಳುವ ಮನೆ, ಗಂಡುಸರನ್ನು ವ್ಯ
ಚಾರಕ್ಕಾಗಿಟ್ಟುಕೊಳ್ಳುವ ಮನೆ. ಈ ಶಾಸನವಾದರೆ ಮುಂ
ಗಂಡುಸರ ವ್ಯಭಿಚಾರದ ಮನೆಗಳು ಹೆಚ್ಚಬಹುದು. ಅಲ್ಲಿಗೆ
ಹೆಂಗಸರು ಹೋಗಿಬರುವಂತಾಗಬಹುದು. ಎಚ್ಚರಿಕೆ ಇರ
ಸ್ವಾಮಿ,

ಮಿ॥ ದಾಸಯ್ಯ.

AN OPEN LETTER TO THE READERS OF "KANTEERAVA"

Dear Mr. Reader,

Will it cause you any surprise if I inform you that THE GUARDIAN OF INDIA INSURANCE CO., LTD., which has done a record business of about 37 Lakhs within an year of its start, has a most attractive 'Depositors Insurance Scheme' which enables every man or woman between the ages 18 and 50 to take out an Endowment Policy for 15, 20 & 25 years WITH PROFITS through The Travancore National Bank Ltd., The Canara Banking Corporation Udipi Ltd., or any other good Banks in South Kanara.

If you have an account with any of the Banks mentioned above it is high time for you to take out a policy under the above scheme at once, and the advantages you get thereby are many.

You pay the LOWEST PREMIUM of all the Insurance Companies in India. You get interest on your account from the Bank. You are saved the trouble of remitting your premium. The premium rate under this scheme is about Rs. 5 less than our standard premiums.

All these advantages coupled with the fact that we have done a record business already; must induce you and your friends to write to the undersigned for full particulars.

Kindly note that the Directorate of THE GUARDIAN consists of, among others, Heads of two of the foremost Banks in South India. A post-card from you to the undersigned will bring you back a handsome Book-let of The Depositors Insurance Scheme.

Thanking you in advance, I remain,

very truly yours,

V. D. HERANJAL,
Dt. Organiser, Udipi.

ಎಷ್ಟೊಂದು ಆಕರ್ಷಕವಾಗಿಯೂ, ಸೊಗಸಾಗಿಯೂ, ಅನುಪಮವಾಗಿಯೂ ಈ 'ವೆಸ್ಟ್ ಎಂಡ್' ವಾಚುಗಳಿವೆ!

ಮತ್ತು ಈಗಿನ ಅವುಗಳ ಧಾರಾಳವಾಗಿ ತಗ್ಗಿದ ಕ್ರಯಗಳಲ್ಲಾದರೂ ಅವುಗಳ ಬೆಲೆಯೇನು!!

ಮೇಲಿನದಕ್ಕೂ ಕೆಳಗಿನದಕ್ಕೂ ಒಂದೇ ಕ್ರಯ.

SQUARE "D" (Middle)

9 ಕ್ಯಾರಟ್ ಭಂಗಾರದಕ್ಕೆ	.	ರೂ.	65
14 ಕ್ಯಾರಟ್ ಭಂಗಾರದಕ್ಕೆ	.	,,	82
18 ಕ್ಯಾರಟ್ ಭಂಗಾರದಕ್ಕೆ	.	,,	100

SQUARE "B" AND SQUARE "F"

ಸ್ಟರ್ಲಿಂಗ್ ಬೆಳ್ಳಿಯದಕ್ಕೆ	.	ರೂ.	32
ರೋಲ್ಡ್‌ಗೋಲ್ಡಿನದಕ್ಕೆ	.	,,	35
9 ಕ್ಯಾರಟ್ ಭಂಗಾರದಕ್ಕೆ	.	,,	60
18 ಕ್ಯಾರಟ್ ಭಂಗಾರದಕ್ಕೆ	.	,,	90

ದೊಡ್ಡದಾದ ಉಚಿತ ಕೆಟಲಾಗಿಗೆ ಬರೆಯಿರಿ.

ವೆಸ್ಟ್ ಎಂಡ್ ವಾಚ್ ಕೊ., ಮುಂಬಾಯಿ ಮತ್ತು ಕಲ್ಕತ್ತಾ.

WEST END WATCH Co.
BOMBAY 97 CALCUTTA

ವೆಂಕಟಗಿರಿ ಮಹಾತ್ಮೆ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಬ್ಲಾಕುಗಳಿಂದ ಕೂಡಿದೆ.

ಮುದ್ದಾದ ಮುದ್ರಣ.

ಬೆಲೆ ರೂಪಾಯಿ ೧—೮—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುದಿನ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮುಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.



ಸಚಿತ್ರ ಕ್ಯಾಟಲಾಗ್ ಪುಕಟ್ಟೆ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇರಾದ ಸೈಜನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.



ಯಜಮಾನ್ ಅಂಡ್ ಸನ್
ರಬ್ಬರ್ ಮೊಹರು ಫ್ಯಾಕ್ಟರಿ
ಫೋಟೋ, ಲೈನ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಆ.ರ್. ಮಾರ್ಟಿನ್ಸ್‌ರ

ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸಿಟಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಈ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಸಿವಿಲ್ ಮತ್ತು ಮಿಲಿಟರಿ ಇಲಾಖೆಗೆ ಸೇರಿದ ಎಲ್ಲರಿಂದಲೂ ಹೊಗಳಲ್ಪಟ್ಟಿದೆ. ವೈದ್ಯರೂ ಪ್ರಶಂಸಿಸಿದ್ದಾರೆ. ಹೆಚ್ಚು ಮಾರಾಟವಾಗುತ್ತಿದೆ.

ಬೆಲೆ: ಸೀಸೆ ಒಂದಕ್ಕೆ ರೂ. 2—0—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೇಟಿನ ಎದುರು,
ಫೋರ್ಟ್, ಬೊಂಬಾಯಿ.

ಜೀರ್ಣಕಾರಿಯಾದ 'ಟಾನಿಕ್'

“ಅಲೆಂಬಿಕ್”

ದ್ರಾಕ್ಷಾಸವ

ದೊಡ್ಡ ಬಾಟಲಿಯೊಂದಿಗೆ ಕಪ್ಪೂ ಉಚಿತ.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—

K. R. GURU, *Managing Director.*

ಸ್ಥಾಪಿತವಾದುದು **ಶ್ರೀ ದುರ್ಗಾಪರಮೇಶ್ವರಿ** 1927ರಲ್ಲಿ!

ಮೋಟರ್ ಸರ್ವೀಸ್, ಮಂಗಳೂರು.

ನಮ್ಮ ಮೋಟಾರು ಬಸ್ಸುಗಳು ಕ್ರಮವಾಗಿ ಪ್ರತಿನಿತ್ಯವೂ ಮಂಗಳೂರಿಂದ ಮರವೂರು, ಬಜಪೆ, ಕಟೀಲ್, ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೂ; ಗುರುಪುರ, ಬಜಪೆ, ಕಟೀಲ್ ಮಾರ್ಗವಾಗಿ ಮೂಲ್ಕಿಗೂ; ಮರವೂರು, ಬಜಪೆ, ಕಟೀಲ್ ಮತ್ತು ಮುಂಡ್ಕೂರಿಗಾಗಿ ಬೆಳ್ಮಣ್ಣಿಗೂ; ಅಡ್ಯಾರ್, ಫರಂಗಿಪೇಟೆ ಮಾರ್ಗವಾಗಿ ಬಂಟ್ವಾಳಕ್ಕೂ; ಮೂಲ್ಕಿಯಿಂದ ಪಡುಬಿದ್ರೆ, ಬೆಳ್ಮಣ್ಣು, ಕಾರ್ಕಳಕ್ಕೂ ಕಾರ್ಕಳದಿಂದ ಬೆಳ್ಮಣ್ಣು, ಮಂಚಿಕಲ್ಲು ಮಾರ್ಗವಾಗಿ ಉಡುಪಿಗೂ ಚಲಾವಣೆಯಾಗುವುವು.

ನಮ್ಮ ಹೊಸ ಪ್ಲ್ಯಾನುಗಳು.

ಮೂಲ್ಕಿ—ಕಿನ್ನಿಗೋಳಿ—ಮೂಡಬಿದರೆ ಮಾರ್ಗವಾಗಿ ಕಾರ್ಕಳಕ್ಕೂ; ಕಾರ್ಕಳದಿಂದ ಸೀದಾ ಸೋಮೇಶ್ವರಕ್ಕೂ ಬೆಳಿಗ್ಗೆ ಮತ್ತೂ ಮಧ್ಯಾಹ್ನ ಎರಡು ಸರ್ವೀಸುಗಳು ಹೊಸದಾಗಿ ನಡೆಯುತ್ತಿವೆ. ಶಿವಮೊಗ್ಗಾ—ತೀರ್ಥಹಳ್ಳಿ—ಕೊಪ್ಪ—ಹರಿಹರ ಮೊದಲಾದ ಪ್ರದೇಶಗಳಿಗೆ ಹೋಗುವವರಿಗೆ ಇದರಿಂದ ತುಂಬ ಅನುಕೂಲ.

ವಿ. ಸೂ.—ಮಂಗಳೂರು, ಮೂಲ್ಕಿ, ಮಂಚಕಲ್, ಉಡ್ಪಿ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಹೊರಡುವ ಬೆಳಗಿನ ಮತ್ತೂ ಮಧ್ಯಾಹ್ನದ 'ಸರ್ವೀಸು'ಗಳು, ಸಮಯಕ್ಕೆ ಸರಿಯಾಗಿ ಸೋಮೇಶ್ವರಕ್ಕೆ ತಲುಪಿ, ಮೇಲಿನ ಬಸ್ಸು ಸರ್ವೀಸುಗಳಲ್ಲಿ ಕೂಡಲೇ ಪ್ರಯಾಣ ಮಾಡುವಂತೆ ಏರ್ಪಡಿಸಲಾಗಿದೆ.

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯೋದ್ದೇಶ! ಇದಕ್ಕಾಗಿಯೇ ಹೊಸ ಬಸ್ಸುಗಳು!

ಹೆಚ್ಚಿನ ಮಾಹಿತಿ ಈ ಸರ್ವೀಸಿನ ಏಜಂಟರುಗಳಿಂದ ತಿಳಿದುಕೊಳ್ಳಬಹುದು.

The Premier Bank of India, Ltd., Madras.

ದಿ

ಪ್ರೀಮಿಯರ್ ಬೇಂಕ್ ಆಫ್ ಇಂಡಿಯಾ ಲಿಮಿಟೆಡ್,

ನಂಬ್ರ 13, ತಂಬುಚೆಟ್ಟಿ ರಸ್ತೆ, ಮದರಾಸು.

ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ

6 ತಿಂಗಳಿಗೆ ಶೇಕಡಾ 4½.
12 ತಿಂಗಳಿಗೆ ಶೇಕಡಾ 5½.
24 ತಿಂಗಳಿಗೆ ಶೇಕಡಾ 6.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆದುಕೊಳ್ಳಬಹುದು.

S. V. RAO, D. Com.,
Managing Director.

MODERN PRINTING! AT MODERATE RATES!

CONSULT

The Saraswathi Printing Works, Limited,

CANTONMENT, MANGALORE.

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯ ಇತಿಹಾಸ.

(ಎಸ್. ಎ. ಇವರಿಂದ.)

ಈ ವಿಷಯವಾಗಿ ಹಲವು ಲೇಖನಗಳು ಇತ್ತೀಚೆಗೆ ನಮ್ಮ ಕನ್ನಡ ಪತ್ರಿಕೆಗಳಲ್ಲಿ ಬಂದಿವೆ. ಆದರೆ ಅವುಗಳೆಲ್ಲವೂ ಹೊರವಲಯವನ್ನು ಮಾತ್ರ ಸುಳಿದಾಡುವುದಲ್ಲದೆ ನಿಜಸ್ಥಿತಿಯನ್ನು ಹೊರಗೆಡಹಲಿಲ್ಲ. ಹೀಗೆ ಕೊಂಗ್ರೆಸ್ ಇತಿಹಾಸವನ್ನೂ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯನ್ನೂ ಜತೆಗೊಳಿಸುವಾಗ ಮಾತ್ರವೇ ಒಳಗಿನ ಗುಟ್ಟು ಬಯಲಾಗುತ್ತದೆ. ಕಳೆದ ಮುನ್ಸಿಪಲ್ ಚುನಾವಣೆಯ ಕಾಲದಲ್ಲಿ ಕೊಂಗ್ರೆಸ್ ಮುಖಂಡರು ಉಮೇದ್ವಾರರ ಕೂಟವನ್ನು ಜರುಗಿಸಿದಾಗ ಅನೇಕ ಉಮೇದ್ವಾರರು ‘ನಮಗೆ ಕೊಂಗ್ರೆಸಿನ ಮೇಲೆ ಅಭಿಮಾನವಿದೆ; ಆದರೆ ಕೊಂಗ್ರೆಸ್ ಕಡೆಯಿಂದ ನಮಗೆ ಉಮೇದ್ವಾರರಾಗಲು ಸಾಧ್ಯವಿಲ್ಲ’ವೆಂದು ಬಾಯಿಬಿಟ್ಟು ಹೇಳಿದರು. ಹೀಗಾಗಿ ಕೊಂಗ್ರೆಸು ಪಂಗಡದ ಹತಾಶರಾದವರೊಡನೆ ಹೀಗೆ ನುಡಿದವರಲ್ಲಿ ಡಾ। ವಿಠಲ ಶೆಟ್ಟರು ಒಬ್ಬರು. ಈ ಚುನಾವಣೆಯಲ್ಲಿ ಅವರೇ ಕೊಂಗ್ರೆಸಿನ ಮುಂದಾಳುಗಳು. ಶ್ರೀ. ಸತ್ಯಮೂರ್ತಿಗಳು ಮಂಗಳೂರಿಗೆ ಬಂದಾಗ ಮೈದಾನಿನಲ್ಲಿ ಜರಗಿದ ಸಭೆಗೆ ಇವರೇ ಅಧ್ಯಕ್ಷರು. ಮಂಗಳೂರಿನಿಂದ ಕೊಂಗ್ರೆಸಿನ ಪರವಾಗಿ ನಿಂತು ಅನಾಯಾಸವಾಗಿ ಗೆದ್ದವರು ಇವರು. ಹಾಗಿದ್ದರೆ ಒಂದೇ ವರ್ಷದೊಳಗೆ ತಮ್ಮ ಪರವಾಗಿ ೨೭ ಮೆಂಬರರನ್ನು ಆರಿಸುವಷ್ಟು ಶಕ್ತಿಯು ಕೊಂಗ್ರೆಸಿಗೆ ಹೇಗೆ ಬಂತು ಎಂಬುದು ತಿಳಿಯುವುದು ಆಗತ್ಯ. ಕೊಂಗ್ರೆಸು ತಂಡದವರಿಗೆ ಶ್ರೀ. ಎ. ಬಿ. ಶೆಟ್ರು ಬೇಕು, ಶ್ರೀ. ಎ. ಬಿ. ಶೆಟ್ರ ಚುನಾವಣೆಗೆ ಕೊಂಗ್ರೆಸಿನ ಸೋಗು ಬೇಕು, ದಿ. ಬ. ಮಹಾಬಲ ಹೆಗ್ಡೆಯರು ಸೋತು ಹೋಗಬೇಕು. ಇಷ್ಟು ಈ ಕೊಂಗ್ರೆಸಿನ ಧ್ಯೇಯಗಳಾಗಿದ್ದವು. ಹೀಗಾಗಿ ಈ ದೃಷ್ಟಿಯಿಂದ ಸಿವಿಕ್ ಬೋರ್ಡು ಎಂಬ ಒಂದು ನೂತನ ಸಂಸ್ಥೆಯು ಚುನಾವಣೆಯ ನಿರ್ಧಾರಕ್ಕಾಗಿ ಏರ್ಪಟ್ಟಿತು. ಅಷ್ಟರಲ್ಲಿಯೇ ಮೇಲಿನ ಮೂರು ಧ್ಯೇಯಗಳಿರುವ ಒಬ್ಬಿಬ್ಬರು ಬಂಟ ಮುಖಂಡರು ಕುಂದಾಪುರದಿಂದ ಕಾಸರಗೋಡು ವರೆಗೆ ದಿಗ್ವಿಜಯ ಮಾಡಿ ಇಂತಿಂಥವರೆ ಇಂತಿಂಥ ಸ್ಥಾನಗಳಲ್ಲಿ ಕೊಂಗ್ರೆಸಿನ ಪ್ರತಿನಿಧಿಗಳಾಗಿ ಆರಿಸಲ್ಪಡಬೇಕೆಂದು ಮನಗಂಡರು. ‘ಇಂತಿಂಥ ಸೀಟುಗಳೆ ಬಂಟರ ಸೀಟುಗಳೆಂದು ಇವರು ನಿರ್ಧಾರಮಾಡಿದರು! ‘ಕುತ್ತಿಗೆಯ ಹಾರ ಸುರಿದರೆ ಮಣಿಗಳು ಉಡಿಯಲ್ಲಿಯೇ ಬೀಳಬೇಕು,’ ಎಂಬುದು ಇವರ ಮುಖ್ಯ ತಾತ್ಪರ್ಯ. ಅಂದರೆ ಆದಷ್ಟು ಹೆಚ್ಚಿನ ಸೀಟುಗಳು ಬಂಟರ ಸಮಾಜದವರದಾಗಬೇಕು, ಅವುಗಳಲ್ಲಿ ಹೆಚ್ಚಿನವುಗಳು ಶ್ರೀ. ಎ. ಬಿ. ಶೆಟ್ರ ಪಕ್ಷದವುಗಳಾಗಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಅವು ದಿ. ಬ. ಹೆಗ್ಗಡೆಯವರ ಪಕ್ಷವಾದರೂ ಚಿಂತಿಲ್ಲ. ಕೊನೆಗೆ ಒಟ್ಟು ಬಹುಮತವು ಬಂಟರ ಸಮಾಜದ್ದಾಗಬೇಕು. ಆದರೆ ಅನಾಯಾಸದಿಂದ ಪ್ರೆಸಿಡೆಂಟರು ಶ್ರೀ. ಎ. ಬಿ. ಶೆಟ್ಟರು ಆಗಬೇಕು; ಈ ಚುನಾವಣೆಗೆ ಕೀರ್ತಿಯು ಕೊಂಗ್ರೆಸಿನ ಉಡಿಯಲ್ಲಿ ಬೀಳಬೇಕು ಈ ರೀತಿಯಾಗಿ ಉಮೇದ್ವಾರರನ್ನು ಆರಿಸುವ ಹಂಚಿಕೆಯಾಯಿತು. ಇವರ ಪ್ರಯತ್ನದಂತೆ ಕುಂದಾಪುರ ತಾಲೂಕಿನ ಎಲ್ಲಾ ಸೀಟುಗಳು, ಉಡುಪಿ, ಕಾರ್ಕಳ ತಾಲೂಕುಗಳ ಅಧಿಕಾಂಶವು ಹೇಗೂ ಬಂಟರ ಪಾಲಿಗೆ ಬಂತು. ಆದರೆ ಕಟ್ಪಾಡಿಯ ಚುನಾವಣೆಯಲ್ಲಿ ಈ ಗುಟ್ಟು ರಟ್ಟಾಯಿತು. ಮೂಲ್ಕಿಯಲ್ಲಿ ಉಡುಪಿಯಲ್ಲಿ ಕೊಂಗ್ರೆಸಿನ ಸೀಟುಗಳಿಗೆ ಅಭ್ಯಂತರವಾಗದಂತೆ ಶ್ರೀ. ಕಟ್ಪಾಡಿ ನಾಯಕರ ಮನೆತನದ ಸಹಾಯ ಬೇಕಾಯಿತು. ಅದಕ್ಕಾಗಿ ಸ್ತ್ರೀಯ ಸೀಟಿಗೆ ಈ ಮನೆತನದಿಂದ ಒಬ್ಬರನ್ನು—ಬಂಟ ಪ್ರತಿನಿಧಿಗಳು ಇಲ್ಲವೆಂದಲ್ಲ—ಆರಿಸಲಾಯಿತು. ಆದರೆ ಗಂಡಸಿನ ಸೀಟಿಗೆ ನಿಂತ ಶ್ರೀ. ಉಪೇಂದ್ರ ನಾಯಕರು ಮೊದಲು ಕೊಂಗ್ರೆಸಿಗೆ ಸೇರದಿದ್ದರೂ ಅನಂತರ ಅವರನ್ನು ಕೊಂಗ್ರೆಸಿಗೆ ಸೇರಿಸಿದರು. ಆ ಮನೆತನದಿಂದ ಉಡುಪಿ ಮತ್ತು ಮೂಲ್ಕಿಯ ಅವಾಂತರಗಳನ್ನು ತೀರಿಸಿದ ಮೇಲೆ ಮಟ್ಟಿಯ ಶ್ರೀ. ಅಧಿಕಾರಿಗಳನ್ನು ಅವರು ಕೊಂಗ್ರೆಸು ಚಳವಳದಲ್ಲಿ ಬಹಳ ಕಾಲದ ಹಿಂದಿನಿಂದ ಈ ಚಳವಳಿಯಲ್ಲಿ ಸಾಹಸಪಟ್ಟಿದ್ದರೂ ಅವರನ್ನು ಅಲ್ಲಗಳೆದು ಸಿವಿಕ್ ಬೋರ್ಡಿನವರಿಂದ ಶ್ರೀ. ನಾಯಕರೇ ಆರಿಸಲ್ಪಟ್ಟರು. ಅದರ ಉದ್ದೇಶವನ್ನು ಮೇಲೆ ಹೇಳಿಯದೆ. ಆ ಕಾರ್ಯ ನೆರವೇರಿದೊಡನೆ ರಾಜಿಯ ಪ್ರಸ್ತಾಪವೊಂದು ತಲೆದೋರಿತು. ಅದರಲ್ಲಿ ಶ್ರೀ. ನಾಯಕರು ಆ ಸ್ಥಾನವನ್ನು ಶ್ರೀ. ಜಗನ್ನಾಥ ಬಲ್ಲಾಳರಿಗೆ ಬಿಟ್ಟುಕೊಡಬೇಕೆಂಬುದು ಈ ರಾಜಿಯ ಪರಿಣಾಮ. ಅದು ಸಾಧ್ಯವಾಗದೆ ಇದ್ದುದರಿಂದ ಅವರಿಗೆ ಕೊಂಗ್ರೆಸು ಪಕ್ಷದವರೇ ಅಡ್ಡಗಾಲಿಟ್ಟು ಬಲ್ಲಾಳರ ಪಕ್ಷವು ಜಯಹೊಂದಿತು. ಶೆಟ್ರು ಮತ್ತು ಹೆಗ್ಡೆಯವರ ಕಕ್ಷಿಯ ಜಗಳವು ನಿಜವಾಗಿ ನಡೆದದ್ದು ಬ್ರಹ್ಮಾವರ ಮತ್ತು ಮೂಡಬಿದ್ರೆಯ ಸರ್ಕಲುಗಳಲ್ಲಿ. ಕಾರ್ಕಳದವರು ಕೊಂಗ್ರೆಸು ಚರ್ಮವನ್ನು ಹೊದ್ದು ನಿರಾಯಾಸವಾಗಿ ಒಳಕ್ಕೆ ಬಂದರು. ಹೀಗಾಗಿ ಕೊಂಗ್ರೆಸಿನ ಪಕ್ಷವು ೨೭ ಸೀಟುಗಳನ್ನು ಸಂಪಾದಿಸಿತು. ಅದರಲ್ಲಿ ೧೧ ಬಂಟರು. ಸ್ವತಂತ್ರ ಪಕ್ಷದವರಲ್ಲಿ ೧೬ ಸೀಟುಗಳಲ್ಲಿ ೯ ಬಂಟರು. ಹೀಗಾದುದರಿಂದಲೂ ದಿ. ಬ. ಹೆಗ್ಡೆಯರು ಆರಿಸಲ್ಪಡದಿದ್ದುದರಿಂದಲೂ ಈ ೩೦ ಮಂದಿ ಒಟ್ಟಾಗಲಿಕ್ಕೆ ಯಾವ ಬಗೆಯ ನಿರ್ಬಂಧವೂ ಇರುವುದಿಲ್ಲ. ಹೆಗ್ಡೆಯರು ಬಾರದಿದ್ದರೆ ಶೆಟ್ರನ್ನು ಅನುಸರಿಸಲಿಕ್ಕೆ ಈ ಇತರ ಬಂಟರಲ್ಲಿ ಆಕ್ಷೇಪವು ಬರಲಾರದು. ಕಾರಣವೇನಂದರೆ ಶೆಟ್ರ ಮೇಲೆ ವಿರೋಧವಾಗಿಯೂ ತಾತ್ಸಾರವಾಗಿಯೂ ಇದ್ದವರು ತೀರಾ ಕಡಿಮೆ. ಅದರಲ್ಲಿಯೂ ಅವರ ಮೇಲೆ ಬಂಟ ತರುಣರಿಗೆಲ್ಲ ಒಂದು ಬಗೆಯ ನಿಜವಾದ ಅಭಿಮಾನವಿದೆ. ಇದಲ್ಲದೆ ಶ್ರೀ. ಶೆಟ್ರ ಸ್ವಾಭಾವಿಕವಾದ ಸ್ವಭಾವ, ಕಾರ್ಯಗೌರವ, ಜಾತ್ಯಭಿಮಾನ ಇವುಗಳು ಅವರಿಗೆ ಉಪಕಾರಿಗಳಾಗಿಯೇ ಇವೆ. ಅಳಿಯಕಟ್ಟಿನ ಬೀಲಿನ ಬಗ್ಗೆ ಶ್ರೀ. ಶೆಟ್ರ ಮೇಲೆ ಎದುರಿಸಿ ನಿಂತವರೆಲ್ಲ ಆ ಬೀಲು ಮಾಯವಾದಂದಿನಿಂದ ಆ ಸಿಟ್ಟನ್ನು ಮರೆಯುತ್ತ ಬಂದಿದ್ದಾರೆ. ಅವರಲ್ಲಿರುವ ಒಂದು ಬಗೆಯ ಮೋಹಕ ಶಕ್ತಿಯಿಂದ ಅವರು ಅಂಥ ಎದುರಾಳಿಗಳನ್ನು ತನ್ನವರಾಗಿ ಮಾರ್ಪಡಿಸಬಲ್ಲರು. ಇಂಥವರಿಗೆ ಇರುವುದೊಂದೆ ಮುಳ್ಳು, ಅಂದರೆ ಅವರಿಗೆ ವಿರೋಧವಾಗಿ ಎದುರು ನಿಂತ ದಿವಾನ ಬಹದೂರರ ಪ್ರಯತ್ನ. ಇದನ್ನು ಎದುರಿಸಲಿಕ್ಕೆ ಶ್ರೀ. ಶೆಟ್ರಿಂದ ಸುಲಭಸಾಧ್ಯವಾಗಲಿಕ್ಕಿಲ್ಲ ಎಂಬದೇ ಶೆಟ್ರ ತಂಡಕ್ಕೂ ಕೊಂಗ್ರೆಸು ತಂಡಕ್ಕೂ ಒಪ್ಪಂದವಾಗಲಿಕ್ಕೆ ಕಾರಣವಾಯಿತು. ಸ್ವತಂತ್ರವಾಗಿ ತಮ್ಮ ಉಮೇದ್ವಾರರನ್ನು ನಿಲ್ಲಿಸಿ ಕೆಲವು ಸ್ಥಾನಗಳನ್ನಾದರೂ ಗೆಲ್ಲುವುದು ಕೊಂಗ್ರೆಸು ಪಕ್ಷದವರಿಗೆ ಸಂದೇಹವಿತ್ತು. ‘ನಾನೂ ನಾಗಪ್ಪನೂ ಕೂಡಿ ಕಚ್ಚಿ’ದಂತೆ ದಿ. ಬ. ಹೆಗ್ಡೆಯರ ಬಲವಾದ ತಂಡವನ್ನು ಮುರಿಯಲಿಕ್ಕೂ ವಿಶೇಷ ಪ್ರಯತ್ನವಿಲ್ಲದೆ ಕೊಂಗ್ರೆಸಿಗೆ ಯಶಸ್ಸನ್ನು ತರಲಿಕ್ಕೂ ಅದರ ಪ್ರತಿಫಲವಾಗಿ ಶ್ರೀ. ಶೆಟ್ರನ್ನು ಅಧ್ಯಕ್ಷರನ್ನಾಗಿ ಮಾಡಲಿಕ್ಕೂ ಕೊಂಗ್ರೆಸಿಗೆ ಸೇರಿದ ಬಂಟ ಮುಖಂಡರು ಕೃತಕೃತ್ಯರಾದರೆಂದು ಚುನಾವಣೆಯ ಫಲಿತಾಂಶದಿಂದ ತಾವೇ ಬೆನ್ನು ತಟ್ಟಿಕೊಂಡರು. ಇದಕ್ಕೆ ಅನುಕೂಲವಾಗಿ ಶ್ರೀ. ಸತ್ಯಮೂರ್ತಿಯಂಥವರ ಸರ್ಟಿಫಿಕೇಟೂ ದೊರೆಯಿತು.

ಡಿಸೆಂಬರ ಅಂತ್ಯದೊಳಗೆ ಅಧ್ಯಕ್ಷರ ಚುನಾವಣೆ ಕೂಡ ಆಗಿ ಶ್ರೀ. ಶೆಟ್ರು ಆ ಗದ್ದುಗೆಯನ್ನು ಏರುವರೆಂದು ಎಲ್ಲರೂ ನಿರ್ಧರಿಸಿದ್ದರು. ಆದರೆ ‘ತಾನೊಂದೆಣಿಸಿದರೆ ದೈವ ಒಂದೆಣಿಸಿತು’. ಹೊಟ್ಟೆಯೊಳಗಿನ ಹುಳುಕು ಕಟ್ಪಾಡಿಯ ಚುನಾವಣೆಯಲ್ಲಿ ಹೊರಬಿತ್ತು. ಸುರತಕಲ್ಲಿನ ಚುನಾವಣೆಗೆ ಇಂಜಂಕ್ಷನ್ ಮಾಡಿಸಿದ್ದರಿಂದ ತಾವು ಗೆದ್ದೆವೆಂದು ಪುರುಷಪ್ರಮಾಣ ಹಾರುತಿದ್ದವರಿಗೆ ಜಿಲ್ಲಾ ಕಲೆಕ್ಟರರ ವರ್ತನದ ಗುಟ್ಟು ಬಿಚ್ಚಲು ಬರಲಿಲ್ಲ. ಅಧ್ಯಕ್ಷರ ಚುನಾವಣೆಯು ಡಿಸೆಂಬರ ಅಂತ್ಯದೊಳಗೆ ಅಥವಾ ೩೬ನೇ ಇಸವಿಯ ಜನವರಿ ೧೫ರ ಒಳಗೆ ಮುಗಿಯುವದಾದರೆ ತನಗೆ ಸಹಾಯಕರಾಗಿ ಒಬ್ಬ ಡಿಪ್ಯುಟಿ ಕಲೆಕ್ಟರರು ಬೋರ್ಡಿನ ಖರ್ಚಿನಿಂದ ನೇಮಕವಾಗಬೇಕೆಂದು ಪ್ರಾಂತಿಕ ಸರಕಾರಕ್ಕೆ ಬರೆದು ಅದನ್ನು ನೆರವೇರಿಸುವದು ಅಗತ್ಯವಿರಲಿಲ್ಲ. ಆಕ್ಟಿನಲ್ಲಿ ‘ಎಲ್ಲಾ ಮೆಂಬರರ ಚುನಾವಣೆಯಾದ ಮೇಲೆ ಇಂತಿಷ್ಟೆ ದಿನಗಳೊಳಗೆ ಅಧ್ಯಕ್ಷರ ಚುನಾವಣೆ’ಯಾಗಬೇಕೆಂದು ನಿಯಮವಿದೆ. ಕೊಂಗ್ರೆಸು ಪಕ್ಷದವರ ಉಪಾಯದಿಂದ ಬಾಕಿ ಬಿದ್ದ ಸುರತಕಲ್ಲು ಚುನಾವಣೆಯು ಆಗದೆ ಅಧ್ಯಕ್ಷರ ಚುನಾವಣೆ ಮಾಡುವುದು ತಪ್ಪಾದೀತೆಂದು ಕಲೆಕ್ಟರ ಪ್ರೆಸಿಡೆಂಟರ ಮನಸ್ಸಿಗೆ ಹೊಳೆದರೆ ಅದು ತಪ್ಪಾಗಲಾರದು. ಈ ಇಂಜಂಕ್ಷನ್ ಮತ್ತು ವ್ಯಾಜ್ಯವು ಬರುವ ಫೆಬ್ರವರಿ ಆಖೈರಿಯೊಳಗೆ ತೀರದಿದ್ದರೆ ಚುನಾವಣೆಯಾದ ಅಥವಾ ಹಿಂದಿನ ಬೋರ್ಡು ರದ್ದಾದ ಮೂರು ತಿಂಗಳೊಳಗೆ ರಾಜಭಕ್ತಿಯ ಪ್ರತಿಜ್ಞೆಯನ್ನು ಮೆಂಬರರು ಮಾಡದಿದ್ದರೆ ಈ ಚುನಾವಣೆಯು ಕೊಳೆತುಹೋಗುತ್ತದೆ. ಹೊಸ ಚುನಾವಣೆಯಾಗಲೇಬೇಕು.

ಇದಲ್ಲದೆ ಪ್ರಾಂತಿಕ ಸರಕಾರದ ಬತ್ತಳಿಕೆಯಲ್ಲಿ ಇತರರಿಗೆ ತಿಳಿಯದ ಎಷ್ಟೋ ಅಸ್ತ್ರಶಸ್ತ್ರಗಳಿವೆ. ದೂರದಲ್ಲಿ ಉಂಟಾದ ಬಿರುಗಾಳಿಯ ಹೊಡೆತವು ಇಲ್ಲಿಗೆ ಬರಲಾರದೆಂದು ಎದೆತಟ್ಟಿ ಹೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಕೊಯಮುತ್ತೂರು ಮತ್ತು ಮಲಬಾರು ಜಿಲ್ಲೆಗಳು ಈಗಲೆ ವಿಸ್ತೀರ್ಣದಲ್ಲಿಯೂ ವ್ಯವಹಾರದಲ್ಲಿಯೂ ಅತೀ ದೊಡ್ಡವು. ಅವುಗಳ ಬೋರ್ಡುಗಳಲ್ಲಿ ಒಂದಲ್ಲ ಒಂದು ದಿನ ವಿಭಜನೆಯಾಗಲೇಬೇಕು. ಈಗಲೇ ನೀಲಗಿರಿ ಡಿಸ್ಟ್ರಿಕ್ಟ್ ಬೋರ್ಡನ್ನು ಮುರಿದು ಅದರ ಒಂದು ಭಾಗವನ್ನು ಕೊಯಮುತ್ತೂರಿಗೂ ಇನ್ನೊಂದು ಭಾಗವನ್ನು ಮಲಬಾರಿಗೂ ಸೇರಿಸುವ ಹಂಚಿಕೆ ನಡೆದಿದೆ. ಈ ಸಂದರ್ಭದಲ್ಲಿ ಮಲಬಾರನ್ನು ಎರಡು ಡಿಸ್ಟ್ರಿಕ್ಟ್ ಬೋರ್ಡುಗಳಾಗಿ ಮಾಡುವುದು ಅತ್ಯಗತ್ಯವಾಗುವುದು. ಆಗ ಉತ್ತರ ಮಲಬಾರದ ಭಾಗಕ್ಕೆ ಬೇಕಲಿನ ದರ್ಶನದಲ್ಲಿರುವ ದಕ್ಷಿಣ ಕನ್ನಡವನ್ನು ಕೂಡಿಸಿದರೆ ಆ ಭಾಗದ ಜನರಿಗೆ ನಿಜವಾಗಿಯೂ ನ್ಯಾಯವಾದೀತು ಎಂಬ ದೃಷ್ಟಿಯಿಂದ ದಕ್ಷಿಣ ಕನ್ನಡವನ್ನು ವಿಭಜಿಸುವ ವಿಚಾರ ನಡೆಯಬೇಕು ಎಂಬ ಅಭಿಪ್ರಾಯವು ಪ್ರಾಂತಿಕ ಸರಕಾರದವರಿಗೆ ಕಂಡುಬಂದರೆ ಈಗಿನ ಚುನಾವಣೆಯ ನಿಷ್ಪ್ರಯೋಜಕತನವು ಹೊಳೆದೀತು. ಇದಲ್ಲದೆ ಈಗಿನ ಬೋರ್ಡಿನ ಸಾಂಪತ್ತಿಕ ಸ್ಥಿತಿಯು ಇನ್ನು ಕ್ಷೀಣದೆಸೆಗೆ ಬರುವ ಕುರುಹುಗಳು ಕಾಣುತ್ತಿವೆ. ಚಾಲ್ತಿ ವರುಷದಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ರೂಪಾಯಿಗೆ ಒಂದಾಣೆಯಂತೆ ಸಂಬಳವನ್ನು ತಗ್ಗಿಸಿದರೂ ಇನ್ನೂ ಸುಮಾರು ೩೯ ಸಾವಿರ ರೂಪಾಯಿ ಕಡಿಮೆ ಬೀಳುವ ಚಿಹ್ನೆಗಳು ಕಾಣುತ್ತಿವೆ. ಮೋಟರ್ ಬಸ್ಸುಗಳ ಆದಾಯವು, ಬೇರೆ ಇತರ ಆದಾಯಗಳು ಕಡಿಮೆಯಾಗುವ ಕುರುಹುಗಳು ಕಾಣುತ್ತಿವೆ. ಖರ್ಚು ಮಾತ್ರ ಹೆಚ್ಚಾಗಿಯೇ ಇದೆ. ಹೀಗಿದ್ದುದರಿಂದ ಈಗಿನ ಡಿಪ್ಯುಟಿ ಕಲೆಕ್ಟರರು ಈ ವಿಷಯವನ್ನು ತಪಾಸನೆ ನಡೆಸಬೇಕಾಗುವುದು. ಅಷ್ಟರ ವರೆಗೆ ಈ ಸ್ಥಳೀಯ ರಾಜ್ಯಭಾರದ ಆಟವನ್ನು ಮುಂದೊತ್ತಿ ಇಡುವ ಎಂದು ಪ್ರಾಂತಿಕ ಸರಕಾರದವರಿಗೆ ಕಂಡರೆ ತಪ್ಪಾಗಲಾರದು. ಕಾಲು ಜಾರಿ ಬಿದ್ದ ಮೇಲೆ ನೆಲದ ಏರುತಗ್ಗನ್ನು ಸರಿಮಾಡುವುದಲ್ಲ. ಆದ್ದರಿಂದ ಸಾಂಪತ್ತಿಕ ಸ್ಥಿತಿಯ ವಿಚಾರವನ್ನು ಈಗಲೇ ಮಾಡುವುದು ಉತ್ತಮ. ಇಷ್ಟೆಲ್ಲಾ ಈ ಚುನಾವಣೆಯ ಮುಂದಿನ ಕಾರ್ಯಕ್ರಮಕ್ಕೆ ಬಾಹ್ಯ ಅಡಚಣೆಗಳು.

ಇನ್ನು ಒಳ ಅಡಚಣೆಗಳು ಅನೇಕ ಇವೆ. ೨೭ ಮೆಂಬರರು ಕೊಂಗ್ರೆಸು ಕಡೆಯಿಂದ ಆರಿಸಲ್ಪಟ್ಟಿದ್ದಾರೆ ಎನ್ನುವುದಾದರೆ ಅದರಲ್ಲಿ ೧೦ ಬಂಟರು ಮಾತ್ರ ನಿಜವಾಗಿ ಶೆಟ್ರ ಕಡೆಯವರು. ಒಬ್ಬರ ವಿಷಯವಾಗಿ ಕೊಂಗ್ರೆಸು ಕೂಟದಲ್ಲಿಯೇ ಸಂದೇಹವಿದೆ. ಇವರು ದಿ. ಬ. ಮಹಾಬಲ ಹೆಗ್ಡೆಯವರ ಪಕ್ಷದವರಿಗೆ ಓಟು ಕೊಡುವುದಾದರೆ ಸ್ವತಂತ್ರ ಪಕ್ಷದವರ ಪೈಕಿ ಒಬ್ಬರು ಈ ಕಡೆಗೆ ಬಂದಾರು ಅನ್ನೋಣ. ಉಳಿದ ೧೬ ಮಂದಿಯಲ್ಲಿ ಸ್ವತಹ ಪ್ರೆಸಿಡೆಂಟರಾಗಲಿಕ್ಕೆ ಅಥವಾ ವೈಸ್ ಪ್ರೆಸಿಡೆಂಟರಾಗಲಿಕ್ಕೆ ಮುಂದೊತ್ತುವವರು ಇದ್ದಾರೆ. ಇವರೆಲ್ಲರೂ ಅಧ್ಯಕ್ಷಸ್ಥಾನಕ್ಕೆ ಶ್ರೀ. ಶೆಟ್ರನ್ನೆ ಆರಿಸುತ್ತಾರೆ ಎನ್ನೋಣ. ವೈಸ್ ಪ್ರೆಸಿಡೆಂಟರಾಗಲಿಕ್ಕೆ ಶ್ರೀ. ಶಿವರಾಯರು, ಮಿ। ಗೊನ್ಸಾಲ್ವಿಸರು, ಶ್ರೀ. ವೈಕುಂಠ ಬಾಳಿಗರು ಉಮೇದ್ವಾರರಾಗಬಹುದು. ಇವರಲ್ಲಿ ಶ್ರೀ. ಶಿವರಾಯರು ಪ್ರೆಸಿಡೆಂಟ್ ಸ್ಥಾನಕ್ಕೆ ಕೂಡಾ ಯೋಗ್ಯರೆಂದಾದರೂ ಅವರು ಅಂತಹ ಪದವಿಯನ್ನು ಪಡೆದೊಡನೆ ಡಿಸ್ಟ್ರಿಕ್ಟ್ ಬೋರ್ಡಿನ ಹಣವನ್ನೆಲ್ಲ ಪುತ್ತೂರು ತಾಲೂಕಿನ ಅಭಿವೃದ್ಧಿಗೆನೆ ಚೆಲ್ಲಿಬಿಟ್ಟಾರು ಎಂದು ಬುರುಡೆ ಬಿಟ್ಟೊಡನೆ ಅವರಿಗೆ ಯಾವ ಸ್ಥಾನವೂ ದೊರೆಯುವುದಿಲ್ಲ. ಮುಖ್ಯವಾಗಿ ನವಯುಗದಲ್ಲಿ ಕೆ. ಸರ್ವೋತ್ತಮ ಶೆಟ್ರ (ಮತ್ತು ನವಯುಗದ ಸಂಪಾದಕರ) ಲೇಖನದಲ್ಲಿ ಕಾಣುವಂತೆ ಶ್ರೀ. ಶಿವರಾಯರು ಕಪಟನಾಟಕಿಗಳು, ಅಹಂಬ್ರಹ್ಮತ್ವವಿದ್ದವರು, ವಿದೂಷಕ ವರ್ತನವನ್ನು ಕೈಕೊಂಡವರು ಎಂದು ಮುಂತಾಗಿ ಸಾಕಷ್ಟು ಕೆಸರನ್ನು ಅವರ ಮೇಲೆ ಚೆಲ್ಲಿದ್ದಾರೆ. ಅವರು ಮಂಗಳೂರಿನವರಲ್ಲವಾದುದರಿಂದ ವೈಸ್ ಪ್ರೆಸಿಡೆಂಟರಾಗಿ ಪ್ರಯೋಜನವಿಲ್ಲವೆಂಬ ಒಣ ಆಕ್ಷೇಪವನ್ನು ಎದುರಿಗೆ ತಂದು, ಉಳಿದ ಐದು ತಾಲೂಕಿನವರು ಅವರ ಮೇಲೆ ಕೈಮಾಡುವಂತೆ ಪ್ರಯತ್ನ ಮಾಡುವ ಸಾಹಸದಲ್ಲಿ ಇದ್ದಾರೆ. ಆದುದರಿಂದ ಶಿವರಾಯರ ವಿಷಯವಾಗಿ ಚಿಂತನೆ ಮಾಡಬೇಕಾದುದು ಆಗತ್ಯವಿಲ್ಲ. ಉಳಿದವರಲ್ಲಿ ಜಾತಿಭೇದದ ದೃಷ್ಟಿ ಇಲ್ಲದಿದ್ದರೆ ತನ್ನನ್ನು ಪ್ರೆಸಿಡೆಂಟರಾಗಿಯೇ ಮಾಡಬಹುದಲ್ಲಾ ಎಂದು ಮಿ। ಗೊನ್ಸಾಲ್ವಿಸರು ವಾದಿಸಬಹುದು. ಶ್ರೀ. ವೈಕುಂಠ ಬಾಳಿಗರು ಮಂಗಳೂರಿನವರೇ ಇದ್ದು ಸಿ. ಪಿ. ಸಿ.ಯಂತಹ ದೊಡ್ಡ ಕಂಪೆನಿಯ ಆಡಳಿತವನ್ನು ನಡೆಸುವುದರಿಂದ ಅವರನ್ನು ವೈಸ್ ಪ್ರೆಸಿಡೆಂಟರ ಸ್ಥಾನಕ್ಕೆ ಆರಿಸಬೇಕೆಂದು ವಾದಿಸುವವರೂ ಇದ್ದಾರೆ. ತರುಣರೂ, ಉತ್ಸಾಹಿಗಳೂ ಇತ್ಯಾದಿಯಾಗಿ ಮೇಲೆ ಹೇಳಿದ ಸರ್ವೋತ್ತಮ ಶೆಟ್ರಿಂದ ಸರ್ಟಿಫಿಕೇಟು ಪಡೆದ ಮತ್ತು ಉತ್ತರದ ತಾಲೂಕುಗಳಲ್ಲಿ ಒಬ್ಬರಾದ ಡಾ। ಪಿ. ಜಿ. ಆಚಾರ್ಯರು ಈ ಎರಡರ ಪೈಕಿ ಒಂದು ಸ್ಥಾನವು ತನಗೆ ಬೇಕೆಂದು ಕೈ ಚಾಚಲೂ ಬಹುದು. ಅಥವಾ ಮದ್ರಾಸು ಯುನಿವರ್ಸಿಟಿಗೆ ತನ್ನನ್ನು ಮೆಂಬರನನ್ನಾಗಿ ಆರಿಸಬೇಕೆಂದು ಅವರು ಕೇಳಿಕೊಳ್ಳಲೂ ಬಹುದು. ಆ ಸ್ಥಾನವನ್ನು ಈಗ ಡಾ। ವಿಠಲ ಶೆಟ್ರು ಕೈಕೊಂಡಿದ್ದಾರೆ. ಅವರೇ ತನ್ನನ್ನು ಇನ್ನೊಮ್ಮೆ ಆರಿಸಬೇಕೆಂದು ಹೇಳಿಕೊಳ್ಳಬಹುದು. ಆಗ ಎಲ್ಲ ಸ್ಥಾನಗಳು ಬಂಟರ ಪದರಿನಲ್ಲಿಯೇ ಏತಕ್ಕೆ ಬೀಳಬೇಕೆಂಬ ಚರ್ಚೆಯು ಬೀಳಬಹುದು. ಹೀಗೆನ್ನುವಾಗ ಕಟ್ಪಾಡಿಯಲ್ಲಿ ಬಿದ್ದ ಕಿಡಿಯು ಹೊಗೆಯೆದ್ದು ಪ್ರಜ್ವಲಿಸಿ ಕೊಂಗ್ರೆಸಿನವರೇ ಭಿನ್ನಬುದ್ಧಿಯನ್ನು ತಂದಿಕ್ಕಬಹುದು. ಈ ಸಂದರ್ಭದಲ್ಲಿ ಶ್ರೀ. ಶೆಟ್ರಂಥವರು ಯುಕ್ತಿಪ್ರಯುಕ್ತಗಳಿಂದ ಅದನ್ನು ಹೋಗಲಾಡಿಸುವ ಹವ್ಯಾಸಕ್ಕೆ ಹೋಗಲಾರರು. ಅವರ ಸರಳವಾದ ಮನಸ್ಸಿಗೆ ಅದು ಹಿತವಾಗಲಾರದು. ಅಂಥಾ ಸಂದರ್ಭದಲ್ಲಿ ದಿ. ಬ. ಹೆಗ್ಡೆಯರು ಸ್ಥಾನಕಸ್ತರಾಗಿದ್ದಾಗ ನಮ್ಮ ಜಾತಿವರ್ಗದ ಮಾನವನ್ನು ಉಳಿಸಿ ನಾವೆಲ್ಲರೂ ಒಗ್ಗಟ್ಟಾಗಬೇಕೆಂದು ಬೋಧಿಸುವ ಶಕ್ತಿಯು ಡಾ। ವಿಠಲ ಶೆಟ್ರಲ್ಲಿ ಇದೆ. ಆಗ ಈ ಬಂಟರ ೨೦ ಸೀಟುಗಳ ಜೊತೆಯಲ್ಲಿ ಇನ್ನೂ ೪ ಸೀಟುಗಳನ್ನು ಹೇಗೂ ಓಲಿಸಿಕೊಂಡರೆ ಡಾ। ವಿಠಲ ಶೆಟ್ರು ವಿಜಯಿಯಾಗುವುದಕ್ಕೆ ಸಂದೇಹವಿಲ್ಲ.

ಇಷ್ಟನ್ನೆಲ್ಲಾ ಖತಿಸುವ ಆಗತ್ಯವೇನೆಂದರೆ ಶ್ರೀ. ಶೆಟ್ರ ಅನುಯಾಯಿಗಳು ತಮ್ಮ ಸಹಾನುಭೂತಿಯಿಂದ ಅವರಿಗೆ ಸಹಾಯ ಮಾಡುವುದರ ಬದಲಾಗಿ ಅನಾವಶ್ಯಕವಾಗಿ ಕೊಂಗ್ರೆಸಿನ ಸೋಗು ಹಾಕಿಕೊಂಡು ಅವರ ಗೌರವವನ್ನು ತಗ್ಗಿಸಿ ಅವರ ಆಡಳಿತದ ಮೇಲೆ ಟೀಕೆ ಟಿಪ್ಪಣಿಗಳು ಧೈರ್ಯವಾಗಿ ಬರುವುದಕ್ಕೆ ಸಂದರ್ಭ ಒದಗಿಸಿದಂತೆ ಆಯಿತಲ್ಲದೆ ಅವರಿಗೆ ನಿಜವಾಗಿಯೂ ಸಹಾಯ ಮಾಡಿದಂತಾಗಲಿಲ್ಲ. ಕೊಂಗ್ರೆಸಿಗೆ ಇತ್ತೀಚೆಗೆ ಸೇರಿದವರ ವೇಷಪಲ್ಲಟವಾಗಲಿಕ್ಕೆ ಮತ್ತು ಅವರು ಹೊದೆದುಕೊಂಡ ವ್ಯಾಘ್ರಾಂಬರವನ್ನು ಕಿತ್ತು ಬಿಸುಡಲಿಕ್ಕೆ ವಿಶೇಷ ವಿಳಂಬವಿಲ್ಲ. ಆಗ ತಮ್ಮ ಅವಿಚಾರದ ಸ್ವಾರ್ಥವರ್ತನೆಯಿಂದ ‘ಕೈಗೆ ಸಿಕ್ಕಿದ್ದು ಬಾಯಿಗೆ ಬಾರದೆ ಹೋಯಿತು’ ಎಂದು ಕೊಂಗ್ರೆಸು ಪಕ್ಷದವರು ಬಾಯಿ ಬಡಕೊಳ್ಳುವ ಕಾಲ ಬಂದೀತು. ಇದನ್ನು ನಮ್ಮ ಕೊಂಗ್ರೆಸು ಬಂಧುಗಳು ತಮ್ಮ ವಿಚಾರಪಥದಲ್ಲಿ ಇಡಲಿ.

ವಜ್ರಗಳು ವಜ್ರಗಳು ವಜ್ರಗಳು

ನಮ್ಮಲ್ಲಿ ಆಂಟವರ್ಪ
ನಿಂದ ಸೀದಾ ತರಿಸುವ
ಅತೀ ಉತ್ತಮ
ಜಾತಿಯ ವಜ್ರಗಳು
ಯಾವಾಗಲೂ
ಸಿಗುತ್ತವೆ.

ಏನೊಂದೂ ಕಲೆಗಳಿಲ್ಲದ
ಉತ್ತಮ ವರ್ಗದ ‘ಬ್ಲು
ಜಾಗ್ಗರ’ ವಜ್ರಗಳೂ,
‘ಎಕ್ಸಟ್ರಾ ವ್ಹಾಯಿಟ್’
ವಜ್ರಗಳೂ ನಮ್ಮಲ್ಲಿ ಸದಾ
ಸಿದ್ಧವಿರುತ್ತವೆ. ಬೆಲೆಗೆ
ತಕ್ಕ ಒಡವೆ ವದಗಿಸಿ
ಕೊಡುವವರು—

ಸಾವಕಾರ ಶ್ರೀನಿವಾಸ ರಂಗ ಪೈ

ಸಾವಕಾರ ಮಹಾಲ್—ರಥಬೀದಿ—ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಸಿದ್ಧ ಮಂತ್ರ.

ಇದೇ ಸಿದ್ಧ ವಶೀಕರಣ ಮಂತ್ರವಾಗಿದೆ.

ಈ ಮಂತ್ರವನ್ನು ಉಚ್ಚರಿಸಿದ ಮಾತ್ರದಿಂದಲೇ ಅತ್ಯಂತ ಕಷ್ಟತರವಾದ ಉದ್ದೇಶವಾದರೂ ಸಫಲವಾಗುವುದು. ನಿಮಗೆ ಬೇಕಾದಾಕೆ ಬಹಳ ಕಠಿನ ಹೃದಯೆಯೂ, ಗರ್ವಿಷ್ಠಳೂ ಆಗಿದ್ದರೂ ಕೂಡ, ಆಕೆ ಈ ಮಂತ್ರದಿಂದ ನಿಮ್ಮ ಬಳಿಗೆ ಬರುವಳು. ಈ ಮಂತ್ರಬಲದಿಂದ ನಿಮಗೆ ಪರೀಕ್ಷೆಗಳಲ್ಲಿ ಜಯ, ವ್ಯಾಪಾರದಲ್ಲಿ ಲಾಭ, ವ್ಯಾಜ್ಯ ವ್ಯವಹಾರಗಳಲ್ಲಿ ಯಶಸ್ಸು ಉಂಟಾಗುವುದು ಮಾತ್ರವಲ್ಲದೆ, ನಿಮಗೆ ಅದರಿಂದ ಅಭಿವೃದ್ಧಿಯೂ, ಪುತ್ರ ಐಶ್ವರ್ಯಾದಿಗಳ ಪ್ರಾಪ್ತಿಯೂ ಲಭಿಸುತ್ತವೆ. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುತ್ತದೆ. ನೀವು ಒಂದು ರೂಪಾಯಿಯನ್ನು ವೆಚ್ಚಮಾಡಿ, ವಿಜಯವನ್ನು ಪಡೆಯಿರಿ; ಅಥವಾ ಇದು ಸುಳ್ಳೆಂದು ರುಜುಪಡಿಸಿ 50 ರೂಪಾಯಿಗಳ ಬಹುಮಾನಕ್ಕೆ ಪಾತ್ರರಾಗಿರಿ.

Gupta Mantra Bhandar,
No. 43, P. O. Katri Sarai (Gaya.)

ಎಚ್ಚರಿಕೆ! ಮೋಸಗಾರರ ವಿಷಯದಲ್ಲಿ ಎಚ್ಚರದಿಂದಿರಿ!!

(100 ರೂಪಾಯಿಗಳ ಬಹುಮಾನ.)

ಗುಪ್ತ ವಶೀಕರಣ ಯಂತ್ರ.

ಈ 'ಯಂತ್ರ'ವನ್ನು ಒಬ್ಬನು ತನ್ನ ಸ್ವಾಧೀನಪಡಿಸಿಕೊಂಡ ಮಾತ್ರದಿಂದಲೇ, ಅತ್ಯಂತ ಕಷ್ಟತರವಾದ ಉದ್ದೇಶವಾದರೂ ನೆರವೇರುವುದು. ಇದರಿಂದ ಕೆಟ್ಟ ಗ್ರಹಗಳ ಬಾಧೆ ತೊಲಗುವುದು; ಶತ್ರುಗಳ ಮೇಲೆ ಜಯಲಾಭ ದೊರಕುವುದು; ನಿಮಗೆ ಬೇಕಾದಾಕೆ ನಿಮ್ಮ ಹಿಡಿತದೊಳಗೆ ಬರುವಂತಾಗುವುದು. ಪರೀಕ್ಷೆ, ವ್ಯಾಪಾರ, ವ್ಯಾಜ್ಯ ಮೊಕದ್ದಮೆಗಳಲ್ಲಿಯೂ ಕುದುರೆಗಳ ಜೂಜು, ಸೋಡ್ತಿ, ನೌಕರಿಗಳಲ್ಲಿಯೂ, ಪುತ್ರ ಮತ್ತೂ ಅತುಳ ಸಂಪತ್ತಿನ ಪ್ರಾಪ್ತಿಯಲ್ಲಿಯೂ, ಋಣ ಪರಿಹಾರ, ಅಪಾಯಕಾರಕ ರೋಗನಿವಾರಣೆಯಲ್ಲಿಯೂ ನಿಮಗೆ ಜಯಲಾಭವು ಸಿಕ್ಕುವುದು. ಇದು ನಿಮ್ಮನ್ನು ಅದೃಷ್ಟಶಾಲಿಯಾಗಿ ಮಾಡುವುದು. ಯಾರು ಇದನ್ನು ಸುಳ್ಳೆಂದು ರುಜುವಾತು ಮಾಡಿಕೊಡುವರೋ ಅವರಿಗೆ ಬಹುಮಾನ ರೂ. 100. ಬೆಲೆ ರೂ. 2. ಬೆಳ್ಳಿಯ ಮುಚ್ಚಳದಕ್ಕೆ ರೂ. 8—4; ಚಿನ್ನದ ಮುಚ್ಚಳದಕ್ಕೆ ರೂ. 12.

Mahashakti Mantra Ashram,
No. 10, P. O. Parabalpore, Patna.

EYESUN
CURES
CATARACT
RADICALLY
PRICE
RS. 2/–

OR CHRONIC EYE TROUBLES NO RISK OF OPERATION. SAFE, SURE EASY HOME TREATMENT SUCCESS ALWAYS GUARANTEED.

— HARYYASRAM —
PANCHPOTA, BENGAL
OR FROM LEADING CHEMISTS

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—6—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—12—0. ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ 'ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

ಏಜಂಟರು—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್
ಏಜನ್ಸಿ, ಸಂಪಿಗೆ ರೋಡ್,
ಮಲ್ಲೇಶ್ವರಮ್, ಪಿ. ಒ. ಬೆಂಗಳೂರು ಸಿಟಿ.

IMPORTANT TO MOTHERS
Nº 99
WOODWARD'S CELEBRATED GRIPE WATER

ಅಮ್ಮಾ! ನನಗೂ ಸ್ವಲ್ಪ ಕೊಡಬಾರದೇ?

'ವುಡ್‌ವರ್ಡರ ಗ್ರ್ಯಾಪ್ ವಾಟರಿ'ನ ಒಂದು ಡೋಜನ್ನು ತಕ್ಕ ಸಮಯದಲ್ಲಿ ಕೊಡುವುದರಿಂದ ಅದು ಮಕ್ಕಳನ್ನು, ಅಗತ್ಯವಲ್ಲದ ನೋವುಗಳಿಂದ ಕಾಪಾಡುತ್ತದೆ. ಹಲ್ಲು ಬರುವಾಗ ಉಂಟಾಗುವ ಜ್ವರದ ಲಕ್ಷಣಗಳನ್ನು ಅದು ತಡೆಯುತ್ತದೆ; ತೀವ್ರವಾದ ನೋವುಗಳನ್ನು ನಿವಾರಿಸುತ್ತದೆ; ವಾಯುಬಾಧೆಯನ್ನು ಪರಿಹರಿಸುತ್ತದೆ. ಮಕ್ಕಳು ಅದರ ರುಚಿಯನ್ನು ಮೆಚ್ಚುತ್ತವೆ.

WOODWARD'S
"GRIPE WATER"
Keeps Baby and
Growing Children well

IWW 34-111 W WOODWARD LTD. LONDON, ENGLAND.

ಕೇರಳ ಗಂಧದ ಸಾಬೂನು

Kerala
Sandal wood
Soap
Made by
KERALA
SOAP INSTITUTE
CALICUT
K.S.I.
SANDALWOOD
GUARANTEED PURE

ಉತ್ಕೃಷ್ಟವಾದ ಸಾಧನಗಳಿಂದ
ಯೋಗ್ಯರಾದ ಹಿಂದೀ ರಸಾ
ಯನ ಶಾಸ್ತ್ರ ಪಂಡಿತರಿಂದ
ಸಿದ್ಧವಾಗುತ್ತವೆ.

ಚೀಫ್ ರೆಪ್ರೆಸೆಂಟೇಟಿವ್:— ಆರ್. ಸಿ. ದಲಾಲ್, ಕಲ್ಲಿಕೋಟೆ.

THE TRAVANCORE

NATIONAL BANK, LIMITED.

INCORPORATED IN TRAVANCORE 1912.

MANGALORE BRANCH.

We have pleasure in announcing starting of a new chit Fund at our office from the 11th January 1936 consisting of:—

A class tickets of Rs. 2000/— each at Rs. 80/— per ticket per mensem.
B ... ... 1000/— ... 40/— ... ...
C ... ... 500/— ... 20/— ... ...
D ... ... 250/— ... 10/— ... ...

Remittances towards chit Fund are received at par at all our 41 branches and the agencies mentioned below:—

Bezwada: In Andhra Bank Ltd.,
Calcutta: In National City Bank of New York,
Colombo: In Indian Bank Ltd.,
Erode: In Indo Commercial Bank Ltd.,
Tuticorin: In Indian Bank Ltd.,
LONDON: MIDLAND BANK LTD.

Please apply for copies of rules and application forms to the Mangalore Branch or any of the other branches.

ವಾರವಾರವೂ ತಪ್ಪದೆ

'ಕಂಠೀರವ' ಪತ್ರಿಕೆಯನ್ನು ಓದಿರಿ.

ಬಿಡಿ ಸಂಚಿಕೆ ಬೆಲೆ ಆಣೆ ೦—೧—೦. ಎಲ್ಲೆಲ್ಲಿಯೂ ಸಿಗುತ್ತದೆ.

ಕಳೆದ ವಾರ

ನಮ್ಮ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸಂಘದವರು

ಇದೇ ತಾ. ೨೬ನೇ ಬುಧವಾರದಿಂದ ಇಲ್ಲೊಂದು ವಸ್ತುಪ್ರದರ್ಶನವನ್ನು ಆರಂಭಿಸಿ ೪-೫ ದಿನಗಳ ವರೆಗೆ ನಡೆಸಿದರು. ಈ ಪ್ರದರ್ಶನವನ್ನು ನಮ್ಮ ಬಿಶಪ್ ಸಾಹೇಬರು ತೆರೆದು ಆಶೀರ್ವದಿಸಿದರು. ಇದಕ್ಕೆ ಮಂಗಳೂರಿನ ಹಲವು ಸ್ಟಾಲುಗಳೂ, ಜಿಲ್ಲೆಯ ಇತರ ಕಡೆಗಳ ಕೆಲವು ಸ್ಟಾಲುಗಳೂ, ಮಲಬಾರಿನ ಕೆಲವು ಕಾರ್ಖಾನೆಗಳ ಪ್ರತಿನಿಧಿಗಳೂ ಬಂದಿದ್ದರು. ಈ ಸ್ಟಾಲುಗಳ ಸಂಖ್ಯೆಯನ್ನು ಎಣಿಸಿದರೆ, ನಮ್ಮ ಜಿಲ್ಲೆಯ ಹೆಸರಿಗೆ ಇದು ತಕ್ಕುದೆಂದು, ಭೂಷಣವೆಂದು ಹೇಳುವಂತಿರಲಿಲ್ಲ. ಬಂದ ಸ್ಟಾಲುಗಳಲ್ಲಿ ಹೆಚ್ಚಿನ ಹಲವು ಹಿಂದಿನವರದೇ. ಹೊಸಬರದು ಕಡಿಮೆ. ಅವುಗಳಲ್ಲಿ ಕೆಲವು ಸ್ಟಾಲುಗಳಲ್ಲಿ ಕಂಡುಬಂದ ಸಾಮುಗ್ರಿಗಳಾದರೂ, 'ಅಂಗಡಿಯ ಸಾಮುಗ್ರಿಗಳೇ' ಹೊರತು, ಪ್ರದರ್ಶನದ ವಸ್ತುಗಳಲ್ಲ. ಒಟ್ಟಿನಲ್ಲಿ ಪ್ರದರ್ಶನವೆಂಬುದು 'ಹಾಡಿದ್ದೇ ಹಾಡುವ ಕಿಸುಬಾಯಿ ದಾಸ'ನಂತೆ ಇದ್ದಿತು. ಚಿತ್ತಾಕರ್ಷಕವಾಗಿರಲಿಲ್ಲ. ನೋಡತಕ್ಕ ವಸ್ತುಗಳು ಹಲವಿರಲಿಲ್ಲ. ಅಂಗಡಿಗಳ ದೊಡ್ಡ ಸಂತೆ ಎನ್ನಲೂ ಅವಕಾಶವಿಲ್ಲ. ಅಂತೂ ಒಂದು ಪ್ರದರ್ಶನದ ಮರಿ,—ಆರಾಮು ಖುರ್ಚಿಯದೆನ್ನುವಂತಿದ್ದಿತು.

* * * * *

ಪ್ರದರ್ಶನಗಳ ಉದ್ದೇಶವು

ಬಹಳ ದೊಡ್ಡದಿದೆ. ಆದರೆ ಆ ಉದ್ದೇಶವು ಸಾರ್ಥಕವಾಗುವುದೂ, ಆಗದಿರುವುದೂ ವ್ಯವಸ್ಥಾಪಕರ ಕಾರ್ಯಕುಶಲತೆ, ವ್ಯಾಪಾರಿಗಳ ಸಹಕಾರ ಇವುಗಳ ಮೇಲೆ ಮುಖ್ಯವಾಗಿ ಆಧರಿಸಿಕೊಂಡಿದೆ. ಪ್ರಥಮತಃ ವ್ಯವಸ್ಥಾಪಕರ ಜಾಹಿರಾತು, ಪ್ರಕಟಣೆಗಳೇ ಮೊದಲಾದ ಪ್ರಚಾರಕಾರ್ಯಗಳೂ, ಅವರಿಂದ ಸ್ಟಾಲುಗಳಿಗೆ ದೊರಕತಕ್ಕ ಸೌಕರ್ಯಗಳೂ, ಬಹುಮಾನ ವಿನಿಯೋಗದ ರೀತಿಯೂ ನೀತಿಯೂ ಪ್ರೋತ್ಸಾಹಕರವಾಗಿದ್ದರೆ ಮಾತ್ರವೇ ಸ್ಟಾಲುಗಳ ಸಂಖ್ಯೆ ಹೆಚ್ಚುವ ಸಂಭವ. ನೂತನ ಪದಾರ್ಥಗಳನ್ನು ನೋಡುವ ಸಂಭವ. ಇಷ್ಟಾದರೇ ದರ್ಶಕರ ಸಂಖ್ಯೆಯೂ ಹೆಚ್ಚುವುದು. ಇದನ್ನು ಈ ಪ್ರದರ್ಶನದ ವ್ಯವಸ್ಥಾಪಕರಿಷ್ಟು ಮಟ್ಟಿಗೆ ಗಮನಿಸಿದ್ದಾರೆ? ಜಿಲ್ಲೆಯ ಪತ್ರಿಕೆಗಳಲ್ಲಿ ಈ ಸಂಬಂಧ ಜಾಹೀರಾತುಗಳೆಷ್ಟಿವೆ? ಮದ್ರಾಸಿನ 'ಹಿಂದೂ' ಪತ್ರಿಕೆಯ ಒಂದು ಜಾಹಿರಾತಿನಿಂದ ಯಾರಿಗೆಷ್ಟು ಉಪಕಾರ? ಗೋಡೆಗೆ ಅಂಟಿಸುವ ಪ್ರಕಟಣಾಪತ್ರಗಳು, ಸಕಾಲದಲ್ಲಿ ಜಿಲ್ಲೆಯ ಎಲ್ಲ ಕಡೆಗಳಲ್ಲಿಯೂ ತಗುಲಿಸಲ್ಪಟ್ಟಿವೆಯೋ? ಇದರ ಕನ್ನಡದ ಕರಪತ್ರಗಳೆಷ್ಟು ಸಾವಿರ ಅಲ್ಲಲ್ಲಿ ಹಂಚಲ್ಪಟ್ಟಿವೆ? ಇದರ 'ರೂಲ್ಸು'ಗಳು ಕನ್ನಡದಲ್ಲಿಯೂ ಇವೆಯೋ? ಈ ನಿದ್ದೆಗಣ್ಣಿನ, ಅರ್ಧ ಚೈತ್ಯನದ ಹರಿಕೆ ಸಂದಾಯದಿಂದ ಯಾರಿಗೇನು ಫಲ?

* * * * *

ಕಾಂಗ್ರೆಸಿನ ಸುವರ್ಣಮಹೋತ್ಸವವು.

೫೦ ವರ್ಷಗಳ ಕಾಲದಲ್ಲಿ ತನ್ನ ಸರ್ವತೋಮುಖವಾದ ಚಟುವಟಿಕೆಯನ್ನು, ಅಭಿವೃದ್ಧಿಯನ್ನು ತೋರಿ, ಜನತೆಗೆ ರಾಜಕೀಯ ಶಿಕ್ಷಣವನ್ನು ಕೊಟ್ಟು, ಅವರಲ್ಲಿ ಜಾಗೃತಿಯನ್ನೂ, ನವಸ್ಫೂರ್ತಿಯನ್ನೂ ಉಂಟುಮಾಡಿ, ತನ್ನ ಜೀವನವನ್ನೂ, ಅಸ್ತಿತ್ವವನ್ನೂ ಸಾರ್ಥಕ ಮಾಡಿಕೊಂಡ ನಮ್ಮ ರಾಷ್ಟ್ರೀಯ ಮಹಾಸಭೆಯ ಸುವರ್ಣಮಹೋತ್ಸವವು, ನಮ್ಮ ಭಾರತ ಭೂಮಿಯಲ್ಲೆಲ್ಲ, ಯಥೋಚಿತವಾದ ಕಾರ್ಯಕ್ರಮಗಳೊಡನೆ ಜರುಗಿ ಮುಗಿಯಿತು. ದೇಶಮುಖಂಡರೂ, ಕಾಂಗ್ರೆಸ್ ಮಂದಿಯೂ, ಕಾಂಗ್ರೆಸಿನ ಕಾರ್ಯಕಲಾಪಗಳಿಗೆ ಸಂಬಂಧಿಸಿದ, ಕಾಂಗ್ರೆಸಿನ ಮೂಲಕ ಜನಜಾಗೃತಿಯನ್ನು ಉಂಟುಮಾಡಿದ ಮಹನೀಯರ ಜೀವನದ ಕುರಿತಾದ ಹಲವು ಮುಖ್ಯ ವಿಚಾರಗಳನ್ನು, ಈ ಸಂದರ್ಭದಲ್ಲಿ, ಲೇಖನ ಭಾಷಣಗಳ ಮೂಲಕ ನೆನಪಿಗೆ ತಂದುಕೊಟ್ಟು ಕಾಂಗ್ರೆಸಿನ ಮಹತ್ವವನ್ನು ಪ್ರಕಾಶಗೊಳಿಸುವವರಾದರು. ಇನ್ನು ಈ ಸಂಸ್ಥೆ ಲೋಕೋಪಕಾರದ ಹಲವೊಂದು ಕಾರ್ಯಗಳನ್ನು ಕೈಕೊಂಡು, ಪ್ರಜಾಹಿತಕ್ಕಾಗಿ ಅವನ್ನು ಮಾಡಿ ಮುಗಿಸುವಂತೆ ದೇವರೀ ಸಂಸ್ಥೆಗೆ ತಕ್ಕ ಶಕ್ತಿಸಾಮರ್ಥ್ಯಗಳನ್ನು ದಯೆಪಾಲಿಸಲೆಂದು ಹಾರೈಕೆ.

* * * * *

ಎಸೆಂಬ್ಲಿಯಲ್ಲಿ ತಿರಸ್ಕೃತವಾಗಿ,—

'ಕೌನ್ಸಿಲ್ ಆಫ್ ಸ್ಟೇಟಿನಲ್ಲಿ' ಕಳೆದ ಸೆಪ್ಟೆಂಬರ ತಾ. ೨೮ರಲ್ಲಿ ವೈಸರಾಯರ ಸರ್ಟಿಫಿಕೆಟಿನ ಸಹಿತ ಮನ್ನಣೆ ಪಡೆದ, ಆ ಗೌರವಪಾತ್ರವಾದ ೧೯೩೫ನೇ ಇಸ್ವಿಯ 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟ್' ಈಗಲೀಗ ಜಾರಿಗೆ ಬಂದಿದೆ. ಈ ಶಾಸನದ ವಿಷಯದಲ್ಲಿ ಇಂಡಿಯದ ಮುದ್ರಾಲಯಗಳು ಪ್ರಬಲವಾದ ವಿರೋಧವನ್ನೇ ಹೂಡಿದ್ದುವು; ಸಮಗ್ರ ಭಾರತದ ಪತ್ರಿಕಾ ವ್ಯವಸಾಯಿಗಳ ಸಂಘವಾದರೂ ಇದನ್ನು ಉಗ್ರ ರೀತಿಯಲ್ಲಿಯೇ ಟೀಕಿಸಿ ನಿಷೇಧಿಸಿದ್ದಿತು. ಆದರೂ ಏನು? ಇಂಡಿಯದ ಹೊಸ ಸ್ವಾತಂತ್ರ್ಯದ ಶಕದಲ್ಲಿ, ವ್ಯಕ್ತಾಲಾಪದ ಸ್ವಾತಂತ್ರ್ಯವೂ, ವ್ಯಕ್ತಿಸ್ವಾತಂತ್ರ್ಯವೂ ಅಧಿಕಾರಿಗಳ ದಯಾಭಾವದ ಪದರಿನೊಳಗೆ ಇರಬೇಕಾದುದೇ ಯುಕ್ತವೆಂದು ಕಂಡು ಬಂದಿದೆ. ಜಗತ್ತಿನ ಪ್ರತಿಯೊಂದು ಕಡೆಯಲ್ಲಿಯೂ ಸಾಮ್ರಾಜ್ಯ ರಕ್ಷಣೆಯ ಉಪಾಯಗಳನ್ನು ಕೈಕೊಂಡಿರುವಾಗ, ಇಲ್ಲಿಯೂ ಅದಕ್ಕಾಗಿಯೇ ಇಷ್ಟಾದರೂ ಮಾಡಿ, ನೋಡಿ, ಸಾಮ್ರಾಜ್ಯವನ್ನು ಉದ್ಧರಿಸಬೇಡವೇ?

* * * * *

ನಮ್ಮ ಬೊಂಬಯಿಯ ಕರ್ಣಾಟಕ ಸಮ್ಮೇಳನದ ಅಧ್ಯಕ್ಷರಾದ

ಶ್ರೀಮಾನ್ ಎನ್. ಎಸ್. ಸುಬ್ಬರಾವ್, ಎಂ. ಎ., ಬಾರ್-ಎಟ್-ಲಾ (ಮೈಸೂರು ಸರಕಾರದ ವಿದ್ಯಾಂಗದ ಡೈರೆಕ್ಟರು) ಇವರು ಕಳೆದ ವಾರ, ಆ ಸಭೆಯಲ್ಲಿ ಅಪ್ಪಣೆಕೊಡಿಸಿದ ಉದ್ದಾಮವಾದ ಅವರ ಅಧ್ಯಕ್ಷಭಾಷಣದ ಕೆಲವು ಭಾಗಗಳು, ಇದೇ ಸಂಚಿಕೆಯ ಇನ್ನೊಂದು ಕಡೆ, ಪ್ರಕಟಿಸಲ್ಪಟ್ಟಿವೆ. ವಿಚಾರಪರಿಪ್ಲುತವೂ, ನವೀನಮಾರ್ಗದರ್ಶಿಯೂ ಆದ ಆ ಅಂಶಗಳನ್ನು ಆದರದಿಂದ ನಮ್ಮ ಕನ್ನಡಿಗರೋದಿ ಗ್ರಹಿಸಿ, ಕನ್ನಡದ ಮೇಲ್ಮೆಗೆ ನೆರವಾಗುವರೆಂದು ನಂಬಿಕೆ.

ಇಂಡಿಯದ ವ್ಯವಸ್ಥಿತವಾದ ರಾಜಕೀಯ ಅಭಿಪ್ರಾಯವನ್ನು

ಒಲಿಸಿಕೊಳ್ಳುವುದಕ್ಕಾಗಿ, ಕಾಂಗ್ರೆಸಿನ ಸುವರ್ಣಮಹೋತ್ಸವ ಕಾಲದಲ್ಲಿ, ಏನಾದರೂ ನಿಮ್ಮ ಸ್ನೇಹಾಚಾರದ ರಿಯಾಯಿತಿಯನ್ನು ಇಂಡಿಯಕ್ಕೆ ತೋರಿಸಿ—ಎಂದು ಕಾಮನ್ಸರ ಮಂದಿರದಲ್ಲಿ ಮಿ. ಥರ್ಟಲ್ ಸಾಹೇಬರು ಅರಿಕೆ ಮಾಡಿಕೊಂಡರೆ, 'ಅದು ಆಗಬೇಕಾದುದೇನೋ ಸರಿ. ಆದರೆ, ಇಂಡಿಯಾ ಸರಕಾರವನ್ನು ಬಿಟ್ಟು ನಾವೇನು ಮಾಡೋಣ?' ಎಂದುಬಿಟ್ಟರು ನಮ್ಮ ಅಂಡರ್ ಸ್ಟೇಟ್ ಸೆಕ್ರಟರಿಗಳು. ಆಗಲಿ. ವೈಸರಾಯರು ಇಂಡಿಯದಲ್ಲಿರತಕ್ಕವರು. ಅವರ ಮಾತೇ ಮುಖ್ಯ. ಒಪ್ಪುವ. ಆದರೆ ವ್ಹಾಯ್ಟ್ ಹಾಲು ಇಂಡಿಯದ ಕುರಿತು, ತನ್ನ ಇಷ್ಟಾಚಾರವನ್ನು ಪ್ರಕಟಿಸಲು ಯಾವ ಪ್ರಯತ್ನವನ್ನೂ ಮಾಡಲಾರದೇಕೆ? ಹಿಂದೆ, ಎಷ್ಟೋ ಸಂದರ್ಭಗಳಲ್ಲಿ, ಡಿಲ್ಲಿ-ವ್ಹಾಯ್ಟ್ ಹಾಲುಗಳೊಡನೆ ಮಾತುಕಥೆಗಳು ನಡೆದಿಲ್ಲವೇ? ಈಗಲೂ ಹಾಗೆ ಮಾಡಲು ಕರೀ ಬೆಕ್ಕು ಅಡ್ಡ ಸುಳಿಯಿತೇ? ವಾಸ್ತವಾಂಶವೆಂದರೆ, ಇದೇನೂ ಅಲ್ಲ. ಇಂಡಿಯದಲ್ಲಿ ರಾಜಕೀಯ ವಿದ್ಯಮಾನಗಳು ಈಗ ಸಂಪೂರ್ಣ ಹತೋಟಿಗೆ ಬಂದಿವೆ; ಈ ರೀತಿಯಾದ ಸ್ನೇಹಾಚಾರವಾಗಲೀ, ಶಾಂತಿಪ್ರಯತ್ನವಾಗಲೀ ಈಗ ಅಗತ್ಯವಿಲ್ಲ. ಇದರಲ್ಲಿ ಮುಖ್ಯವಾದ ಒಂದು ವಿಷಾದದ ಮಾತೇನೆಂದರೆ,—ಥರ್ಟಲ್ ಸಾಹೇಬರು, ಇಷ್ಟು ಜಾಣರಾಗಿದ್ದೂ ಈ ವಿಷಯವನ್ನು, ಅರಿಕೆಗೆ ಮೊದಲೇ, ತಮ್ಮ ಅನುಭವಕ್ಕೆ ತಂದುಕೊಳ್ಳದೆ ಹೋದರಲ್ಲ ಎಂಬುದೇ!

* * * * *

ಸರ್ ಹೋರರ ರಾಜಿನಾಮೆಯಿಂದ

ಇವರೂ ಬದುಕಿದರು. ಜನಾಂಗಸಂಘವೂ ಬದುಕಿಕೊಂಡಿತು. ಹೋರರೇನೋ ಘನೋದ್ದೇಶವನ್ನೇ ಇಟ್ಟುಕೊಂಡು, ಹೇಳಬೇಕಾದವರೊಡನೆ ಹೇಳದೆ ಕೇಳದೆ, ತಾವೇ ತಾವಾಗಿ ಲಾವಲರೊಡನೆ ಕೂಡಿಕೊಂಡು, ಇಟಲಿ ಅಬಿಸೀನಿಯದ ಪ್ರಕರಣದಲ್ಲಿ ಒಂದು ಸಂಧಿ ಪ್ರಯತ್ನವನ್ನು ಮಾಡಿದೆವೆನ್ನುತ್ತಾರೆ. ಇರಬಹುದು. ಆದರೆ ಅವರ ಪಂಗಡದವರೇ ಅವರಿಗೆ ತಿರುಗಿಬೀಳುವರೆಂದು ಅವರಿಗೆ ಮೊದಲೇ ತಿಳಿದಿದ್ದರೆ, ಅವರೆಂದೂ ಪ್ರಾಯಶಃ ಇಂತಹ ಸಂಧಿಗೆ ಕೈ ಇಕ್ಕುತ್ತಲೇ ಇರಲಿಲ್ಲ! ನೋಡಿ! ಅವರ ಪಂಗಡದವರೇ ಹಾಗೆ ಅವರನ್ನೇ ನಡುನೀರಲ್ಲಿ ಕೈಬಿಡುವರೆಂದು ಯಾರಿಗಾದರೂ ಹೇಗೆ ತಿಳಿಯಬೇಕು? ಇಂಡಿಯಕ್ಕೆ ಕೊಟ್ಟ ರಾಜಕೀಯ ಸ್ವಾತಂತ್ರ್ಯದ ವಾಗ್ದಾನಗಳು, ಕೊನೆಯಲ್ಲಿ ಯಾವ ರೂಪಕ್ಕೆ ಬಂದುವು, ಆ ವಾಗ್ದಾನಗಳ ವಿಷಯದಲ್ಲಿ ಬ್ರಿಟಿಶರು ಎಷ್ಟು ಮಟ್ಟಿಗೆ ಜಾಗರೂಕರಾಗಿ ವರ್ತಿಸಿದ್ದಾರೆ ಎಂಬುದು ಹೋರರ ಸ್ಮೃತಿಪಥದಲ್ಲಿ ಇನ್ನೂ ಹೊಸದಾಗಿರುವಾಗ, ಹೋರರಾದರೂ ಹೀಗೆ ಮೋಸದಲ್ಲಿ ಬಿದ್ದುದು ಆಶ್ಚರ್ಯವಲ್ಲ! ಮುಖ್ಯ, ಇಂಡಿಯದಲ್ಲಿ ಜೀರ್ಣಿಸಿಕೊಂಡುದನ್ನೇ ಯುರೋಪಿನಲ್ಲಿಯೂ ದಕ್ಕಿಸಿಕೊಳ್ಳಲಾರದೆ ಹೋದುದು ಹೋರರ ದುರದೃಷ್ಟ!

NEW YEAR AHEAD.

TWELVE MONTHS—FIFTY TWO WEEKS—THREE HUNDRED & SIXTY FIVE DAYS—BY WHATEVER YARD-STICK WE MEASURE IT, THE ANSWER IS THE NEW YEAR AHEAD—1936.

WE ALL KNOW THE GRAND OLD LAND MARKS ATTENDANT ON THE BIRTH OF EACH NEW YEAR—GOOD RESOLUTIONS—A CLEAN PAGE—A FRESH START. BEAUTIFUL PLATITUDES, BUT NOT EXCHANGEABLE FOR GROCERIES.

FIVE LONG YEARS HAS THE WORLD BATTLED WITH AN ADVERSE ECONOMIC TIDE. LIKE ALL TIDES IT MUST INEVITABLY EBB EVEN AS IT FLOWED. ALREADY THERE ARE INDICATIONS THAT IT IS RECEDING.

WE WANT EVERY BUSINESS MAN TO KNOW THAT WE ARE WATCHING INTENTLY EVERY POSSIBLE CHANGE—THAT WE ARE SEEKING ALL INFORMATION THAT MAY GUIDE OUR CUSTOMERS IN IMPROVING THEIR BUSINESS—THAT WE ARE STRIVING IN EVERY WAY WITHIN THE LIMITATIONS IMPOSED UPON US TO RENDER A FULL MEASURE OF SERVICE AND HELPFULNESS THAT WILL MAKE 1936

A HAPPY AND PROSPEROUS NEW YEAR.

ESTD. 1906.

CANARA BANK

LIMITED.

ಇಟೆಲಿ ಅಬಿಸೀನಿಯಗಳ ಪ್ರಕರಣ.

'ಸಂಡೇ ಕ್ರಾನಿಕಲಿನ' ವಾರ್ತಾದಾಯಕನೊಬ್ಬನು ಅಬಿಸೀನಿಯದಿಂದ ಹೀಗೆ ಬರೆಯುತ್ತಿದ್ದಾನೆ:—'ಇಟೆಲಿಯವರ ಸಿಬಂದಿಯ ವ್ಯವಸ್ಥೆ ಚೆನ್ನಾಗಿಲ್ಲ. ಯುದ್ಧಸಲಕರಣೆ, ಸಿದ್ಧತೆಗಳು ಕೇವಲ ಅಪೂರ್ಣ. ಯುದ್ಧದ ಭೂಪಠಗಳು ತೀರಾ ತಪ್ಪು. ಅಬಿಸೀನಿಯದಲ್ಲಿ ಕಂಡು ಕೇಳದ ಸ್ಥಳಗಳಿಗೆಲ್ಲ ಇಟೆಲಿ ಸೈನ್ಯಗಳನ್ನು ಕಳುಹಿಸಲಾಗಿದೆ. ಇಟೆಲಿಯ ನೇಟಿವ್ ಸೈನಿಕರ ಅಗಾಗಳಿನ ತೊಂದರೆ ಹೆಚ್ಚಾಗಿದೆ. ಅನೇಕ ಕಡೆ ಮಳೆಯಿಂದ ರಸ್ತೆಗಳು ತೊಳೆದು ಹೋಗಿ ಇಟೆಲಿ ಸೈನಿಕರಿಗೂ, ಸಾಮುಗ್ರಿಗಳಿಗೂ ತುಂಬ ಅನಾನುಕೂಲವಾಗಿದೆ. ಯುದ್ಧಕ್ಕೆ ಮೊದಲು ಅನೇಕ ಮಂದಿ ಇಟೆಲಿಯವರು ಅಬಿಸೀನಿಯದ ಮ್ಯಾಪುಗಳನ್ನೂ, ಸ್ಥಳೀಯ ವಿದ್ಯಮಾನಗಳ ವರದಿಯನ್ನೂ ತಯಾರಿಸಲು, ಗ್ರೀಕ್ ವ್ಯಾಪಾರಿಗಳ ವೇಷದಲ್ಲಿ ಅಲ್ಲಿಗೆ ಹೋಗಿದ್ದರು. ಆದರೆ ಅವರ ಮ್ಯಾಪುಗಳೂ, ವರದಿಗಳೂ ಶುದ್ಧ ತಪ್ಪಾಗಿವೆ. ಇಟೆಲಿಯ ಹಲವು ಏಜೆಂಟರುಗಳು ಇಂತಿಂತಹ ಕಡೆ ಕುಡಿಯುವ ನೀರಿನ ಬುಗ್ಗೆಗಳಿವೆ ಎಂದು ಬರೆದಿದ್ದರು; ಆದರೆ ಬಾಯಾರಿದ ಇಟೆಲಿ ಸೈನಿಕರು ಆ ಬುಗ್ಗೆಗಳಿವೆ ಎಂದು ಹೋದಾಗ, ಅಲ್ಲಿ ಬುಗ್ಗೆಗಳೇ ಇರಲಿಲ್ಲ. ಹೀಗಾಗಿ ಈ ವರದಿ, ಮ್ಯಾಪುಗಳನ್ನು ನಂಬಿಕೊಂಡು ಏಕಾಏಕಿ ನುಗ್ಗಿದ ಇಟೆಲಿಯವರು ಈಗ ನಿರುಪಾಯರಾಗಿ ಹಿಂದೆಗೆಯುತ್ತಿದ್ದಾರೆ.

'ಇನ್ನು ಇಟೆಲಿಯ ವಿಜಯದ ಕಥೆಯನ್ನು ಹೇಳೋಣ! ನಿಜವಾಗಿ ಎಲ್ಲಿ ಇಟೆಲಿಯ ಸೈನ್ಯದ ಬಹುಭಾಗವಿದೆಯೋ ಆ ಉತ್ತರ ಅಬಿಸೀನಿಯದಲ್ಲಿ ನ್ಯಾಯವಾದ ಯುದ್ಧವೇ ನಡೆದಿಲ್ಲ. ಎಡೋವಾಕ್ಕೆ ಇಟೆಲಿಯವರು ನಡೆದರೆಂದು, ಟ್ಯಾಂಕುಗಳ ಸಹಿತ, ದೊಡ್ಡ ದೊಡ್ಡ ಭಾವಚಿತ್ರಗಳು ಪ್ರಪಂಚದ ಪತ್ರಿಕೆಗಳಲ್ಲಿ ಪ್ರಕಟಗೊಂಡು, ಇಟೆಲಿಯವರ ದಿಗ್ವಿಜಯ ವಾರ್ತೆಯನ್ನು ಸಾರಿದುದೇನೋ ನಿಜ. ಆದರೆ, ಟ್ಯಾಂಕುಗಳು, ಎಡ್ವೋವಾವು ಇಟೆಲಿಯವರಿಂದ ಪ್ರವೇಶಿಸಲ್ಪಟ್ಟ ೬ ದಿನಗಳ ಮೇಲೆ, ರಸ್ತೆಗಳು ಸರಿಯಾದ ಮೇಲೆ ಮಾತ್ರವೇ ಅಲ್ಲಿಗೆ ಬಂದುವು! ಮತ್ತೆ ಮೇಕಲೆಯಲ್ಲಿ ಏನು ಬಲ್ಲಿರಾ? ನವೆಂಬರ ೮ರಲ್ಲಿ, ಇದೊಂದು ದೊಡ್ಡ ದಿಗ್ವಿಜಯದ ಸಂಬಂಧವಾಗಿ, ರೋಮಿನಲ್ಲಿ ಆನಂದೋತ್ಸವದ ಕೋಲಾಹಲವು ಕಂಡುಬಂದರೂ, ಆ ದಿಗ್ವಿಜಯದ ಮಾತು ಬರೇ ಒಂದು ಪ್ರಹಸನದಂತೆ ಇದ್ದಿತು. ಇದನ್ನು ನಾನೇ ಕಣ್ಣಾರೆ ಕಂಡೆ. ಸಂಗತಿ ಏನೆಂದರೆ ಇಟೆಲಿ ಸೈನ್ಯಕ್ಕೂ ಮೊದಲಾಗಿ ೬೦ ಮಂದಿ ವಾರ್ತಾದಾಯಕರು ಅಲ್ಲಿಗೆ ಪ್ರಥಮತಃ ಬಂದರು. ಆಗಲೇ ಅದು ದಿಗ್ವಿಜಯದ ಮಾತಾಯಿತು.

'ಇನ್ನೊಂದು ಸ್ವಾರಸ್ಯ. ಯುದ್ಧ ಅರಂಭವಾಯಿತೆಂಬ ಕೂಡಲೇ ಉತ್ತರ ಅಬಿಸೀನಿಯದ ಪಾಳೆಯಗಾರರೆಲ್ಲ ಇಟೆಲಿಯ ಕಡೆಗೆ ಸೇರುವರೆಂದು ಇಟೆಲಿಯ ಗುಪ್ತ ಏಜೆಂಟರು ತಿಳಿಸಿದ್ದರು ಇಟೆಲಿಗೆ. ಅದರಂತೆ ಯುದ್ಧಾರಂಭಕ್ಕೆ ಎಷ್ಟೋ ಕಾಲಕ್ಕೆ ಮೊದಲಿಂದಲೇ, ಇಟೆಲಿ ಈ ನಾಯಕರಿಗೆ ತಿಂಗಳುತಿಂಗಳಿಗೂ ದೊಡ್ಡ ದೊಡ್ಡ ಹಣದ ಥೈಲಿಯನ್ನು ಉಡುಗೊರೆಯಾಗಿ ಹೊರಿಸ ತೊಡಗಿತು. ಆ ನಾಯಕರೂ ಸಂತೋಷದಿಂದ ಅದನ್ನು ಸ್ವೀಕರಿಸುತ್ತ ಬಂದರು. ಆದರೇನು? ಒಂದು ಕೈಯಲ್ಲಿ ತೆಗೆದುಕೊಂಡುದನ್ನು ಇನ್ನೊಂದು ಕೈಯಲ್ಲಿ ಅಬಿಸೀನಿಯದ ಚಕ್ರವರ್ತಿಗಳಿಗೆ ಕೊಟ್ಟುಬಿಟ್ಟರು. ಏತಕ್ಕಾಗಿ? ಯುದ್ಧ ಸಾಮುಗ್ರಿಗಳ ಸರಬರಾಯಿಗಾಗಿ!'

'ಅಬಿಸೀನಿಯಾ ದೇಶದಲ್ಲಿ ಹಗಲು ಉಷ್ಣ ಸುಮಾರು ೧೫೦ ಡಿಗ್ರಿಗಳ ವರೆಗೂ ಇದೆ. ರಾತ್ರಿ ಬಹಳ ಚಳಿ; ಆಗ ಡಿಗ್ರಿ ೫೦—೫೫ ಮಾತ್ರ. ಆದರೂ ಇಟೆಲಿ ಸಿಪಾಯಿಗಳಿಗೆ ಪ್ರತ್ಯೇಕ ಬ್ಲಾಂಕೆಟುಗಳು, ಕಂಬಳಿಗಳಿಲ್ಲ; ಒಂದು ಸೆಟ್ ಉಡುಗೆತೊಡಿಗೆ ಮಾತ್ರ. ಅದುದರಿಂದ ಸಾವಿರಾರು ಮಂದಿ ನ್ಯುಮೋನಿಯಾ ಜ್ವರಕ್ಕೆ ತುತ್ತಾಗಿ ೨೦ ದಿನಗಳೊಳಗೆ ೨ ಸಾವಿರ ಮಂದಿ ಕಷ್ಟಪಟ್ಟರು.'

'ಕಾದಾಟದಲ್ಲಿ ಮುಂದಾಗಿ ಕಳುಹಿಸಲ್ಪಡುವವರು ನೇಟಿವರೇ ಆದುದರಿಂದ ಇಟೆಲಿ ಸೋಲ್ಜರರಿಗೂ, ನೇಟಿವರಿಗೂ ಒಳಗಿನ ಜಗಳ, ದಂಗೆಗಳು ತಪ್ಪಲಿಲ್ಲ. ಮುಖ್ಯ ದೊಡ್ಡ ಯುದ್ಧ ಮಾಡಲು ಇಟೆಲಿಯವರಿಗೆ ಅನುವು ದೊರಕದುದು ಈ ಪ್ರಕರಣದಲ್ಲಿ ಇಟೆಲಿಯವರ ಅಶಕ್ತಿಯನ್ನು ಸೂಚಿಸುತ್ತದೆ. ತಿಂಗಳುಗಳು ಹಲವು ಕಳೆದರೂ, ಇಟೆಲಿಯವರು ಅಬಿಸೀನಿಯದ ಮುಖ್ಯ ಸೈನ್ಯದಿಂದ ಇನ್ನೂ ೧೬೦ ಮೈಲು ದೂರವಿದ್ದಾರೆ. ಅಬಿಸೀನಿಯದ ಮುಖ್ಯ ಸೈನ್ಯವನ್ನು ಇಟೆಲಿಯವರು ಸಂಧಿಸುವಾಗ ಇಟೆಲಿಯವರ ಬೆನ್ನು ಮೂಳೆ ಮುರಿಯುವುದು ಅಸಂಭವವಲ್ಲ.'

ಈಗ ಬಂದ ವಾರ್ತೆ

ಕಳೆದ ವಾರದಲ್ಲಿಯೂ ಇಟೆಲಿಗೆ ಎಲ್ಲಿಯೂ ಜಯಲಾಭವಿಲ್ಲ. ಅವರ ಸದ್ದು ಅಡಗಿದೆ. ಶಕ್ತಿ ಕುಂದಿದೆ. ಅವರು ಮುಂದೆ ನುಗ್ಗುವುದು ನಿಂತಿದೆ. ಹಿಂದೆ ಸಾಗುವುದು ಮುಂದೆ ಸಾಗುತ್ತಿದೆ. ಇಟಲಿ, ಇಟಲಿ—ಜಗ್ಗಿದೆ;—ಸದ್ಯಕ್ಕೆ ಅದಕ್ಕೆ ಸಾಕಾಗಿದೆ!

ದಕ್ಷಿಣ ರಣರಂಗದಲ್ಲಿ ಒಂದು ಶತ್ರುವಿಮಾನವನ್ನು ಗುಂಡೆಸೆದು ನೆಲಕ್ಕಪ್ಪಳಿಸಿದ ಸಂಬಂಧ ಅಬಿಸೀನಿಯದಲ್ಲಿ ಆನಂದದ ಕೋಲಾಹಲ! ಮತ್ತೀ ಕೋಲಾಹಲವು ತೇಂಬಿಯನ್ ಪ್ರಾಂತದಲ್ಲಿ, ಅಬಿಸೀನಿಯದವರು ಇಟೆಲಿಯವರನ್ನೋಡಿಸಿ, ೧೧ ಮೆಷಿನ್ ಗನ್ನುಗಳನ್ನೂ, ನೂರಾರು ರೈಫಲ್, ತೋಟೆಗಳನ್ನೂ ಹಿಡಿದ ಸಂಬಂಧ ಇಮ್ಮಡಿಯಾಗಿದೆ.

ಕಳೆದ ವಾರದಲ್ಲಿ ಇತಿಯೋಪಿಯದವರು ಇರೇಟ್ರಿಯದ ಗಡಿಯ ೧೦ ಮೈಲುಗಳೊಳಗೆ, ಎಡೋವದ ಉತ್ತರಕ್ಕೆ ೫೦ ಮೈಲುಗಳೊಳಗೆ ಇರುವ ಅಡಿಕ್ವಾಲಾ ಪ್ರದೇಶವನ್ನು ಸ್ವಾಧೀನ ಮಾಡಿಕೊಂಡಿದ್ದಾರೆ.

ಅಕ್ಸೈಮಿನ ಬಳಿ ಭೀಕರ ಸ್ವರೂಪದ ಕಾಳಗವಾದುದೂ ಕಳೆದ ವಾರದಲ್ಲೇ. ಇಟೆಲಿ ವಿಮಾನಗಳು ಹಾರಾಡಿದುವು. ಆದರೆ ಇಟೆಲಿ—ಅಬಿಸೀನಿಯಗಳ ಸೈನ್ಯಗಳೆರಡೂ ಸಮೀಪವರ್ತಿಗಳಾಗಿಯೇ ಇದ್ದುದರಿಂದ ಬಾಂಬ್ ಎಸೆಯಲಾಗಲಿಲ್ಲ. ಇಷ್ಟರಲ್ಲಿ ಇತಿಯೋಪಿಯದವರ ಪರಾಕ್ರಮವು ಉಕ್ಕೇರಿ, ಅವರು ಇಟೆಲಿಯವರನ್ನು ಓಡಿಸಿದುದರಿಂದ, ಸಾವಿರಾರು ಮಂದಿ ಎರಿಟ್ರಿಯದವರು ಶರಣಾಗತರಾಗಿ, ೧೫೦ ಮಂದಿ ಇಟೆಲಿ ಸೈನಿಕರೂ, ೨೦೦ ಮಂದಿ ನೇಟಿವ್ ಸಿಪಾಯಿಗಳೂ ಸತ್ತು ೧೦ ಟ್ಯಾಂಕುಗಳೂ, ಹಲವು ಕೋವಿಗಳೂ ಅಬಿಸೀನಿಯದವರ ಸ್ವಾಧೀನವಾದುವೆಂದೂ ಸುದ್ದಿ. ಮಾತ್ರವಲ್ಲ; ಅಕ್ಸಮನ್ನೂ, ಮೇಕಲೆಯನ್ನೂ ಅಬಿಸೀನಿಯದವರು ತಿರುಗಿ ಹಿಡಿದಿರುವರಂತೆ.

ಸಂಧಾನವಾಗಲಿದ್ದರೆ!

ತಮ್ಮ ಶರ್ತಗಳಿವು ಎಂದು ಅಬಿಸೀನಿಯಾ ಚಕ್ರವರ್ತಿಗಳ ಹೇಳಿಕೆ. (೧) ಇಟೆಲಿ ಸಂಪೂರ್ಣವಾಗಿ ತನ್ನ ಸೈನ್ಯವನ್ನು ಅಬಿಸೀನಿಯದಿಂದ ಹಿಂದೆಗೆಯಬೇಕು. (೨) ಇಟೆಲಿ ನಷ್ಟ ತೆರಬೇಕು. (೩) ರಾಷ್ಟ್ರಗಳು ಇತಿಯೋಪಿಯದ ಸಾರ್ವಭೌಮತ್ವವನ್ನು ಅಂಗೀಕರಿಸಬೇಕು. (೪) ಜನಾಂಗ ಸಂಘವು ನೇಮಿಸುವ ಒಂದು ಕಮಿಶನಿನಿಂದ ಗಡಿಗಳ ಇತ್ಯರ್ಥವಾಗಬೇಕು. (೫) ಅಬಿಸೀನಿಯವು ತನ್ನ ಆರ್ಥಿಕ, ರಾಜ್ಯಭಾರಗಳ ವಿಷಯದಲ್ಲಿ ವಿದೇಶಗಳ ಸಹಾಯವನ್ನೂ ಉಪದೇಶವನ್ನೂ ಕೇಳುವುದು. ಆದರೆ ಇಟೆಲಿಯದನ್ನು ಅದೊಪ್ಪದು!

ವಿದೇಶ

೪೦೦ ಮಿಲ್ಯ ಪ್ರಜೆಗಳಿರುವ ಇಂಡಿಯಕ್ಕೆ ವರ್ಷಕ್ಕೆ ಬೇಕಾಗುವ ಮುದ್ರಣದ ಕಾಗದ ೧,೭೧,೦೦೦ ಟನ್ನುಗಳು ಮಾತ್ರ. ಇದರಲ್ಲಿ ೯೯ ಸಾವಿರ ಟನ್ನು ಕಾಗದ ವಾರ್ತಾಪತ್ರಿಕೆಗಳಿಗೆ ಬೇಕಾಗುತ್ತವೆ. ಆದರೆ ಇಂಡಿಯದ ೫ರಲ್ಲಿ ಒಂದು ಪಾಲು ಜನಸಂಖ್ಯೆ ಇರುವ ಜಪಾನಿಗೆ ಅಗತ್ಯವಿರುವ ಕಾಗದ ವರ್ಷಕ್ಕೆ ೬ ಲಕ್ಷ ಟನ್ನು! ನೋಡಿ! ಅದೆಲ್ಲಿ! ಇದೆಲ್ಲಿ! ಈ ಕಾರಣದಿಂದಲೇ ನಮ್ಮಲ್ಲಿ ಕಾಗದದ ಕಾರ್ಖಾನೆಗಳು ತಲೆ ಎತ್ತುವಂತಿಲ್ಲ!

ಸೈಂಟ್ ಜಾನ್ಸ್ ವುಡ್ಡಿನ ೧೧ ವರ್ಷದ ಹುಡುಗನವನು—ಎಡ್ಗರ್ ವಾಲೇಸನ್ನೂ ಸೋಲಿಸುವನೋ ಎಂಬಂತೆ ಪುಸ್ತಕಗಳನ್ನು ಬರೆಯುತ್ತಿದ್ದಾನೆ. ಅವನ ಎರಡನೆಯ ಪುಸ್ತಕವಾಗಲೇ ಪ್ರಕಟವಾಗಿ, ಈಗ ಮುಸಲೋನಿಯ ಜೀವನಚರಿತ್ರೆಯನ್ನು ಬರೆಯತೊಡಗಿದ್ದಾನೆ. ಆದರೆ ಮುಸಲೋನಿಗೆ ಭಯಪಟ್ಟು, ಆ ಹೆಸರಿಗೆ ಬದಲು ಬೇರೆ ಹೆಸರಿಟ್ಟಿದ್ದಾನೆ!

ಸಿನೆಮಾದಲ್ಲಿ ನಟಿಸುವ ಮಕ್ಕಳಲ್ಲಿ ಶರ್ಲಿ ಟೆಂಪಲ್ ಎಂಬ ಅಮೆರಿಕದ ಮಗುವಿಗೇ ಈಗ ಹೆಚ್ಚು ಸಂಬಳ—ವಾರಕ್ಕೆ ಸಾವಿರ ಪವನು; ಅದಿನ್ನೂ ಹೆಚ್ಚುವುದರಲ್ಲಿದೆ!

ಬ್ರಿಟನಿನ ಹೊಸ ವಿದೇಶೀ ಕಾರ್ಯಭಾರಗಳ ಮಂತ್ರಿಗಳಾಗಿ ಮಿ. ಎಂತೋನಿ ಏಡನ್‌ರವರು ನೇಮಕಹೊಂದಿದ್ದಾರೆ.

ಕ್ರಿಸ್‌ಮಸ್ ಅಥವಾ ಹೊಸ ವರ್ಷದ ಉಡುಗೊರೆಯಾಗಿ ತಮ್ಮ ಸ್ನೇಹಿತರಿಗೋ ಬಂಧುಗಳಿಗೋ ಕಳುಹಿಸುವಂತೆ, ಬ್ರಿಟಿಶ್ ರೈಲ್ವೆ ಕಂಪೆನಿಯವರು, ತಮ್ಮ ರೈಲ್ವೆ ಟಿಕೇಟುಗಳನ್ನು ಕೊಳ್ಳುವ ಏರ್ಪಾಟು ಮಾಡಿದ್ದಾರೆ. ಇದರಂತೆ, ಈ ಹಬ್ಬಗಳಲ್ಲಿ ಬಹುಮಾನವೆಂದರೆ—ರೈಲ್ವೆ ಟಿಕೇಟುಗಳೂ!

ಕರ್ಣಾಟಕ.

ಖಾದಿ ಮತ್ತು ಗ್ರಾಮಕೈಗಾರಿಕೆ ಪ್ರದರ್ಶನವು ಬೆಂಗಳೂರಲ್ಲಿ ಒಕ್ಕಲಿಗರ ಸಂಘದ ಕಟ್ಟಡದಲ್ಲಿ ನಿನ್ನೆ ದಿನ ಕರ್ಣಾಟಕದ ಸುಪ್ರ ಸೇವಕರಾದ ಶ್ರೀ ಗಂಗಾಧರರಾವ್ ದೇಶಪಾಂಡೆಯವರಿಂದ ತೆರೆ ಲ್ಪಟ್ಟಿತು.

ಶ್ರೀ ಉಡುಪಿ ಪುತ್ತಿಗೆ ಮಠಾಧಿಪತಿಗಳಾದ ಶ್ರೀ ಸುಜ್ಞಾನೇಂದ್ರ ತೀರ್ಥಪಾದರು ಜಪಾಗಳೂರಿಗೆ ಬಂದಿದ್ದು ಹಲವು ಧಾರ್ಮಿಕ ಭಾ ಗಳನ್ನು ಮನಮೋಹಕವಾಗಿ ಮಾಡುತ್ತಿದ್ದಾರೆ.

ಬೆಂಗಳೂರಿನ ಸುಪ್ರಸಿದ್ಧ ಸಾಹುಕಾರರಾದ ಶ್ರೀ। ಎಸ್. ಸಜ್ಜರಾಯರಿಗೆ 'ಧರ್ಮಪ್ರಕಾಶ' ಎಂಬ ಬಿರುದನ್ನು ಶ್ರೀಮನ್ಮಹಾರಾಜರು ದಯಪಾಲಿಸಿರುವ ಮೆಚ್ಚಿಕೆಗಾಗಿ ಬೆಂಗಳೂರಿನ ಮಹಾಜನರು ಶ್ರೀ। ರಾಯರಿಗೆ ೨೨ನೆಯ ತಾರೀಕಿನಲ್ಲಿ ಒಂದು ಎಡ್ರೆಸ್ ಅರ್ಪಿಸಿದರು.

ಕಾಂಗ್ರೆಸಿನ ಸುವರ್ಣ ಮಹೋತ್ಸವವನ್ನು ಕಳೆದ ತಾ॥ ೨೮ರಲ್ಲಿ ಮಡಿಕೇರಿಯಲ್ಲೂ ೨೯ರಲ್ಲಿ ಗೋಣಿಕೊಪ್ಪಲಲ್ಲೂ ೩೦ರಲ್ಲಿ ಹುದುಕೇರಿಯಲ್ಲೂ ೩೧ರಲ್ಲಿ ಅಮ್ಮತ್ತಿಯಲ್ಲೂ ೧—೧—೩೬ರಲ್ಲು ವೀರಾಜಪೇಟೆಯಲ್ಲೂ ಆಚರಿಸಿ ರಾಷ್ಟ್ರಧ್ವಜಾರೋಹಣ, ಮೆರವಣಿಗೆ, ಮೀಟಿಂಗು ಕಾಂಗ್ರೆಸು ಸಾಹಿತ್ಯ ಮಾರಾಟ ಮುಂತಾದ ಕೆಲಸಗಳೂ ನಡೆಸಲ್ಪಟ್ಟಿವೆ, ಪಡಲಿವೆ ಎಂದು ತಿಳಿದುಬರುತ್ತದೆ.

WANTED.

A duly qualified auditor for auditing the accounts of the Temple. Knowledge of Kanarese essential. Apply with terms.

Applications should reach the undermentioned by 10—1—1936.

Manjeshwar,
25—12—35.

The Trustees,
Sri Madanantheswar
Temple, Manjeshwar,
South Canara.

"ಸಿಟಿಜನ್" ವಾಚುಗಳನ್ನು ಉಪಯೋಗಿಸುವ ಮೂಲಕ,
ಕಾಲಕ್ಕೆ ತಕ್ಕಂತೆ ನಡೆದುಕೊಳ್ಳಿ.

ಈ ವಾಚುಗಳನ್ನು ಪ್ರಥಮತಃ ಪ್ರವೇಶಗೊಳಿಸಿದಾಗ ಅವು ಇದ್ದ ಸ್ಥಿತಿಗಿಂತಲೂ, ಈಗಿನ ಪರಿಸ್ಥಿತಿಯು ಬಹಳ ಬದಲಾವಣೆಗಳನ್ನು ಹೊಂದಿದೆ. ಅವು ಆಧುನಿಕ ರೀತಿಗೊಪ್ಪುವಂತೆ ಬಹಳವಾಗಿ ಸುಧಾರಿಸಲ್ಪಟ್ಟಿವೆ. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಹೆಚ್ಚು ಶಿಫಾರಸು ಮಾಡಲ್ಪಟ್ಟಿವೆ. "ಜುವೆಲ್"ಗಳಿರುವ "ಲಿವರ್" ಚಲನ; ಒಳ್ಳೇ "ಪಾಲಿಶ್" ಇರತಕ್ಕದ್ದು; ಯಂತ್ರಭಾಗಗಳು ಮುರಿಯತಕ್ಕುದಲ್ಲ. ಕ್ರೋಮಿಯಮ್ ಕೇಸ್, ಚರ್ಮದ ಕೈಪಟ್ಟಿ ಮತ್ತೂ ಪೆಟ್ಟಿಗೆಗಳಿಂದ ಕೂಡಿರತಕ್ಕದ್ದು.



"ಲಿವರ್" ಚಲನ
10½" ಸ್ಯಾಜಿನ ಲೆನ್ಸ್
ಕ್ರೋಮಿಯಮ್ ಕೇಸ್-ರೂ. 14-0-0.

"ಲಿವರ್" ಚಲನ
10 ಸ್ಯಾಜಿನ ಲೆನ್ಸ್
ಹಾರ್ನ್ ಕುಣಿಕೆ, ಕ್ರೋಮಿ
ಯಮ್ ಕೇಸ್-ರೂ. 15-0-0.





"ಲಿವರ್" ಚಲನ
10½" ಸ್ಯಾಜಿನ ಕುಶನ್
ಆಕಾರದ ಕ್ರೋಮಿಯಮ್
ಕೇಸ್-ರೂ. 17-0-0.

"ಲಿವರ್" ಚಲನ
10½" ಸ್ಯಾಜಿನ ಸ್ಕ್ರೂ ಬೆಸಲ್
ಮತ್ತೂ ಹಿಂಭಾಗದ ಕ್ರೋಮಿ
ಯಮ್ ಕೇಸ್-ರೂ. 17-0-0.



ಪ್ಯಾಕಿಂಗ್ ಮತ್ತೂ ಪೋಸ್ಟೇಜ್ ಪ್ರತ್ಯೇಕ.

ಜಲಾಲ್ ಎಂಡ್ ಸನ್ಸ್,
ಗವರ್ನಮೆಂಟ್ ಮತ್ತೂ ರೈಲ್ವೆಗಳಿಗೆ ಒದಗಿಸಿ ಕೊಡುವವರು,
ಹೆಡ್ ಆಫೀಸು:— ಶಾಖೆ:—
K. 46, ರತನ್ ಬಜಾರ್, — 190, ಬಿ. ಮೌಂಟ್ ರೋಡ್,
ಮದ್ರಾಸು.

3, 31-12.

‘ಮಸೀದಿಯಲ್ಲಿ ನಮಾಜು ಮಾಡುವವರಾಗಲಿ, ಇಗರ್ಜಿಯಲ್ಲಿ ಉಪದೇಶವನ್ನು ಕೇಳುವವರಾಗಲಿ, ದೇವಸ್ಥಾನಗಳಲ್ಲಿ ಇಷ್ಟದೇವತಾ ಉಪಾಸನೆ ಮಾಡುವವರಾಗಲಿ,—ಎಲ್ಲರೂ ಸಮಾನರು. ಇವರೆಲ್ಲರಿಗೂ, ತಾಯಿನಾಡಿನ ಸೇವೆಯ ಸಮರ್ಪಣೆಗೆ ಅಧಿಕಾರ ಉಂಟು. ಆ ತಾಯಿನಾಡು ನಮ್ಮನ್ನೀಗ ಕರೆಯುತ್ತಿದೆ. ಈ ಸಮಯದಲ್ಲಿ ನಾವು ಭೂತಕಾಲದ ಕಡೆ ದೃಷ್ಟಿ ಇರಿಸಿ, ಭವಿಷ್ಯತ್ಕಾಲದ ಕಡೆಗೆ ಉತ್ಸಾಹದಿಂದ ಸಾಗೋಣ.’

—ಬಾಬು ಭೂಪೇಂದ್ರನಾಥ ವಸು,
(೧೯೧೪ರಲ್ಲಿ ಮದ್ರಾಸಿನ ರಾಷ್ಟ್ರೀಯ
ಮಹಾಸಭೆಯ ಅಧ್ಯಕ್ಷ).

XVII] ಮಂಗಳೂರು, ತಾ. ೩೧—೧೨—೧೯೩೫ [೩೯ ೧೮೫೭ ಯುವ ಸಂ| ಪುಷ್ಯ ಶು| ೬ ಕುಜವಾರ

‘ನವಯುಗ'ದ ನಿಜರೂಪ!

ಸ್ಥಳೀಯ ಪತ್ರಿಕೆಯಾದ ‘ನವಯುಗ'ವು ಇದುವರೆಗೆ, ಪತ್ರಿಕೆಗಳ ಶಿಷ್ಟಾಚಾರವೇನೆಂಬುದನ್ನು ತಿಳಿಯದ ಕುಹುಕಿಯಂತೆ ನ್ಯಾಯವಾಗಿ ‘ಕಂಠೀರವ'ನಿಗೇ ಸೇರಬೇಕಾಗಿದ್ದ—ಶ್ರೀ. ಹೊಳ್ಳರಂತಹವರು ತಾವೇ ಬರೆದೋ, ಇಲ್ಲವೇ ಒಂದು ಬರೇ ದಸ್ಕತು ಹಾಕಿಯೋ ಇದ್ದ—ಲೇಖವನ್ನು ಮಾರ್ಗಮಧ್ಯದಲ್ಲಿ ತಡೆದೋ, ಸಂಪಾದಿಸಿಯೋ ಅತ್ಯುತ್ಸಾಹದಿಂದ ಪ್ರಕಟಿಸಿ, ತನ್ನ ಕುಟಿಲೋಪಾಯವನ್ನು ತೋರಿದುದೂ ಸಾಲದೆ, ಈಗಲೀಗ ತಾನೇ ‘ದಕ್ಷಿಣ ಕನ್ನಡ ಜಿಲ್ಲಾ ಬೋರ್ಡೂ, ಕಂಠೀರವವೂ' ಎಂಬ ಅಗ್ರಲೇಖವನ್ನೇ ಬರೆದೂ ಕೃತಕೃತ್ಯವಾಗಿದೆ. ಪ್ರಾಯಶಃ ಹೊಳ್ಳರಾಗಲೀ, ಅವರಂತಹ ಧೀರ ವಕೀಲರಾಗಲೀ, ಬೋರ್ಡಿನ ಪರವಾಗಿ, ಹಿಂದಿನ ಅಧ್ಯಕ್ಷರ ಪರವಾಗಿ ವ್ಯವಹರಿಸಲು ಸಿಕ್ಕದೆ, ‘ನವಯುಗ'ವೇ ನಿಜರೂಪವನ್ನು ಬಯಲು ಮಾಡಿಕೊಳ್ಳುವ ಅನಿವಾರ್ಯ ಸ್ಥಿತಿಯೊದಗಿರಬಹುದೇನೋ! ಪಾಪ!

ನಮ್ಮ ಬೋರ್ಡಿನ ಕುರಿತು, ಮಾತೆತ್ತಿದವರ ಮೇಲೆಲ್ಲಾ ಹಾರಿ ಬೀಳಲು ‘ನವಯುಗ'ವಲ್ಲದೆ, ಊರಿನಲ್ಲಿ ಮತ್ತಾವ ಪತ್ರಿಕೆ ಇದೆ? ಈ ಪತ್ರಿಕೆಯ ಜನಕರೂ, ಸ್ಥಾಪಕರೂ, ಮಾಜೀ ಸಂಪಾದಕರೂ ಹಿಂದಿನ ಬೋರ್ಡ್ ಪ್ರೆಸಿಡೆಂಟರೇ ಅಲ್ಲದೆ ಬೇರೆ ಯಾರು? ಆ ಪ್ರೆಸಿಡೆಂಟರ ಕೈಕೂಸೇ ‘ನವಯುಗ'ವೆಂಬುದು ಇಂದಿನ ಅದರ ಸಂಪಾದಕರಿಗೂ ತಿಳಿಯದೇ? ಅಥವಾ ಅವರಿಗೇ ತಿಳಿಯದಿದ್ದರೂ, ಬೋರ್ಡಿನ ಸಾವಿರಾರು ರುಪಾಯಿಗಳ ಮುದ್ರಣಕಾರ್ಯಗಳನ್ನು ವಂಶಪಾರಂಪರ್ಯವಾಗಿ ಮೂಲಗೇಣಿ ಹಕ್ಕಿನಂತೆ ಅನುಭವಿಸಿಕೊಂಡು ಬರುತ್ತಿರುವ ಆ ಮುದ್ರಾಲಯವಾದರೂ ತನ್ನ ಸ್ಥಾಪಕರಲ್ಲೊಬ್ಬರಾದ ಈ ಪ್ರೆಸಿಡೆಂಟರನ್ನು ಮರೆತು ಸುಮ್ಮನಿರಲಾದೀತೇ? ನ್ಯಾಯ, ನ್ಯಾಯ—‘ಕಂಠೀರವ'ನ ಧೋರಣೆಯಿಂದ ‘ನವಯುಗ'ಕ್ಕೂ ಸೋಜಿಗವಾಗಿರಬಹುದು. ಪ್ರೆಸಿಡೆಂಟರಿಗೂ ಸೋಜಿಗವಾಗಿರಬಹುದು. ನಮಗಂತೂ ‘ನವಯುಗ'ದ ಧೋರಣೆಯಿಂದ ಸೋಜಿಗವಾಗಿಲ್ಲ. ಕಾರಣ ವ್ಯಕ್ತ. ‘ನವಯುಗ'ದ ಮತ್ತೂ ಮಾಜಿ ಪ್ರೆಸಿಡೆಂಟರ ಸಂಬಂಧ; ಅಥವಾ ಬರಹ ಮೂಲಕವಾದ ದಾಖಲೆಯಲ್ಲಿಲ್ಲದ ಅವರ, ಅದರ ಈಗಿನ ಸಂಬಂಧ. ಮೇಲಾಗಿ ಡಿ|| ಬೋರ್ಡಿಗೂ ‘ನವಯುಗ'ವು ಅಚ್ಚಾಗುತ್ತಿರುವ ಆ ಮುದ್ರಾಲಯಕ್ಕೂ ಇರುವ ಕಡಿಯಲಾರದ ಆ ನಿಕಟ ಸಂಬಂಧ. ಇನ್ನು ‘ಈ ವಿಷಯದಲ್ಲಿ ಕಠಿನವಾಗಿ ಬರಿಯಲು' ಇನ್ನೂ ಯಾವ ಹೆಚ್ಚಿನ ಬದನೇಕಾಯಿ ಸಂಬಂಧ ಬೇಕು? ಈ ಕಠಿನ ರೀತಿಯ ವಕಾಲತ್ತನ್ನು ‘ನವಯುಗ'ವೂ ವಹಿಸದಿದ್ದರೆ, ಹಿಂದಿನ ಬೋರ್ಡಿಗೂ ಮುಖ್ಯವಾಗಿ ಪ್ರೆಸಿಡೆಂಟರಿಗೂ ಯಾರು ಗತಿ?

‘ಜಿಲ್ಲಾ ಕಲೆಕ್ಟರರೇ, ಸ್ವಲ್ಪ ಸಮಯದ ಮೊದಲು, ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತವನ್ನು ಬಹಳವಾಗಿ ಪ್ರಶಂಸಿಸಿ ಬರೆದಿದ್ದಾರೆ' ಎಂದು ‘ನವಯುಗ'ದ ಹೆಗ್ಗಳಿಕೆ. ಆದರೆ ‘ಬಹಳವಾಗಿ ಪ್ರಶಂಸಿಸಿದ' ಆ ಭಾಗವು ಯಾವುದೆಂದು ಆ ಪತ್ರಿಕೆ ಕಲೆಕ್ಟರರ ಆ ಮಾತುಗಳನ್ನು ಮಾತ್ರ ಉದ್ಧರಿಸಿಲ್ಲ. ‘ಬಹಳ'ವಾಗಿರುವುದೇನೋ! ‘ಪ್ರಶಂಸಿಸಿ'ರುವುದೇನೋ! ‘ನವಯುಗ'ವು ಹಾಗೆ ಹೇಳುತ್ತಿದೆ-ಎಂದು ಇತರರೂ ನಂಬಿ ಸೈಗುಟ್ಟಬೇಕೇ? ಅಥವಾ ಕಲೆಕ್ಟರರೇ, ‘ನವಯುಗ'ವೆನ್ನುವಂತೆ ‘ಬಹಳವಾಗಿ ಪ್ರಶಂಸಿಸಿದ್ದರೂ' ಅದು ಲೋಕಮತವೇ ಆಗಿರಬೇಕೆಂಬ ನಿರ್ಬಂಧವಿದೆಯೇ? ಲೋಕಮತ ಭಿನ್ನವಾಗಿರಬಾರದೇ? ಮೇಲಾಗಿ, ಅದೇ ಉಸಿರಿನಲ್ಲಿ ಹೇಳುತ್ತಿದೆ ಇದೇ ‘ನವಯುಗ'! “ಈಗಿನ ಎಕ್ಸ್ ಒಫಿಶಿಯೋ ಪ್ರೆಸಿಡೆಂಟರಿಗೆ ಬೋರ್ಡಿನ ಆಡಳಿತದ ಕುರಿತು ಹೆಚ್ಚಿನ ಯಾವ ಅನುಭವವೂ ಇಲ್ಲ!” ಎಂದು. ಅನ್ನುವಾಗ ಆ ‘ಹೆಚ್ಚಿನ ಯಾವ ಅನುಭವವೂ ಇಲ್ಲದವರ' ‘ಬಹಳವಾದ ಪ್ರಶಂಸೆ'ಗೆ, ‘ನವಯುಗ'ದ ಹೇಳಿಕೆಯ ಮೇರೆಗೇ ಎಷ್ಟು ಬೆಲೆ ಕಟ್ಟಬೇಕು? ಕಟ್ಟಬಹುದೇ?

ಆಡಿಟಿನ ವಿಚಾರ ಎಲ್ಲರಿಗೂ ಗೊತ್ತಿದೆ. ನಮ್ಮ ಡಿ|| ಎಜ್ಯುಕೇಶನಲ್ ಕೌನ್ಸಿಲಿನ ಲೆಕ್ಕಪತ್ರಗಳೂ ಆಡಿಟ್ಟಾಗಿದ್ದುದೇ ಎಂದ ಮಾತ್ರಕ್ಕೆ ಡಿ|| ಬೋರ್ಡಿನ ಲೆಕ್ಕಪತ್ರಗಳ ಕುರಿತೂ ನಾವು ಸಂಶಯಗ್ರಸ್ತರಾಗಿದ್ದೇವೆಂಬ ಅಪಾರ್ಥವನ್ನು ಯಾರೂ ಈಗ ಮಾಡಕೂಡದು. ನಮ್ಮ ಅಭಿಪ್ರಾಯವು ಅದಲ್ಲ. ಆದರೆ, ಅಂಕೆಸಂಖ್ಯೆಗಳ ಕಸರತ್ತಿನ ವಿಷಯದಲ್ಲಿ ಒಳ್ಳೆಯ ಷರಾ ಬರಿಯುವುದು ಡಿ|| ಬೋರ್ಡಿನಲ್ಲಿ ಮಾತ್ರವೇ? ದಿನ ಬೆಳಗಾದರೆ, ಎಷ್ಟೋ ಸಂಸ್ಥೆಗಳ ವರ್ಷಾವಧಿಯ ಲೆಕ್ಕವು ಮುಗಿದು, ‘ಲ್ಹಾವೇಕುಲ್ಹಾವಾ ಸಾಬೀತ್' ‘ಎಂಟಕ್ಕಂ ಎಂಟು' ‘೯×೩=೨೭' ಎಂದು ಆಡಿಟರರ ಒಳ್ಳೆಯ ಷರಾ ಎಲ್ಲೆಲ್ಲಿಯೂ ಉಂಟು. ಇದರಲ್ಲೇನು ವಿಶೇಷ? ಆಡಿಟರರ ಕಣ್ಣಿಗೆ ಶುಭ್ರವಾಗಿ ತೋರುವಂತೆ ಬೋರ್ಡಿನ ಆಡಳಿತದ ‘ಅಂತರ್ಯ'ವನ್ನು ಮಾತ್ರ ಶೃಂಗಾರ ಮಾಡಿಟ್ಟುದೇ?

‘ಕಂಠೀರವ' ‘ದುರಸ್ತಿ ದುರಸ್ತಿ' ಎಂದು ಬೊಬ್ಬೆ ಹೊಡೆಯುತ್ತಾನೆ ಅಂತೆ. ‘ನವಯುಗ'ಕ್ಕೆ ಆ ಬೊಬ್ಬೆ ಹೊಡೆಯುವುದಕ್ಕೂ ಯತ್ನವಿಲ್ಲ; ತಡೆಯುವುದಕ್ಕೂ ಆಗುವುದಿಲ್ಲ. ಎಷ್ಟಾದರೂ ನಮ್ಮ ಸೆಟ್ಟರು! ಆದರೆ ಆಡಳಿತದಲ್ಲಿ ಎಲ್ಲವೂ ಸರಿಯಾಗಿ ಉಂಟೇ? ಕಾಗದದಲ್ಲಿ ಶುಭ್ರವಾಗಿರಬಹುದು. ಆಚರಣೆಯಲ್ಲಿ ಸರಿಯಾಗಿರುವ ಭಾಗಗಳು ಯಾವುವು? ಬೋರ್ಡಿನ ಆರ್ಥಿಕ ಪರಿಸ್ಥಿತಿ ಹೇಗುಂಟು! ಮೋಟರ್ ಲ್ಯಾಸನ್ಸುಗಳಲ್ಲಿ ಆಗ್ರಹ ಅನುಗ್ರಹಗಳ ಲಕ್ಷಣಗಳಿಲ್ಲವೇ? ಇವರ ಕಾಲದಲ್ಲಿ ಕಾಗದ ಪತ್ರಗಳ ವಿಲೆಗೆ ಹಿಡಿಯುವ ಸಮಯವೆಷ್ಟು? ಧರ್ಮದ ಚಾಕರಿ ಎಂದು, ಪ್ರೆಸಿಡೆಂಟರು, ತಾವಿಲ್ಲಿದ್ದಾಗ ದಿನಕ್ಕೆ ಕೆಲವು ತಾಸುಗಳನ್ನು ಆಫೀಸಿನ ಕೆಲಸಕ್ಕಾಗಿ ಉಪಯೋಗಿಸಿಕೊಂಡ ಮಾತ್ರಕ್ಕೆ ತಾಲೂಕುಗಳ ಸಮಾವೇಶವಾದ ಡಿ|| ಬೋರ್ಡಿನ ಕೆಲಸ ಯಾವ ವೇಗತೆಯಿಂದ ಸಾಗೀತು? ಬೋರ್ಡ್ ಆಫೀಸಿನವರು ತಿಂಗಳಾದ ಕೂಡಲೇ ತಮ್ಮ ಸಂಬಳದ, ಹೊಟ್ಟೆಯ ಜಾಗ್ರತೆ ನೋಡಿಕೊಂಡು, ಬಡ ಎಲಿಮೆಂಟರಿ ಶಾಲೋಪಾಧ್ಯಾಯರ ಸಂಬಳಕ್ಕೆ ತಿಂಗಳುಗಟ್ಟಲೆ ವಿಳಂಬ ಮಾಡುತ್ತಿದ್ದುದು ಯಾವ ನ್ಯಾಯ? ಈಗ ಆ ‘ಬೀಲು ಕಂಪೆನಿ' ವಿರಾಮ ಪಡೆದಿದೆಯೇ? ಇದರಿಂದ ಬಡ ಉಪಾಧ್ಯಾಯರ ಬೋರ್ಡ್ ಆಫೀಸಿನ ಹರಿಕೆಯ ಯಾತ್ರೆ ಕಡಿಮೆಯಾಗಿ, ಮೋಟರ್ ಕಂಪೆನಿಯ ಆದಾಯ ಕಡಿಮೆಯಾದುದು ಯಾರ ಪುಣ್ಯ? ಜಿಲ್ಲೆಯಲ್ಲಿ ‘ಕೃತಕ' (Bogus) ಶಾಲೆಗಳೆಷ್ಟಿವೆ ಎಂದು ಯಾರಾದರೂ ಪರಿಶೋಧಿಸಿದರೇ? ಅವಿಲ್ಲವೆಂದು ಹೇಳುವವರು ಯಾರು? ಮೀಟಿಂಗುಗಳಲ್ಲಿ ಬಂದ ಆ ಪ್ರಸ್ತಾವವನ್ನು ಕೇಳಿದವರು ಯಾರು? ಎಲ್ಲ ಹ್ಯಾಸ್ಕೂಲುಗಳ ‘ಡಿಸಿಪ್ಲಿನೂ' ಚೆನ್ನಾಗಿದೆಯೇ? ಆಡಳಿತದ ಶಕ್ತಿ, ಅದರ ಬಿಗಿಯನ್ನು ತೋರದ, ಅವರ ಆಪ್ತಸೂತ್ರಧಾರಿಗಳ ಕೈಗೊಂಬೆಯಾದ ಪ್ರೆಸಿಡೆಂಟರ ಕಾಲದಲ್ಲಿ, ‘ದುರಸ್ತಿ' ‘ದುರಸ್ತಿ' ಎಂದು, ‘ಕಂಠೀರವ' ಮುಂದೊತ್ತಿದರೆ, ಅದು ಬೊಬ್ಬೆಯೆ? ಅಥವಾ ಇಷ್ಟು ಪ್ಲಾನು ಮಾಡಿಯೂ, ಚತುರೋಪಾಯ ಹೂಡಿಯೂ, ಕಾಸು ಖರ್ಚಿಲ್ಲದೆ, ಪ್ರತಿಸ್ಪರ್ಧಿಯಿಲ್ಲದೆ, ಚುನಾವಣೆಯಾಯಿತೆಂದು ಆಡಿಯೂ ‘ಹಿಂದಿನ ಪ್ರೆಸಿಡೆಂಟರೇ ಇನ್ನೂ ಪ್ರೆಸಿಡೆಂಟರಾಗಲಿಲ್ಲ; ಸರಕಾರದ ಅಧಿಕಾರಿಗಳು ಪ್ರವೇಶಿಸಿಬಿಟ್ಟರು; ಇನ್ನೆಲ್ಲಿ ಪುನಃ ಚುನಾವಣೆಯೋ! ಈ ಪ್ಲಾನಿನ ನಿರ್ಮೂಲವೊ!' ಎಂಬುದೇ ಇದು; ನಿಜರೂಪದ ‘ನವಯುಗ'ದ ಬೊಬ್ಬೆಯೆ?

‘ಬೋರ್ಡಿನ ಆಡಳಿತದ ಕುರಿತು ಹೆಚ್ಚಿನ ಯಾವ ಅನುಭವವೂ ಇಲ್ಲದ ಎಕ್ಸ್ ಒಫಿಶಿಯೋ ಪ್ರೆಸಿಡೆಂಟರು' ಎಂದು ‘ನವಯುಗ' ಒಂದು ಸರ್ಟಿಫಿಕೆಟ್ ಬರೆದಿದೆ. ಹಾಗಿದ್ದರೂ ಇರಬಹುದೆನ್ನಿ. ಅದಕ್ಕೆ ಕಾರಣಗಳಿಲ್ಲದೆ ಇಲ್ಲ. ನಮ್ಮ ಕಲೆಕ್ಟರರಿಗೆ ಇಲ್ಲಿ ಅವರ ಬಂಧುಬಾಂಧವರು ಇದ್ದಂತೆ ಇಲ್ಲ. ಮೂಲ್ಕಿಯಲ್ಲಿ ಒಂದು ಕಾಲೇಜು ಮಾಡಿಸಿಕೊಡಿ ಎಂದು ಒತ್ತಾಯಪಡಿಸುವವರೂ ಇಲ್ಲ. ಕಲೆಕ್ಟರರು ಫಲಿಮಾರಿಗೂ ಯಾವ ಸಹಾಯ ಮಾಡಿದುದೂ ಇಲ್ಲ. ಅಥವಾ ಹಳ್ಳಿಯ ಶಾಲೆಗಳಲ್ಲಿ, ಮನೆ ಮನೆ ಪಾಯಸದಂತೆ, ಶಾಲಾ ದಿನದ ಅಧ್ಯಕ್ಷರಾಗಿ, ಹೂಮಾಲೆ ಹಾಕಿಸಿಕೊಂಡು, ಕೈಕೆಳಗಿನ ಉಪಾಧ್ಯಾಯರಿಂದ ಬೇಕಾದಷ್ಟು ಹೊಗಳಿಸಿಕೊಂಡು ‘ಥ್ಯಾಂಕ್ಸ್' ಕೊಟ್ಟುದೂ ಇಲ್ಲ. ಅವರಿಗೆ ಚುನಾವಣೆಯ ಗಲಭೆಯೂ ಇಲ್ಲ; ಮೂಲಿಹಕ್ಕಿನ ಪ್ರೆಸಿಡೆಂಟರಾಗಿ ಆರಿಸಿಬರಬೇಕೆಂಬ ಅಗತ್ಯವೂ ಇಲ್ಲ. ಇಷ್ಟಕ್ಕಾಗಿ, ಶಾಲಾವಾರ್ಷಿಕೋತ್ಸವಗಳ ಕಾಲದಲ್ಲಿ, ಮುಂದಿನ ‘ಚುನಾವಣೆಯ ಪ್ರಚಾರಕಾರ್ಯಗಳ' ಪೀಠಿಕೆಯ ದೃಷ್ಟಿಯೂ ಇಲ್ಲ. ಇವೊಂದೂ ಇಲ್ಲದೆ, ‘ಬೋರ್ಡಿನ ಆಡಳಿತದ ಕುರಿತು ಹೆಚ್ಚಿನ ಯಾವ ಅನುಭವವಾದರೂ ಅವರಿಗಿರುವುದು' ಹೇಗೆ? ಜಿಲ್ಲೆಯ ಕಡವುಗಳು, ಸಂಕ, ಸೇತುವೆಗಳು, ರಸ್ತೆಗಳು, ಅವುಗಳ ಏರುತಗ್ಗು, ಕೊಂಕುಡೊಂಕುಗಳು, ಕಾಡುನಾಡುಗಳು,—ಇವೇ ಮೊದಲಾದುವು ಅವರಿಗೆ ಗೊತ್ತಿರಬಹುದು. ಇವೆಲ್ಲ ಜ್ಞಾನ ಡಿ|| ಬೋ||ನ ಆಡಳಿತಕ್ಕೆ ಯಾಕಪ್ಪ?

‘ಹೊಸ ಬೋರ್ಡಿಗೆ ಚುನಾಯಿಸಲ್ಪಟ್ಟಿರುವ ಮೆಂಬರರು ತಮ್ಮ ಮೆಂಬರಿಕೆ ಕಳಕೊಳ್ಳುವಂತಾದರೂ ಚಿಂತ್ಯವಿಲ್ಲ,' ಎಂದು ‘ನವಯುಗ'ದ ಉದ್ಗಾರ! ಪಶ್ಚಾತ್ತಾಪ!! ಅದಿಲ್ಲದೆ ಇದ್ದೀತೇ ಸೆಟ್ಟರ ಪತ್ರಿಕೆಗೆ? ಆದರೆ ಈ ಪಶ್ಚಾತ್ತಾಪ ಉದ್ಗಾರಗಳ ಹಿಂದೆ ಇರುವ ಸಂಗತಿಗಳೇನೆಂದು ಕೊಂಚ ವಿಚಾರಿಸಬೇಕಾಗಿದೆ. ನಮಗೆ ತಿಳಿದ ಮಟ್ಟಿಗೆ ಈ ಮೆಂಬರಿಕೆ ಕಳೆದುಕೊಳ್ಳುವ ಹಾಗೆ ಕೂತಲ್ಲಿ ಕಿತಾಪತಿ ಮಾಡಿಟ್ಟುದು ಕಾಂಗ್ರೆಸಿನವರೇ—ಸರಕಾರವಲ್ಲ. ಕಾಂಗ್ರೆಸಿನ ಹೆಸರಲ್ಲಿ ನಡೆದುದೇನುಂಟೋ ಅದರಲ್ಲಿ ಬಹುಪಕ್ಷ, ಜಾತಿಯ ಭೂತದ ಕೋಲಾಹಲವೇ;—ಕಾಂಗ್ರೆಸಿನ ಹೆಸರಲ್ಲಿ ಒಳಸಂಚಿನ ಬಲೆ ಹರಡಿ, ಆಡುವವರು ಬೇಕಾದಷ್ಟು ಆಡಿ ಬಿಟ್ಟರು. ನಿಜವಾದ ಕಾಂಗ್ರೆಸಿನವರು ಇದರಲ್ಲಿ ಬಹಳ ಸ್ವಲ್ಪ; ಗಿಲೀಟ್ ಕಾಂಗ್ರೆಸ್ ಚೀಟಿಯವರು ಬಹಳ ಮಂದಿ. ಹೀಗಾಗಿ ನಮ್ಮಲ್ಲಿ ಹೊಸ ಬೋರ್ಡಿನಲ್ಲಿ ಹೆಸರಿಗೆ ಮುಕ್ಕಾಲಿಗೆ ಮೂರು ಕಾಂಗ್ರೆಸ್‌ವಾಲರಿರುವುದಾದರೂ, ಭಾರದಡೆಯ ಕಾಂಗ್ರೆಸ್ ಮಂದಿ ಇಲ್ಲ. ಆದುದರಿಂದ ಇಂತಹ ಗಿಲೀಟ್ ಕಾಂಗ್ರೆಸ್‌ವಾಲರಿರುವ ಈ ಹೊಸ ಬೋರ್ಡ್, ಒಮ್ಮೆ ತನ್ನಂತೆ ರದ್ದಾಗಿ ಹೋದರೂ, ಯಾರಿಗೇಕೆ ವ್ಯಸನ? ಠಕಾರೀ ವಸ್ತು ನಮಗೇಕೆ? ಯಾವ ಪಾರ್ಟಿಯಾದರೂ ನಮಗೇಕೆ? ನಾವು ಇಂದಿನ ಪಾಠದಿಂದ ಬುದ್ಧಿ ಕಲಿತು, ಮುಂದೆ ಚುನಾವಣೆಯಲ್ಲಿ ಒಳ್ಳೇ ಯೋಗ್ಯರೇ, ಸಮರ್ಥರೇ ಬರುವಂತೆ ಆರಿಸಲಾರೆವೆ?

ಇನ್ನೊಂದು ಮಾತು. ಹಿಂದಿನ ಪ್ರೆಸಿಡೆಂಟರೇ ಮುಂದೆಯೂ ಪ್ರೆಸಿಡೆಂಟರಾಗಬೇಕೆಂಬ ಉದ್ದೇಶದಿಂದ, ಕಾಂಗ್ರೆಸಿನ ಹೆಸರಲ್ಲಿ, ಏನೇನೋ ನಡೆದಿದೆ ಎಂದು ಕೇಳಬರುತ್ತದೆ. ನಿಜವೇ? ಈ ಪ್ರೆಸಿಡೆಂಟರಿಗೆ ಓಟು ಕೊಡಬಲ್ಲ ಬಹುಪಕ್ಷದ ಸದಸ್ಯರೇ ಆರಿಸಿ ಬರುವಂತೆ, ಕಾಂಗ್ರೆಸಿನ ಬಲೆ, ಬಹು ಜಾಣತನದಿಂದ ಹಾಸಲ್ಪಟ್ಟಿದೆಯೇ? ಅಂತಹ ಮೆಂಬರರಿಗೆ ಕಾಂಗ್ರೆಸಿನ ಹೆಸರಲ್ಲಿ ಏನಾದರೂ ಸಹಾಯವು ಒದಗಿದ್ದೆಯೇ? ಹಾಗಿದ್ದರೆ ‘ನವಯುಗ'ದ ಉದ್ಗಾರದಲ್ಲಿ ತಪ್ಪೇನು? ಆಶ್ಚರ್ಯವೇನು?

ಮುಂದಿನ ಮಾತು ಮುಂದೆ.

ಮಂಗಳೂರು

ಕಲ್ಯಾಣಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವರೆ ‘ದಿ ಕಲ್ಯಾಣಪುರ ಶುಗರ್ ಮಿಲ್ಸ್, ಲಿಮಿಟೆಡ್' ಎಂಬ ಹೆಸರಿನಿಂದ ಒಂದು ಕಂಪೆನಿಯು ಐದು ಲಕ್ಷ ಮೂಲಧನವನ್ನೇರಿಸುವ ಅಧಿಕಾರ ಹೊಂದಿ ರಿಜಿಸ್ಟರ್ ಆಗಿರುತ್ತದೆ. ಈ ಮೂಲಧನದ ಪೈಕಿ ೨ ಲಕ್ಷ ರೂಪಾಯಿ ಮೂಲಧನವನ್ನು ಷರತಿಗೆ ಕೊಡುವರಾಗಿ ತಿಳಿದುಬರುತ್ತದೆ. ಜಿಲ್ಲೆಯ ಸುಪ್ರಸಿದ್ಧ ಗೃಹಸ್ಥರು ಇದರ ಡೈರೆಕ್ಟರರಾಗಿರುತ್ತಾರೆ. ಮ| ರಾ| ರಾ| ಗಳಾದ ಅಮ್ಮೆಂಬಳ ಶ್ರೀನಿವಾಸ ಪೈಗಳು ಪ್ರೆಸಿಡೆಂಟರೂ, ಬಂಟ್ವಾಳ ವೈಕುಂಠ ಬಾಳಿಗರು ವೈಸ್ ಪ್ರೆಸಿಡೆಂಟರೂ ಆಗಿ ಆರಿಸಲ್ಪಟ್ಟಿದ್ದಾರೆ. ಇತರ ಡೈರೆಕ್ಟರರು—ಮ| ರಾ| ರಾ|ಗಳಾದ ಎಚ್. ಲಕ್ಷ್ಮೀನಾರಾಯಣ ಕಾಮತರು, ವಿ. ಎಸ್. ಕುಡ್ವರು, ಕಿನ್ನಿ ಶೇಷಗಿರಿರಾಯರು, ಉಳ್ವಾಲ ಶ್ರೀನಿವಾಸ ಮಲ್ಯರು, ಮಣೇಲ ಅಣ್ಣಪ್ಪ ನಾಯ್ಕರು, ಸುಜೀರ ಪುಂಡಲೀಕ ನಾಯ್ಕರು ಮತ್ತು ಸಾಹುಕಾರ್ ವೆಂಕಟೇಶ ಪೈಗಳು. ರೂಪಾಯಿ ೨ ಲಕ್ಷ ಮೂಲಧನದ ಪೈಕಿ ಮೂವತ್ತು ಸಾವಿರ ಮೂಲಧನಕ್ಕೆ ಮೇಲ್ಪಟ್ಟು ಈಗಾಗಲೇ ಕೂಡಿದುದಾಗಿ ತಿಳಿದುಬರುತ್ತದೆ. ಕಬ್ಬನ್ನು ಒದಗಿಸುವ ವ್ಯವಸ್ಥೆಯನ್ನು ಜಮೀನುದಾರರಾಗಿರುವ ಕಿನ್ನಿ ಶೇಷಗಿರಿರಾಯರ ಮತ್ತು ಗಂಗೊಳ್ಳಿ ಲಕ್ಷ್ಮೀನಾರಾಯಣ ಕಾಮತರ ಮೂಲಕವೂ, ಕಾರಖಾನೆಯ ಯಾಂತ್ರಿಕ ವ್ಯವಸ್ಥೆಯನ್ನು ಸಿ. ಪಿ. ಸಿ. ಕಂಪೆನಿಯ ಜನರಲ್ ಮೆನೇಜರರವರಾದ ವಿ. ಎಸ್. ಕುಡ್ವರ ಮೂಲಕವೂ ಮಾಡುವರಾಗಿಯೂ ತಿಳಿದುಬಂದಿದೆ. ಕಾರ್ಖಾನೆಯು ಯಶಸ್ವಿಯಾಗಿ ನಡೆದೀತೆಂದು ಆಶಿಸಲು ತುಂಬಾ ಆಧಾರಗಳಿರುತ್ತವೆ. ಇದರ ಸಂಪೂರ್ಣ ವಿವರ ಅಂದರೆ ಪ್ರೊಸ್‌ಪೆಕ್ಟಸ್ ಜನವರಿ ಮೊದಲಿನ ವಾರದಲ್ಲಿ ಪ್ರಕಟವಾಗುವುದು.

ಮಂಗಳೂರಿನ ಕೆಥೊಲಿಕ ಮಹಿಳೆಯರ ಮಹಾಸಭೆಯೊಂದು ಕಳೆದ ತಾ. ೨೬ ರಿಂದ ೨೯ರ ವರೆಗೆ ಬೆಂದೂರು ಸ್ಯೆಂಟ್ ಅಗ್ನೇಸ್ ಕಾಲೇಜಿನಲ್ಲಿ, ಕೊಯಮುತ್ತೂರು ರೇಂಜಿನ ಶಾಲಾ ಇನಸ್ಪೆಕ್ಟ್ರೆಸ್‌ರವರಾದ ಮಿಸ್. ಸಿ. ಡಿ'ಸೋಜರವರ ಅಧ್ಯಕ್ಷತೆಯಲ್ಲಿ ೩ ದಿನ ಬಹಳ ವಿತರಣೆಯಿಂದ ನಡೆಯಿತು. ಇದರ ಆರಂಭೋತ್ಸವವನ್ನು ನಮ್ಮ ಬಿಶಪ್ ಸಾಹೇಬರು ನೆರವೇರಿಸುವವರಾದರು. ಒಟ್ಟಿಗೆ ೧೬ ಠರಾವುಗಳು ಮಂಜೂರಾದುವು. ಠರಾವುಗಳನ್ನು ತಂದವರ ಮತ್ತೂ ಅನುಮೋದಿಸಿದವರ ಸಮರ್ಥನೆಗಾಗಿ, ಅಯಾ ವಿಷಯಗಳ ಮೇಲೆ, ಮನೋಹರವಾದ ಉಪನ್ಯಾಸಗಳನ್ನೂ ಕೇವಲ ಮಹಿಳೆಯರೇ ಬರೆದು ಓದಿದರು. ಮಿತಸಂತಾನ, ಮತವಿರೋಧವಾದ ಅನೀತಿಯ ಸಾಹಿತ್ಯ, ಅಸಭ್ಯ ರೀತಿಯ ಉಡುಗೆತೊಡಿಗೆ, ಈಗಿನ ನಾಟಕಮಂದಿರ, ಸಿನೆಮಾಗೃಹ ಇವೇ ಕೆಲವು ಆ ವಿಷಯಗಳಲ್ಲಿ ಮುಖ್ಯವಾಗಿದ್ದುವು. ಈ ಸಂದರ್ಭದಲ್ಲಿ ಮದ್ರಾಸಿನ ಶರೀಫರ ಪತ್ನಿಯವರಾದ ಮಿಸೆಸ್ ಜೆ. ಎಂ. ಸ್ಮಿಥ್‌ರವರು ಒಪ್ಪೊತ್ತಿನ ಮಾತಿಗೆ ಇಲ್ಲಿಗೆ ಬಂದು, ಕಾನ್ಫರೆನ್ಸಿನಲ್ಲಿ ‘ಲಿಜನ್ ಆಫ್ ಮೇರಿ'ಯ ಕುರಿತು ಉಪನ್ಯಾಸ ಕೊಟ್ಟು, ಮರುದಿನವೇ ಮದ್ರಾಸಿಗೆ ಹಿಂದಿರುಗಿದರು.

(೧೩ನೇ ಪುಟಕ್ಕೆ ಮುಂದರಿಸಿಯದೆ.)

ಹಿಂದೂದೇಶ

ಕಾಂಗ್ರೆಸಿನ ಪ್ರಥಮ ಅಧಿವೇಶನದ ಸ್ಮಾರಕವಾಗಿ ಬೊಂಬಯಿಯಲ್ಲಿ ಒಂದು ಶ್ವೇತಶಿಲೆಯ ಹಲಗೆಯನ್ನು ಪಂಡಿತ ಮಾಳವ್ಯರ ಹಸ್ತದಿಂದ ಸ್ಥಾಪಿಸುವ ಏರ್ಪಾಡು ನಡೆದಿದೆ.

ಕೆಲವು ದಿನಗಳಿಂದ ಮದ್ರಾಸ್ ಸಂಗೀತ ಸಭೆಯ ಆಶ್ರಯದಲ್ಲಿ, ಮದ್ರಾಸಿನಲ್ಲಿ ಮೈಸೂರು ಆಸ್ಥಾನ ಸಂಗೀತ ವಿದ್ವಾನ್ ಸಂಗೀತ ಶಾಸ್ತ್ರರತ್ನ, ಕೆ. ವಾಸುದೇವ ಆಚಾರ್ಯರ ಅಧ್ಯಕ್ಷತೆಯಲ್ಲಿ, ೯ನೆಯ ಸಂಗೀತ ಸಮ್ಮೇಳನವು ಜರುಗುತ್ತಿದ್ದು ಶ್ರೀ. ಆಚಾರ್ಯರಿಗೆ 'ಸಂಗೀತ ಸಾಹಿತಿ ವಲ್ಲಭ'ನೆಂಬ ಮತ್ತೊಂದು ಮಹಾಗೌರವದ ಬಿರುದೂ ದೊರಕಿದೆ. ಈ ಮಹನೀಯರು ನಮ್ಮ ಉಡುಪಿ ಮೊದಲಾದ ಕೆಲವೆಡೆಗಳಿಗೆ ಹಿಂದೆರಡು ಸಲ ದಯೆಮಾಡಿಸಿದ್ದು ಸಂಗೀತ ಕಚೇರಿಗಳನ್ನೂ ನಡೆಸಿದ್ದರು.

ಸಮಗ್ರ ಭಾರತದ ೧೦ನೆಯ ಮಹಿಳಾ ಸಮ್ಮೇಳನವು ತಿರುವಾಂಕೂರಿನಲ್ಲಿ ಅಲ್ಲಿನ ಮಹಾರಾಣಿ ಸೇತು ಪಾರ್ವತಿ ಬಾಯಿಯವರ ಅಧ್ಯಕ್ಷತೆಯಲ್ಲಿ ಕಳೆದ ವಾರ ಜರುಗಿತು.

ಕರಾಚಿಯ ಡಾಕ್ಟರ್ ಹಿಂಗರಣಿಯವರು, ಒಂದು ಅಪರೂಪವಾದ ಠರಾವನ್ನು ಅಲ್ಲಿನ ಕಾರ್ಪರೇಶನಿನ ಮುಂದಿರಿಸುವ ಯೋಚನೆ ಮಾಡಿರುತ್ತಾರೆ. ೨೫ ವರ್ಷ ಪ್ರಾಯಕ್ಕೆ ಮೀರಿದ ಅಥವಾ ೨೫ ವರ್ಷದವರಾಗಿದ್ದು, ಅವರ ತಿಂಗಳ ಸಂಬಳವು ೧೦೦ ರೂಪಾಯಿ ಅಥವಾ ಅದಕ್ಕೂ ಮಿಕ್ಕಿದ ಆದಾಯವುಳ್ಳ ಎಲ್ಲ ಬ್ರಹ್ಮಚಾರಿಗಳ ಮೇಲೂ, ಅವರ ಆದಾಯದ ಪ್ರಮಾಣದಂತೆ ಸೇಕಡಾ ೨೫ರ ಹೊಸ ತೆರಿಗೆ ಹೇರಬೇಕೆಂಬುದೇ ಆ ಠರಾವಿನ ಸಾರಾಂಶ. ಸಾಮಾನ್ಯವಾಗಿ ಸಿಂಧ್ ಪ್ರಾಂತದಲ್ಲಿ ಹುಡುಗ ಹುಡುಗಿಯರ ಸಹವಿದ್ಯಾಭ್ಯಾಸದ ದುಷ್ಪರಿಣಾಮವಾಗಿ ಹುಡುಗರು ಪ್ರೇಮಪಾಶಕ್ಕೆ ಒಳಗಾಗಿ, ಪಾಠಗಳ ಕಡೆಗೆ ಲಕ್ಷ್ಯ ಕೊಡದೆ, ಪರೀಕ್ಷೆಗಳಲ್ಲಿ ಫೈಲ್ ಆಗುತ್ತ, ಗ್ರೇಜುವೇಟರಾಗಲು ಕನಿಷ್ಟಪಕ್ಷ ೨೫ ವರ್ಷ ಪ್ರಾಯವಾದರೂ ಆಗುವುದರಿಂದ, ಅವರಿಗೆ ಮದುವೆಯಾಗಲು ವಿಳಂಬವಾಗುವುದೆಂದು, ಆ ಡಾಕ್ಟರರು ಈ ೨೫ ವರ್ಷ ಪ್ರಾಯದ ಮಿತಿಯನ್ನು ಕಲ್ಪಿಸಿದ್ದಾರೆ.

ಶೋಲಾಪುರದ ಡಿ। ಬೋರ್ಡಿನ ಉಪಾಧ್ಯಾಯರು ತಮಗೆ ಆಗಾಗ ಆಗುತ್ತಿರುವ ವರ್ಗಾವರ್ಗಿಗಳ ಉಪಟಳವನ್ನು ಸಹಿಸಲಾರದೆ, ಆ ಸಂಬಂಧ ತಮ್ಮದೊಂದು ಮೀಟಿಂಗ್ ಜರುಗಿಸುವುದರಲ್ಲಿರಲು, ಆ ಬೋರ್ಡಿನ ಆಫೀಸರರು ಆ ಮೀಟಿಂಗ್ ನಡೆಸಬಾರದೆಂದು ಬಹಿಷ್ಕಾರದ ಅಪ್ಪಣೆ ಕೊಟ್ಟರೂ, ಉಪಾಧ್ಯಾಯರು ಅದಕ್ಕೆ ಬೆದರದೆ ಅದನ್ನು ನಡಿಸಿಯೇ ಬಿಟ್ಟರು. ರಾಜಭಕ್ತಿಯನ್ನು ವ್ಯಕ್ತಗೊಳಿಸಿ, ವಿದ್ಯಾಂಗದ ಮಂತ್ರಿಗಳಲ್ಲಿಗೂ, ವಿದ್ಯಾಂಗದ ಡೈರೆಕ್ಟರರಲ್ಲಿಗೂ ತಮ್ಮದೊಂದು ಡೆಪ್ಯುಟೇಶನನ್ನು ಕಳುಹಬೇಕೆಂದೂ ಆ ಮೀಟಿಂಗಿನಲ್ಲಿ ನಿರ್ಧರಿಸಿರುವರು.

ಜಲಗಾಂವಿನ ಮಿಸೆಸ್ ಸೀತಾಬಾಯಿ ರಂಜಿ ಎಂಬ ವೀರ ಮಹಿಳೆ, ೨೫ ಗಂಟೆ ೧೪ ಮಿನಿಟುಗಳ ವರೆಗೆ ಎಡೆಬಿಡದೆ ಖಡ್ಗವನ್ನು ತಿರುಗಿಸಿ ಅಲ್ಲಿ ನೆರೆದಿದ್ದ ೨೫ ಸಾವಿರ ಮಂದಿ ಪ್ರೇಕ್ಷಕರನ್ನು ಬೆರಗುಗೊಳಿಸಿದಳು.

'ಮಿತಸಂತಾನ'ವೆಂಬ 'ಸಂತಾನನಾಶಕ'ವಾದ ಈ ಪಾಶ್ಚಾತ್ಯ ಪದ್ಧತಿಯ ಅತಿವ್ಯಾಪ್ತಿಯನ್ನು ತಡೆಗಟ್ಟಲು ಕಲ್ಕತ್ತೆಯಲ್ಲಿ ಒಂದು ಸಭೆ ಡಾಕ್ಟರ್ ಸುಂದರೀ ಮೋಹನ್‌ದಾಸರವರ ಅಧ್ಯಕ್ಷತೆಯಲ್ಲಿ ನಡೆದು ಅದಕ್ಕೊಂದು ಕ್ಲಮಿಟಿಯ ನೇಮಕವಾಗಿದೆ.

ಇಲ್ಲಿಯ ವರೆಗೆ ಸುಮಾರು ರೂ. ೨,೫೬೧,೯೩೬,೫೪೬ಗಳಷ್ಟು ಬಂಗಾರವು ನಮ್ಮ ದೇಶದಿಂದ ಪರದೇಶಗಳಿಗೆ ಹೋಗಿದೆ.

ಮೊರಾದಾಬಾದ್ ಪ್ರಾಂತದ ಖಾಹಿರ್ ಗ್ರಾಮದಲ್ಲಿ ಒಬ್ಬ ಹೆಂಗಸು ಒಂದು ಗಂಡು ಮಗುವನ್ನೂ ಒಂದು ಹಾವನ್ನೂ ಒಟ್ಟಿಗೆ ಹೆತ್ತಳು. ಆದರಲ್ಲಿ ಮಗು ಸತ್ತು ಹೋಯಿತು. ಹಾವು ಬದುಕಿದೆ. ಸೂಲಗಿತ್ತಿ ಈ ಹಾವಿನಿಂದ ಹೇಗೋ ಬದುಕಿಕೊಂಡಳು. ತಾಯಿಯ ಸ್ಥಿತಿ ವಿಷಮವಾಗಿದೆ.

ಸೇಲಮ್ಮಿನ ಶ್ರೀ. ಸಿ. ವಿಜಯರಾಘವಾಚಾರ್ಯರು, ಸಾರ್ವಜನಿಕ ಸೇವೆಯನ್ನು ಮಾಡಲಾರಂಭಿಸಿ ೫೦ ವರ್ಷಗಳಾದುದರಿಂದ, ಆ ಸಂಬಂಧದ ಸುವರ್ಣೋತ್ಸವದ ಕಾಲದಲ್ಲಿ, ಅವರಿಗೆ ಮದ್ರಾಸಿನ ವಿಕ್ಟೋರಿಯಾ ಪಬ್ಲಿಕ್ ಹಾಲಿನಲ್ಲಿ ದ. ಹಿಂದುಸ್ಥಾನದ ಪರವಾಗಿ ಒಂದು ಮಾನಪತ್ರವನ್ನು ಅರ್ಪಿಸಲಾಯಿತು. ಶ್ರೀ. ಎಸ್. ಶ್ರೀನಿವಾಸ ಅಯ್ಯಂಗಾರರು ಅಧ್ಯಕ್ಷರಾಗಿದ್ದರು. ಬಾಬೂ ರಾಜೇಂದ್ರ ಪ್ರಸಾದ, ಸರ್ ಪಿ. ಪಾತ್ರೋ, ಸರ್ ಮಿರ್ಜಾ ಇಸ್ಮಾಯೀಲ್ ಮೊದಲಾದ ಮಹನೀಯರ ಶುಭ ಸಂದೇಶಗಳಿದ್ದುವು. ಡಾ. ಸುಬ್ಬರಾಯನ್, ಶ್ರೀ. ರಾಜಗೋಪಾಲಾಚಾರಿಯರ್ ಮೊದಲಾದವರ ಭಾಷಣಗಳಿದ್ದುವು.

ಅಲ್ಲಹಾಬಾದಿನ ಜಾರ್ಜ್ ಟೌನಿನಲ್ಲಿ ಒಬ್ಬ ಬ್ರಾಹ್ಮಣ ಅಡಿಗೆಯವನೂ, ಅವನ ಹೆಂಡತಿಯೂ, ಮಗಳೂ ಒಂದು ಕೊಟಡಿಯ ಬಾಗಿಲು ಕಿಟಿಕಿಗಳನ್ನು ಮುಚ್ಚಿ, ಇದ್ದಲಿನ ಬೆಂಕಿ ಇರಿಸಿ ಅಲ್ಲಿ ಮಲಗಿರಲು ಬೆಳಗ್ಗೆ ಹೆಂಡತಿಯೂ, ಮಗಳೂ ಸತ್ತಿದ್ದರು. ಬ್ರಾಹ್ಮಣನು ಅಪಾಯಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿದ್ದಾನೆ.

ನಮ್ಮ ೨೧ನೇ ಕರ್ಣಾಟಕ ಸಾಹಿತ್ಯ ಸಮ್ಮೇಳನದ ವಾರ್ಷಿಕಾಧಿವೇಶನವು ಬೊಂಬಯಿಯ ಕವಾಸ್ಜಿ ಜಹಾಂಗೀರ್ ಹಾಲಿನಲ್ಲಿ ಬಹಳ ವೈಭವಯುಕ್ತವಾಗಿ ಜರುಗಿತು. ಬೊಂಬಯಿಯ ವಿದ್ಯಾಂಗದ ಮಂತ್ರಿಗಳಾದ ದಿವಾನ್ ಬಹದೂರ್ ಎಸ್. ಟಿ. ಕಂಬಳಿಯವರು ಈ ಅಧಿವೇಶನವನ್ನು ತೆರೆದರು. ಸ್ವಾ॥ ಸಮಿತಿಯ ಅಧ್ಯಕ್ಷರಾದ ಶ್ರೀ. ಎ. ಆರ್. ಜಹಗೀರ್‌ದಾರ್‌ರವರೂ, ಸಮ್ಮೇಳನದ ಅಧ್ಯಕ್ಷರಾದ ಶ್ರೀ. ಎನ್. ಎಸ್. ಸುಬ್ಬರಾಯರೂ ವಿಚಾರಪೂರ್ಣವಾದ ಭಾಷಣಗಳನ್ನು ಕೊಟ್ಟರು. ಭಾಷಣಗಳೆಲ್ಲ ಕನ್ನಡದಲ್ಲಿಯೇ ಇದ್ದುವು. ಈ ಅಧಿವೇಶನಕ್ಕೆ ಕರ್ಣಾಟಕದ ನಾನಾ ಭಾಗಗಳಿಂದ ಸುಮಾರು ೨೦೦ ಮಂದಿ ಡೆಲಿಗೇಟರುಗಳು ಬಂದಿದ್ದರು.

ಪಾಟ್ನಾ ಪ್ರಾಂತದಲ್ಲಿ ಮಿತಪುರ ದಯಾನಂದ ಶಾಲೆಯಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕಳುಹಿಸುವ ಒಂದು ಶಾಲಾ ಪರೀಕ್ಷೆ ನಡೆದು, ಅದರಲ್ಲಿ ಫೈಲಾದ ಇಬ್ಬರು ವಿದ್ಯಾರ್ಥಿಗಳು, ಸಮಯ ಸಾಧಿಸಿ, ಶಾಲೆಯ ಹೆಡ್ಮಾಸ್ಟರರ ಕೋಣೆಯೊಳ ನುಗ್ಗಿ ಅವರ ಕನ್ನಡಕವನ್ನೆಳೆದು ಪುಡಿಮಾಡಿದರೆಂದೂ, ಅವರನ್ನು ಹೊಡೆದು ಬಡೆದರೆಂದೂ ತಿಳಿದುಬರುತ್ತದೆ.

ಕಾಂಗ್ರೆಸಿನ ಸುವರ್ಣೋತ್ಸವಗಳಿಗೆ ಸ್ಥಳೀಯ ಬೋರ್ಡುಗಳ ಹಣ ಖರ್ಚುಮಾಡುವುದಲ್ಲವೆಂದು ಮದರಾಸ್ ಮಂತ್ರಿಗಳ ಅಪ್ಪಣೆ. ಸಾರ್ವಜನಿಕ ಕಟ್ಟಡಗಳ ಮೇಲೆ ರಾಷ್ಟ್ರೀಯ ಧ್ವಜವೇರಲಾಗದೆಂದು ಮೈಸೂರಲ್ಲಿ ಮೈಸೂರು ಮ್ಯಾಜಿಸ್ಟ್ರೇಟರ ನಿರ್ಬಂಧ; ಸಾರ್ವಜನಿಕ ಸಭೆಗಳಾಗಬಾರದು; ಮೆರವಣಿಗೆಯಾಗಬಾರದೆಂದು ಲಾಹೋರ್ ಅಧಿಕಾರಿಗಳ ಹಿಡಿತಡೆ; ಫೈಜಾಬಾದಿನಲ್ಲಿಯಂತೂ ಕಾಂಗ್ರೆಸ್ ಮೆರವಣಿಗೆಯ ಮೇಲೆ ಪ್ರಕರಣ ೧೪೪; ಇವೆಲ್ಲ 'ಶ್ರೇಯಾಂಸಿ ಬಹು ವಿಘ್ನಾನಿ'.

(೧೨ನೇ ಪುಟದಿಂದ)

ಇಲ್ಲಿ ಕಾಂಗ್ರೆಸ್ ಸುವರ್ಣೋತ್ಸವ ಸಮಾರಂಭವು ಇದೇ ಕಳೆದ ತಾ. ೨೮ನೇ ಶನಿವಾರದ ದಿನ ಈ ಕೆಳಗಿನ ಕಾರ್ಯಕ್ರಮದಂತೆ ಜರಗಿಸಲ್ಪಟ್ಟಿತು. ಪ್ರಭಾತ ಫೇರಿ:—ಬೆಳಿಗ್ಗೆ ಘಂಟೆ ೫ಕ್ಕೆ; ಕಾಂಗ್ರೆಸ್ ಕಛೇರಿಯಿಂದ ಪ್ರಾರಂಭ; ರಾಷ್ಟ್ರಧ್ವಜ ವಂದನೆ:—ಬೆಳಿಗ್ಗೆ ಘಂಟೆ ೮-೩೦ಕ್ಕೆ; ಮೈದಾನಿನಲ್ಲಿ; ಹರಿಜನ ವಿದ್ಯಾರ್ಥಿಗಳಿಗೆ ತಿಂಡಿ ಹಂಚಿದುದು:—ಬೆಳಿಗ್ಗೆ ಘಂಟೆ ೯-೩೦ಕ್ಕೆ; ಡಿ. ಸಿ. ಮಿಶನ್ ಮೈನ್ ಶಾಲಾ ವಠಾರದಲ್ಲಿ; ಹಿಂದೀ ಭಾಷಣ ಸ್ಪರ್ಧೆ:—ಬೆಳಿಗ್ಗೆ ಘಂಟೆ ೧೦, ೧೧-೩೦; ಕೆನರಾ ಹೈಸ್ಕೂಲಿನಲ್ಲಿ; ಆಟಗಳು:—ದೇಶೀಯ ಕುಸ್ತಿ, ಓಟ ವಗೈರೆ ಸ್ಪರ್ಧೆ; ಮಧ್ಯಾಹ್ನ ಗಂಟೆ ೩-೩೦, ೫-೩೦; ಮೈದಾನಿನಲ್ಲಿ; ಸಾರ್ವಜನಿಕ ಸಭೆ:—ಸಾಯಂಕಾಲ ಘಂಟೆ ೫-೩೦ಕ್ಕೆ; ಮೈದಾನಿನಲ್ಲಿ; ಅಲ್ಲಿ ಕಾಂಗ್ರೆಸ್ ಅಧ್ಯಕ್ಷರ ಸಂದೇಶ ವಾಚನ; ಭಾಷಣಗಳು, ಇತ್ಯಾದಿ. ಪುರಮೆರವಣಿಗೆ:—ಸಾಯಂಕಾಲ ಘಂಟೆ ೭-೩೦ಕ್ಕೆ; ಮೈದಾನಿನಿಂದ ಪ್ರಾರಂಭ; ಕನ್ನಡ ಪ್ರಹಸನ:—ರಾತ್ರೆ ಘಂಟೆ ೯-೩೦ರಿಂದ; ಬೆಸೆಂಟ್ ಬಾಲಿಕಾ ಪಾಠಶಾಲೆಯ ವಠಾರದಲ್ಲಿ. ಈ ಸಂಬಂಧ ಕಾಂಗ್ರೆಸಿನ ಕೆಲಸಗಾರರಲ್ಲಿ ತುಂಬ ಉತ್ಸಾಹವಿದ್ದು, ಅವರು ಶ್ರಮಪೂರ್ವಕವಾಗಿ ಕೆಲಸ ಮಾಡಿದರೂ, ಮುಂದಾಳುಗಳೆಂಬವರಲ್ಲಿ 'ಕೆಲವರು' ಅವರವರ ಕಾರಣಾಂತರಗಳಿಂದ ಭಾಗವಹಿಸಲಿಲ್ಲ. ಅಧ್ಯಕ್ಷರು ಎರಡು ಮೂರು ದಿನಗಳ ಮಟ್ಟಿಗೆ ರಜೆ ಅರ್ಜಿ (Sick leave) ಬರೆದು ಹಾಕಿ, ಗೈರ್ ಹಾಜರ್ (absent) ಅಂತೆ! ಪಟ್ಟಣದಲ್ಲಿ ಕೆಲವು ಕಡೆ ಪತಾಕೆಗಳ ಶೃಂಗಾರವೂ ವಾಡಿಕೆಯಾದ ವಿದ್ಯುದ್ದೀಪಮಾಲೆಗಳ ಅಲಂಕಾರವೂ ಇದ್ದುವು.

ಕಳೆದ ರಮ್‌ಜಾನ್ ಹಬ್ಬದ ದಿನ, ಇಲ್ಲಿಯ ಇಸ್ಲಾಂ ಧರ್ಮದವರ ಸಾವಿರಾರು ಮಂದಿಯ ಮೆರವಣಿಗೆಯೊಂದು ಜುಮ್ಮಾ ಮಸೀದಿಯಿಂದ ಹೊರಟು, ಈದ್ಗಾ ಪ್ರಾರ್ಥನ ಮಂದಿರದ ವರೆಗೆ ಹೋಗಿ ಹಿಂದಿರುಗಿತು. ಈ ಭಾರಿಯ ಅವರ ವಾಲಂಟಿಯರ್ ದಳದ ಏರ್ಪಾಡು ಸ್ತುತ್ಯವಾಗಿದ್ದಿತು.

ಕಳೆದ ಆದಿತ್ಯವಾರ ಇಲ್ಲಿಯ ಗ॥ ಹಾ॥ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಯು. ಸಿ. ಎಸ್. ಭಟ್ಟರ ಅಧ್ಯಕ್ಷತೆಯಲ್ಲಿ ಈ ಜಿಲ್ಲೆಯ ಎಲಿಮೆಂಟರಿ ಶಾಲೋಪಾಧ್ಯಾಯರುಗಳ ವಾರ್ಷಿಕ ಮಹಾಸಭೆ ಜರುಗಿ ಹಲವು ಪ್ರಾಮುಖ್ಯ ಠರಾವುಗಳಾದುವು. ಜಿಲ್ಲೆಯ ಸೆಂಟರುಗಳಲ್ಲಿ ಸೇಕಡಾ ೫೦ ಸೆಂಟರುಗಳಿಂದ ಉಪಾಧ್ಯಾಯರು ಬಂದಿದ್ದರು. ಅಂದೇ ಮಧ್ಯಾಹ್ನ ಎಯಿಡೆಡ್ ಶಾಲೆಗಳ ಪುರೋಭಿವೃದ್ಧಿಯ ಕುರಿತೂ ಸಮಾಲೋಚನೆಯನ್ನು ನಡೆಸಲಾಯಿತು.

ಕೆನರಾ ಹೈಸ್ಕೂಲಲ್ಲಿ ಶಾಲಾ ವರ್ಧಂತಿಯಂದು ಶ್ರೇಯಃಪ್ರಾರ್ಥನೆಯನ್ನು ನಡೆಸಿದವರು ಶ್ರೀ. ನಯಂಪಳ್ಳಿ ರಾಮರಾವ್, ಬೀ. ಏ. ಬಿ. ಎಲ್. ಎಂದೂ; ಪ್ರಾತಃಕಾಲ ಭಾವಚಿತ್ರಗಳನ್ನು ಅನಾವರಣ ಮಾಡಿದವರು, ಶ್ರೀ. ಬೈಲ್ ಗೋಪಾಲಕೃಷ್ಣ ರಾವ್, ನಿವೃತ್ತ ಸಬ್ ಜಡ್ಜರೆಂದೂ ತಿದ್ದುಪಡಿ ಮಾಡಿಕೊಳ್ಳುವಂತೆ ಸೂಚನೆ.

ಕಸ್ಟಮ್ಸ್ ಕಲೆಕ್ಟರ್ ಮಿ. ಡಿಕುಜಾರವರು ಕಳೆದ ವಾರ ಇಲ್ಲಿಗೆ ಬೊಂಬಯಿಯಿಂದ ಬಂದಿರುವರು.

ಬಂಗ್ಗಾರದ ಬೆಲೆ ಏರಿದರೂ ಈ ಬಾರಿಯ ಇಲ್ಲಿಯ ವಸ್ತುಪ್ರದರ್ಶನದಲ್ಲಿ, ಬಂಗಾರದ ಪದಕಗಳು ಧಾರಾಳವಾಗಿವೆ. ಆ ಪದಕಗಳ ಸಂಖ್ಯೆ ಸುಮಾರು ೬೪-೬೫. ಇಷ್ಟು ಪದಕಗಳನ್ನು ತಾನೇ ದಾನ ಮಾಡಲು ನಮ್ಮ ಪ್ರದರ್ಶನ ಸಮಿತಿ ಸಮರ್ಥವಾಗಿದ್ದರೆ ಬಹಳ ಸಂತೋಷ. ಈ ಬಂಗಾರದ ಪದಕಗಳಿಗೆ ಪಾತ್ರರಾದವರಲ್ಲಿ ಈ ಕೆಳಗಿನ ಸಂಸ್ಥೆಗಳವರೂ ಕೆಲವರು. ಮೊ। ಗಳಾದ ಕೇರಳ ಸೋಪ್ ಇನ್‌ಸ್ಟಿಟ್ಯೂಟ್, ಕಲ್ಲಿಕೋಟೆ; ಷಾ ಕಂಪೆನಿ; ಸುಜೀರ್‌ಕಾರ್ಸ್ ಟೈಲ್ ವರ್ಕ್ಸ್, ಲಿಡ್.; ಗೋವರ್ಧನ್ ದಾಸ್ ಸಿ। ಓ। ಡಿ।; ಕೆ. ಆರ್. ಕೆ. ಸೇಟ್; ಪುತ್ತು ವೈಕುಂಠ ಸೇಟ್; ಗಣಪಯ್ಯ ಅಂಡ್ ಸನ್ಸ್; ಸ್ವಸ್ತಿಕ್ ಒಯಿಲ್ ಮಿಲ್ಸ್, ಲಿಮಿಟೆಡ್‌ನವರ ಸಾಬೂನುಗಳಿಗೆ (ಸ್ಥಳೀಯ ಏಜಂಟರು ಸೂಜೀರ್ ರಾಯಪ್ಪ ನ್ಯಾಕ ಎಂಡ್ ಕೊ.)

ಇಲ್ಲಿಯ ಜಪ್ಪುವಿನ ಸಮೀಪ ನೇತ್ರಾವತಿ ಸ್ನಾನಕ್ಕೆ ಕೆಲವು ಮಂದಿ ಗವರ್ನಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಹೋಗಿದ್ದಾಗ ಅವರಲ್ಲೊಬ್ಬ ೧೭ ವರ್ಷ ಪ್ರಾಯದ ಸಂಜೀವ ಎರಿಬಾತನು ನದಿಯ ಸೆಳವಿಗೆ ಸಿಕ್ಕಿ ಮೃತನಾದ.

ಕಾಸರಗೋಡಿನ ತಾ॥ ಹೆ॥ ಎಕೌಂಟಾಂಟರಾದ ಶ್ರೀ. ಎಂ. ಸುಬ್ಬರಾಯ ಕಾಮತರವರು, ತಮ್ಮ ಉದ್ಯೋಗ ನಿವೃತ್ತಿಗೆ ಪೂರ್ವದಲ್ಲಿ, ಬರುವ ಮಾರ್ಚಿ ತಾ. ೨೯ರ ವರೆಗೆ ರಜೆ ತೆಗೆದುಕೊಂಡು ಆದೇ ತಾ. ೩೦ರಲ್ಲಿ ನಿವೃತ್ತರಾಗುವುದರಿಂದ ಶ್ರೀ. ಕೆ. ಕೇಶವ ರಾಯರೇ ಆ ಸ್ಥಾನದ ಬದಲಿಯನ್ನು ಮುಂದೆಯೂ ನಿರ್ವಹಿಸುವರು.

ಇಲ್ಲಿಯ ಸ್ಟೇಶನರಿ ಸಬ್ ಮ್ಯಾಜಿಸ್ಟ್ರೇಟ್ ಶ್ರೀ. ಬೇಕಲ್ ನರಸಿಂಗ ರಾಯರು ೩ ತಿಂಗಳ ರಜೆ ಪಡೆದು, ಅವರ ಬದಲಿಗೆ ಶ್ರೀ. ಎಂ. ಬಿ. ಶಂಕರ ರಾವ್, ಬೀ. ಏ. ಇವರು ಹಂಗಾಮಿಯಾಗಿ ಆ ಸ್ಥಾನಕ್ಕೆ ಸದ್ಯದಲ್ಲೇ ಬರುವರೆಂದು ತಿಳಿದುಬರುತ್ತದೆ.

ಮಂಗಳೂರು ಬಂದರದಲ್ಲಿ ಸ್ಟೀಮರುಗಳು.

ಮುಂಬಾಯಿಯಿಂದ ಎಸ್. ಎಸ್. ಭದ್ರಾವತಿಯು ಸೋಮವಾರ ಪ್ರಾತಃಕಾಲ ಬಂದು, ಇಂದು ಪ್ರಾತಃಕಾಲ ೯ ಘಂಟೆಗೆ ಹೊರಟು ಹೋಯಿತು. ಎಸ್. ಎಸ್. ನೇತ್ರಾವತಿಯು ಗುರುವಾರ ಪ್ರಾತಃಕಾಲ ಬಂದು, ಅಂದೇ ರಾತ್ರಿ ಕಲ್ಲಿಕೋಟೆಗೆ ತೆರಳಿ, ಶುಕ್ರವಾರ ರಾತ್ರಿ ಹಿಂತಿರುಗಿ ಶನಿವಾರ ಪ್ರಾತಃಕಾಲ ೧೦ ಘಂಟೆಗೆ ಮುಂಬಾಯಿಗೆ ತೆರಳುವದು.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 998/35.

ಮಂಜೇಶ್ವರ ಶ್ರೀಮದನಂತೇಶ್ವರ ದೇವರ ಭಂಡಾರದ ಟ್ರಸ್ಟಿಗಳು. (1) ಬಿ. ಶ್ರೀನಿವಾಸ ಬಾಳಿಗ, ಮಾಜಿ ಡಿಸ್ಟ್ರಿಕ್ಟ ಬೋರ್ಡು ಇಂಜಿನೀಯರ. (2) ಕೆ. ಪಿ. ಮಾಧವ ರಾವ್, ಬಿ. ಎ., ಎಮ್. ಎಲ್., ಎಡ್ವೊಕೇಟು ಮಂಗಳೂರು ಶಹರು, ಕೊಡಿಯಾಲಬೈಲಲ್ಲಿ ಇರುವವರು. (3) ಯಂ. ಎನ್. ಕಿಣಿ, ಯಂ. ಅನಂತ ಕಿಣಿಯರ ಮಗ, ಮಂಜೇಶ್ವರ ಕಸಬೆಯಲ್ಲಿರುವವರು } ವಾದಿ

ಮತ್ತು

(1) ಜ್ಯಾರ ಬೆಳಚಪ್ಪಾಡ, ಮಜಿಬೈಲು ಕರ್ತಪ್ಪ ಬೆಳಚಪ್ಪಾಡನ ಮಗ, ಉದ್ಯಾವರ ಗ್ರಾಮದಲ್ಲಿರುವವ. (2) ಕುಂಞಪ್ಪ ಬೆಳ್ಚಪ್ಪಾಡ, ಮಂಜಪ್ಪ ಕಾರ್ನವನ ಮೊಮ್ಮಗ, ಹೊಸಬೆಟ್ಟು ಗ್ರಾಮದಲ್ಲಿರುವವ } ಪ್ರತಿವಾದಿ

ಪ್ರತಿವಾದಿಯರು ವಾದಿ ಭಂಡಾರಕ್ಕೆ ತಾ. 2-11-1932ರಲ್ಲು ರೂಪಾಯಿ 137-0-0ಕ್ಕೆ ಬರಕೊಟ್ಟ ಪ್ರೋ. ನೋಟಿನ ಅಸಲು ಬಡ್ಡಿ ಐವೇಜು ಕೂಡ ರೂಪಾಯಿ 174—6—9ಕ್ಕೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 10-1-1936ಕ್ಕೆ 1ನೇ ಪ್ರತಿವಾದಿಯ ನೋಟೀಸಿನ ಬಗ್ಯೆ ಇಟ್ಟಿದೆ. ಆ ವ್ಯಾಜ್ಯದಲ್ಲಿ ಆತಗೆ ಏನಾದರೂ ಆಕ್ಷೇಪವಿದ್ದರೆ ಆ ವ್ಯಾದೆಗೆ ಕೋರ್ಟಿಗೆ ಹಾಜಿರು ಆಗಿ, ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದರಿ ವ್ಯಾಜ್ಯವನ್ನು ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲಾದೀತು ಎಂತ ಸದರಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಸೋಣಾಗಿಯದೆ.

ಕಾಸರಗೋಡು,
27—12—1935. } **K. Devadas Shenai,**
Vakil for Plff.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 1009/35.

ಕುದ್ಕುಂಜೆ ನಾರಾಯಣ ಪೈ, ದೇವ ಪೈಗಳವರ ಮಗ ಮಂಗಳೂರು ತಾಲೂಕು, ಬಂಟ್ವಾಳ ಕಸಬೆಯಲ್ಲಿ ವ್ಯಾಪಾರ ಮಾಡುವವರು } ವಾದಿ

ಮತ್ತು

(1) ಅಬ್ದುಲ್ಲ ರಹಿಮಾನ ಬ್ಯಾರಿ, (2) ಕುಂಞಮ್ಮದೆ ಬ್ಯಾರಿ, (3) ಕುಂಞಾಚಮ್ಮ, (4) ಖೈಜುಮ್ಮ, ಮೃತಪಟ್ಟ ಹಮ್ಮದಕುಂಞಿ ಬ್ಯಾರಿ ಮಕ್ಕಳು, (5) ಅಬ್ದುಲ್ಲ ರಹಿಮಾನ ಬ್ಯಾರಿ, (6) ಪಕ್ಕೀರ ಬ್ಯಾರಿ, ಪಸ್ಮಾರಿ ಪೊಕ್ರೆ ಬ್ಯಾರಿ ಮಕ್ಕಳು, ಮುಳಿಂಜ ಗ್ರಾಮದಲ್ಲಿರುವವರು } ಪ್ರತಿವಾದಿ

ವಾದಿಯು ಈ ಕೋರ್ಟಿನ R. E. A. 397/34ನೇ ಅರ್ಜಿಯ ತೀರ್ಪು ರದ್ದುಪಡಿಸಿ ಪ್ರತಿವಾದಿಯರ ಸ್ವಾಧೀನದಲ್ಲಿರುವ ಪ್ಲೆಯಿಂಟಿನಿಂದ ತೋರುವ ಆಸ್ತಿಗಳನ್ನು ಸ್ವಾಧೀನಪಡಿಸುವ ಬಗ್ಯೆ ವ ಇತರ ನಿವೃತ್ತಿಗಳನ್ನು ಅಪೇಕ್ಷಿಸಿ, ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 9—1—'36ಕ್ಕೆ 1ರಿಂದ 4ನೇ ಪ್ರತಿವಾದಿಯರ ನೋಟೀಸಿನ ಬಗ್ಯೆ ಇಟ್ಟಿದೆ. ಸದರಿ ವ್ಯಾಜ್ಯಕ್ಕೆ 1ರಿಂದ 4ನೇ ವರೇಗಿನ ಪ್ರತಿವಾದಿರಿಗೆ ಆಕ್ಷೇಪಗಳು ಇದ್ದರೆ, ಆ ವ್ಯಾದೆಗೆ ಕೋರ್ಟಿಗೆ ಹಾಜಿರು ಆಗಿ, ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಅದಕ್ಕೆ ತಪ್ಪಿದರೆ ಸದರಿ ವ್ಯಾಜ್ಯವು 1ರಿಂದ 4ನೇ ಪ್ರತಿವಾದಿಯರ ಮೇಲೆ ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲಾದೀತು ಎಂತ ಅವರಿಗೆ ಈ ಮೂಲಕ ತಿಳಿಸೋಣಾಗಿಯದೆ.

ಕಾಸರಗೋಡು,
27—12—1935. } **K. Devadas Shenai,**
Vakil for Plff

ತಾಲೂಕು ವರ್ತಮಾನ

ಉಡುಪಿ:— ಈ ತಾಲೂಕಿನ ರೈತರ ಯಾನೆ ವರ್ಗದಾರರ ಸಂಘದ ವಾರ್ಷಿಕ ಮಹಾಸಭೆಯು ತಾ. ೧—೧—೧೯೩೬ನೇ ಬುಧವಾರ ದಿವಸ ಪೂರ್ವಾಹ್ನ ಗಂಟೆ ೧೧ಕ್ಕೆ ಉಡುಪಿ ಕಸಬಾ ಸರಕಾರಿ ಆಸ್ಪತ್ರೆ ಎದುರು ಇರುವ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರಗುವುದು. ಸಂಘದ ಮೆಂಬರರು, ಮೆಂಬರರಲ್ಲದ ರೈತರು ಕೂಡ ದಯಮಾಡಿ ಸದರಿ ಸಭೆಗೆ ಬಂದು ಸಹಕರಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಸಭೆಯಲ್ಲಿ ಆಲೋಚಿಸತಕ್ಕ ವಿಷಯಗಳು—(೧) ೧೯೩೫ನೇ ಇಸವಿಯ ಬಾಬ್ತು ಸಂಘದ ರಿಪೋರ್ಟು ವ, ಜಮಾ ಖರ್ಚು ಲೆಕ್ಕ. (೨) ಮುಂದಿನ ವರ್ಷಕ್ಕೆ ಕಾರ್ಯಕಾರಿ ಮಂಡಳಿ ಚುನಾವಣೆ. (೩) ರಿಸೆಟ್ಲ್‌ಮೆಂಟಿನಲ್ಲಿ ಏರಿದ ವ ಕಳೆದ ವರ್ಷ ರಿಯಾಯತಿ ತೋರಿಸಿದ ತೀರ್ವೆ ವಸೂಲಿ ವಿಷಯ. (೪) ಈ ವರ್ಷ ಫಸಲಿ ಬಾಬಿನಲ್ಲಿಯೂ ದವಸ ಧಾನ್ಯಗಳ ಕ್ರಯದ ವಿಷಯದಲ್ಲಿಯೂ ವಗೈರೆ ರೈತರು ಪಟ್ಟ ಸಂಕಷ್ಟಗಳು ವ ಅವುಗಳ ನಿವಾರಣೆ ವಿಷಯ. (೫) ಅಧ್ಯಕ್ಷರ ಅನುಮತಿಯಿಂದ ಸಭೆಯ ಮುಂದೆ ಬರುವ ಇತರ ವಿಷಯಗಳು, ಎಂದು ಶ್ರೀ. ಬಿ. ವಾಸುದೇವರಾವ್, ಕಾರ್ಯದರ್ಶಿ ಇವರೂ ಅಧ್ಯಕ್ಷ ಶ್ರೀ. ಕೆ. ಜಿ. ಬಲ್ಲಾಳರೂ ತಿಳಿಸುತ್ತಾರೆ.

ಇಲ್ಲಿಯ ಕಾಂಗ್ರೆಸ್ಸ್ ಸ್ವರ್ಣಮಹೋತ್ಸವದ ಸಂಬಂಧವಾಗಿ ಆನೆಯ ಮೇಲೆ ದೇಶಪ್ರಮುಖರ ಭಾವಚಿತ್ರಗಳನ್ನಿಟ್ಟು ವಿಜೃಂಭಣೆಯಿಂದ ಸಾಯಂಕಾಲ ನಗರಮೆರವಣಿಗೆ, ಆ ಮೇಲೆ 'ರಾಮಕೃಷ್ಣ ಥೀಯೇಟರಿ'ನಲ್ಲಿ ತುಂಬಿದ ಸಭೆ, ಸಭಾಧ್ಯಕ್ಷರಾಗಿದ್ದ ಡಾಕ್ಟರ್ ಪಿ. ಜಿ. ಆಚಾರ್ಯರ ಹಾಗೂ ವಕೀಲರುಗಳಾದ ಶ್ರೀ॥ಗಳು ಕಾರಂತ ಮತ್ತು ವಾಸುದೇವರಾಯರುಗಳ ಸಂದರ್ಭೋಚಿತವಾದ ಸ್ಫೂರ್ತಿದಾಯಕವಾದ ಭಾಷಣಗಳು, ಇವೆಲ್ಲ ನೋಡುವವರಿಗೆ ಕೇಳುವವರಿಗೆ ಚಂದವಾಗಿತ್ತು.

ಕಾಸರಗೋಡು:—ಗ್ರೇಂಡ್ ಸನ್‌ಲೈಟ್ ಸರ್ಕಸ್ ಕಂಪೆನಿಯವರು ಕೆಲವು ದಿವಸಗಳಿಂದ ತಮ್ಮ ದೇಖಾವೆಗಳನ್ನು ಇಲ್ಲಿ ಪ್ರದರ್ಶಿಸುತ್ತಿದ್ದಾರೆ.

ಕೊಂಗ್ರೆಸ್ ಸುವರ್ಣ ಉತ್ಸವವು ಇಲ್ಲಿಯೂ ಕೊಂಗ್ರೆಸ್ ಕಾರ್ಯಕ್ರಮದಂತೆ ಜರಗಿಸಲ್ಪಟ್ಟಿತು. ಪ್ರಾತಃಕಾಲ ಪ್ರಭಾತ ಫೇರಿಯೂ ಧ್ವಜವಂದನೆಯೂ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಎದುರಿಗೆ ನಡೆಯಿತು. ಅಪರಾಹ್ನ ಘಂಟೆ ೪ಕ್ಕೆ ಕಾಸರಗೋಡು ಟೌನ್ ಬೋರ್ಡು ವ. ಶಾಲೆಯಲ್ಲಿ ಹರಿಜನರಿಗೆ ಶ್ರೀ. ಉಮೇಶರಾಯರಿಂದ ತಿಂಡಿ ಹಂಚಲಾಯಿತು. ಅನಂತರ ಧ್ವಜಾವರೋಹಣವು, ಮುನ್ಸೀಫ್ ಕೋರ್ಟು ಹಿಂಬದಿಯ ಟೇನಿಸ್ ಕೋರ್ಟ್ ಅಂಗಳದಲ್ಲಿ ಸಾರ್ವಜನಿಕ ಸಭೆಯೂ, ಶ್ರೀ. ಪಿ. ಎಲ್. ಪುಣಿಂಚತ್ತಾಯರ ಅಧ್ಯಕ್ಷತೆಯಲ್ಲಿ ನಡೆದು ಭಾಷಣಗಳಾದವು. ಈ ಕಾರ್ಯಕ್ರಮದ ನೋಟೀಸಿಗೆ ಸಹಿ ಹಾಕಿದವರಲ್ಲಿ ಅನೇಕರಾಗಲಿ, ಕೊಂಗ್ರೆಸ್ ಕಡೆಯ ಡಿ. ಬೋ. ಮೆಂಬರರಾಗಲಿ ಇದರಲ್ಲಿ ಭಾಗವಹಿಸದಿದ್ದರೂ ಉತ್ಸವವು ಇಲ್ಲಿಯ ಮಟ್ಟಿಗೆ ಯಶಸ್ವಿಯಾಗಿ ನಡೆಯಿತು.

ದ. ಕ. ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಮ್ಮೇಳನ, ಮಂಗಳೂರು.

ತಾ. ೨೯—೧೨—'೩೫ರಲ್ಲು ಆದಿತ್ಯವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಶ್ರೀಯುತ ಯು. ಸಿ. ಸುಬ್ರಮಣ್ಯ ಭಟ್, ಅವರ್ಗಳ್, ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರುಗಳ ಸಂಘದ ೬ನೇ ವಾರ್ಷಿಕ ಮಹಾಸಭೆಯು ಗವರ್ನಮೆಂಟು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ಕಟ್ಟಡದಲ್ಲಿ ಜರಗಿತು.

ಸಂಘದ ಅಧ್ಯಕ್ಷರಾದ ಶ್ರೀ॥ ಕುಕ್ಕಾಲು ಗಣಪಯ್ಯ ಸೆಟ್ರು ಸ್ವಾಗತ ಭಾಷಣವನ್ನಿತ್ತರು. ಸಂಘದ ಕಾರ್ಯದರ್ಶಿ ಶ್ರೀ॥ ವಿ. ಬಾಬು ಸೆಟ್ಟಿಯವರು ಸಂಘದ ವರದಿಯನ್ನೂ ರಾ. ಕೆ. ಆರ್. ಶೆಣೈಯವರು 'ಬಾಲಚಂದ್ರ' ಪತ್ರಿಕೆಯ ವರದಿಯನ್ನೂ ಸಭೆಯ ಮುಂದಿಟ್ಟರು. ಸಂಘವು ಸರಕಾರದಿಂದಲೂ, ಬೋರ್ಡಿನಿಂದಲೂ, ಉಪಾಧ್ಯಾಯರ ಸಾಂಪತ್ತಿಕ ಕೋರಿಕೆಯನ್ನು ಬೇಡುವುದಕ್ಕೋಸ್ಕರವಾಗಿಯೇ ಉದ್ಭವಿಸಿದುದಲ್ಲ—ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರ ವ ಅಭಿವೃದ್ಧಿ, ಗ್ರಾಮೋದ್ಧಾರ, ಮುಂತಾದ ಮಹತ್ವವಾದ ಉದ್ದೇಶಗಳನ್ನಿಟ್ಟುಕೊಂಡೂ ಉದ್ಭವಿಸಿರುತ್ತದೆ. ಉಪಾಧ್ಯಾಯರಲ್ಲಿ ಜಾಗೃತಿಯನ್ನುಂಟುಮಾಡಿ ಉದ್ದೇಶಿಸಿದ ಕಾರ್ಯದಲ್ಲಿ ತತ್ಪರರನ್ನಾಗಿ ಮಾಡುವ ಚಟುವಟಿಕೆಯನ್ನು ಹುಟ್ಟಿಸುತ್ತದೆ. ಈ ಬಗ್ಗೆ ಬೋರ್ಡು ಡಿಪಾರ್ಟುಮೆಂಟು, ಸರಿಯಾದ ಬೆಂಬಲವನ್ನು ಕೊಟ್ಟು, ವಿದ್ಯಾಪ್ರಚಾರದ ಅನೇಕ ಕಾರ್ಯಗಳನ್ನು ಮಾಡಲಿಕ್ಕೆ ಅಸ್ಪದವಿರುವುದರಿಂದ ಉಭಯ ಸಂಸ್ಥೆಯವರೂ ಸಂಘದೊಂದಿಗೆ ಸಹಕರಿಸಿ ಸಹಾನುಭೂತಿಯನ್ನು ತೋರಿಸಿದರೆ ಬೋರ್ಡಿನವರ ಮತ್ತು ಡಿಪಾರ್ಟುಮೆಂಟಿನವರ ಕೆಲಸವು ಅತ್ಯಂತ ಸುಲಭವಾಗುವುದು ಎಂಬಿತ್ಯಾದಿ ಹಲಕೆಲವು ಮಾತುಗಳನ್ನು ಕಾರ್ಯದರ್ಶಿಯವರಾಡಿದ ನಂತರ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಪಾಸಾದುವು. ಡಿ. ಬೋರ್ಡಿನ ಎಡ್ಯುಕೇಶನ್ ಫಂಡಿನಲ್ಲಿ ತುಂಬಾ ಹಣವು ಡೆಫಿಸಿಟ್ ನಿಂತಿರುವುದರಿಂದ ಎಲಿಮೆಂಟರಿ ವಿದ್ಯಾಪ್ರಚಾರಕ್ಕೆ ಮತ್ತು ಉಪಾಧ್ಯಾಯರ ವರ್ಗಕ್ಕೆ ತುಂಬಾ ತೊಡಕುಂಟಾಗಿದೆ. ಇಂಥಾ ದುಃಸ್ಥಿತಿ ಇನ್ನು ಮುಂದೆ ಬಾರದಂತೆ ೩೬-೩೭ರ ಬಜೆಟಿನಲ್ಲಿ ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ದೊರೆಯುವಂತೆ ಸರಕಾರವನ್ನು ಕೇಳುವುದಲ್ಲದೆ, ಸಂಸ್ಥಾನದ ನ್ಯಾ॥ ವಿ॥ ಸಭೆಯ ಮೆಂಬರರು ಈ ಬಾಬಿನಲ್ಲಿ ಚೆನ್ನಾಗಿ ಸಾಧಿಸುವಂತೆ ಎಲ್ಲಾ ಮೆಂಬರರಿಗೂ ಅಪೀಲು ಮಾಡಬೇಕಾಗಿ, ಒಂದು ವೇಳೆ ಕೈಗೂಡದಿದ್ದರೆ, ಸರಕಾರದ ಸಬ್ಸಿಡಿ ಸ್ಕೂಲುಗಳಿಗಾದರೂ ತಗಲುವ ಸಂಪೂರ್ಣ ಖರ್ಚನ್ನು ಸರಕಾರವು ಬೋರ್ಡಿಗೆ ಸಹಾಯ ಮಾಡಬೇಕಾಗಿ, ಪ್ರಕೃತದ ಸಂಬಳದ ಕಡಿತವನ್ನು ತೆಗೆದುಹಾಕಬೇಕಾಗಿ, ಇದಕ್ಕೆ ಸಾಧ್ಯವಿಲ್ಲದಿದ್ದಲ್ಲಿ ಬೋರ್ಡಿನ ಇತರ ನೌಕರರನ್ನೂ ಈ ಕಡಿತದ ಪಾಲಿಗೆ ತೆಗೆದುಕೊಳ್ಳಬೇಕಾಗಿ, ಸರಕಾರದ ವಾಪಾಸು ಬಂದ ೩೫—೩೬ನೇ ವರ್ಷದ ಎಡ್ಯುಕೇಶನ್ ಬಜೇಟಿನ ಯಾ ಮುಂದಿನ ವರ್ಷದ ಬಜೇಟಿನ ಆಲೋಚನೆಯ ಕಾಲದಲ್ಲಿ ಈ ಸಂಘದ ೫ ಜನ ಪ್ರತಿನಿಧಿಗಳ ಸೂಚನೆಗಳನ್ನು ಆಲೋಚಿಸುವರೆ ಎಡೆಕೊಡಬೇಕಾಗಿ, ಪ್ರಕೃತ ಜಾರಿಯಲ್ಲಿರುವ ಟೈಮ್ ಸ್ಕೇಲು ನ್ಯಾಯದೃಷ್ಟಿಯಿಂದ ಸರಿಯಲ್ಲದ ಕಾರಣ, ಹಯರ್ ಸ್ಕೇಲನ್ನು ಕೊಡಬೇಕಾಗಿ, ಉಪಾಧ್ಯಾಯರಲ್ಲಿ ಉತ್ಸಾಹವು ತುಂಬಾ ಉಂಟಾಗುವಂತೆ ಸಿಲೆಕ್ಷನ್ ಗ್ರೇಡ್ ಮತ್ತು ಎಡ್ವಾನ್ಸ್ ಇನ್‌ಕ್ರಿಮೆಂಟ್ ಕೊಡುವಂತೆ ಕೇಳಿಕೊಳ್ಳಬೇಕಾಗಿ, ಸಿಕ್ ಲೀವಿಗೆ ಪೂರ್ಣ ಸಂಬಳ ಕೊಡಬೇಕಾಗಿ, ಉಪಾಧ್ಯಾಯರ ರಿಟೈರ್‌ಮೆಂಟನ್ನು ೫೫ರಿಂದ ೬೦ನೇ ವರ್ಷಕ್ಕೆ ಏರಿಸಬೇಕಾಗಿ, ಸ್ಕೌಟ್ ಮತ್ತು ಕಬ್ ಮಾಸ್ಟರುಗಳಿಗೆ ಎಲೋವೆನ್ಸ್ ಕೊಡಬೇಕಾಗಿ, ಶನಿವಾರವನ್ನು ಪೂರ್ಣ ರಜಾದಿನವನ್ನಾಗಿ ಮಾಡಬೇಕಾಗಿ, ಶಾಲೆಗಳ ರಜಾಪಟ್ಟಿಗಳಲ್ಲಿ ಮಹಮ್ಮದೀಯರ ಹಬ್ಬಗಳಿಗೆ ಸ್ಥಾನ ಸಿಗಬೇಕಾಗಿ, ಸಂಬಳವು ೧೦ನೇ ತಾರೀಕಿನೊಳಗೆ ಸಿಕ್ಕುವಂತೆ ಕೇಳಬೇಕಾಗಿ, ಜ್ವರದ ಬತ್ತೆ, ಸಂಬಂಧಪಟ್ಟ ಉಪಾಧ್ಯಾಯರಿಗೆ ಕೊಡಬೇಕಾಗಿ, ೧ನೇ ತರಗತಿಯಲ್ಲಿ ೨೦ಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ, ಹೆಚ್ಚಿಗೆ ಉಪಾಧ್ಯಾಯರನ್ನು ಕೊಡಬೇಕಾಗಿ, ಟೆಕ್ಸ್ಟ್ ಮತ್ತು ರೆಫರೆನ್ಸ್ ಪುಸ್ತಕಗಳನ್ನು ಒದಗಿಸಿ ಕೊಡಬೇಕಾಗಿ, ಎಡೆಬಿಡದೆ ಸರ್ವಿಸನ್ನು ಲೆಕ್ಕ ಮಾಡಿ ಇನ್‌ಕ್ರಿಮೆಂಟನ್ನು ಕೊಡಲು ಬಿಟ್ಟುಹೋದವರ ಮಟ್ಟಿಗೆ ಪುನರಾಲೋಚಿಸಿ ಇನ್‌ಕ್ರಿಮೆಂಟ್ ಕೊಡಬೇಕಾಗಿ, ಹೆಡ್ಮಾಸ್ಟರರಿಗೆ ಪ್ರತ್ಯೇಕ ಸಂಬಳದ ಗ್ರೇಡು ಮಾಡಬೇಕಾಗಿ, ಲೋವರ್ ಎಲಿಮೆಂಟರಿ ಗ್ರೇಡು ಉಪಾಧ್ಯಾಯರು ಹಾಯರ್ ಗ್ರೇಡು ಪರೀಕ್ಷೆಯಲ್ಲಿ ಫೈಲಾದ ಸಬ್ಜೆಕ್ಟಿನಲ್ಲಿ ಮಾತ್ರ ಪರೀಕ್ಷೆ ಕೊಡಲಾಗುವಂತೆ ಮಾಡಬೇಕಾಗಿ, ಕ್ರೈಸ್ತಗುರುಗಳಿಗೆ ಉಪಾಧ್ಯಾಯರ ಟ್ರೈನಿಂಗ್ ಮಟ್ಟಿಗೆ ಇದ್ದ ವಿನಾಯತಿಯನ್ನು ತೆಗೆದುಹಾಕಬೇಕಾಗಿ, ಬೋರ್ಡು ಸ್ಕೂಲ್ ವಿದ್ಯಾರ್ಥಿಗಳಿಗೆ ೫ನೇ ಕ್ಲಾಸಿನ ವರೆಗೆ ಧರ್ಮಾರ್ಥ ವಿದ್ಯಾಭ್ಯಾಸ ಕೊಡಬೇಕಾಗಿ, ಏಡೆಡ್ ಸ್ಕೂಲಿಗೆ ಸೆಕೆಂಡರಿ ಗ್ರೇಡಿಗೆ ೨೦೦—೧೬—೩೬೦, ಯಚ್. ಇ. ಗ್ರೇಡ್ ೧೪೪—೮—೨೪೦, ಲೋವರ್ ಗ್ರೇಡ್ ೧೦೮—೬—೧೮೦ರ ಪ್ರಕಾರ ಸರ್ವಿಸ್ ಬಡ್ತಿ ಗ್ರೇಂಟನ್ನು ಕೊಡಿಸಬೇಕಾಗಿ, ಮಹಮ್ಮದೀಯರ ಶಾಲೆಗಳಲ್ಲಿ ಶಾಲಾ ಸಮಯದಿಂದ ಹೊರಗೆ ಖುರಾನು ಕಲಿಸುವವರಿಗೆ ಖುರಾನು ಎಲೋವೆನ್ಸ್ ಕೊಡಿಸಬೇಕಾಗಿ, ಮುಂತಾದ ಸುಮಾರು ೪೦—೫೦ ಠರಾವುಗಳು ಪಾಸಾದುವು—ಸಭೆಗೆ ರಾ.ಗಳಾದ ಮೊಳಹಳ್ಳಿ ಶಿವರಾಯರೂ, ಉಳ್ಳಾಲ ಮಂಗೇಶರಾಯರೂ ಮಂಗಳೂರು ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಸಂಜೀವ ಭಟ್ಟರೂ, ಡಿಸ್ಟ್ರಿಕ್ಟ್ ಬೋರ್ಡು ಎಡ್ಯುಕೇಶನ್ ಆಫೀಸರ್ ವೆಂಕಯ್ಯನವರೂ, ಗಣಪತಿ ಹ್ಯಾಸ್ಕೂಲಿನ ಹೆಡ್ಮಾಸ್ಟರ್ ಏಕಾಂಬರರಾಯರೂ, ಡಿಸ್ಟ್ರಿಕ್ಟ್ ಗಿಲ್ಡಿನ ಕಾರ್ಯದರ್ಶಿ ಮುಕುಂದರಾಯರೇ ಮೊದಲಾದ ಮಹನೀಯರು ಹಾಜರಿದ್ದರು. ಸಭಾಧ್ಯಕ್ಷರಾದ ಯು. ಸಿ. ಎಸ್. ಭಟ್ಟರು ಎಲಿಮೆಂಟರಿ ಶಾಲಾ ಉಪಾಧ್ಯಾಯರುಗಳ ಪರವಾಗಿ ಸರಕಾರದಲ್ಲಿ ತನ್ನಿಂದಾದಷ್ಟು ಪ್ರಯತ್ನ ಮಾಡುವೆನಾಗಿ, ಸ್ಫೂರ್ತಿದಾಯಕವಾದ ಭಾಷಣವನ್ನಿತ್ತ ಬಳಿಕ ಸಭೆಯು ಧನ್ಯವಾದ ಸಮರ್ಪಣೆ ಮತ್ತು ಉಪಾಹಾರದೊಂದಿಗೆ ಕೊನೆಗಂಡಿತು.

ಇಡೀ ಜಿಲ್ಲೆಯ ಪರವಾಗಿ ಆರು ಮಂದಿ ಬೋರ್ಡು ಶಾಲಾ ಉಪಾಧ್ಯಾಯರೂ, ಒಬ್ಬರು ಪಂಚಾಯತ ಶಾಲಾ ಉಪಾಧ್ಯಾಯರೂ, ಏಳು ಮಂದಿ ಏಡೆಡ್ ಶಾಲಾ ಉಪಾಧ್ಯಾಯರೂ ಇಬ್ಬರು ಮ್ಯುನಿಸಿಪಲ್ ಶಾಲಾ ಅಧ್ಯಾಪಕರೂ ಕೂಡಾ ೧೬ ಮಂದಿ ಮುಂದಿನ ವರ್ಷದ ಆಡಳಿತೆ ಕಮಿಟಿ ಮೆಂಬರರಾದರು—ಹಿಂದಿನ ವರ್ಷದ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರನ್ನು ಮುಂದಿನ ವರ್ಷಕ್ಕೂ ಅಯಾ ಸ್ಥಾನಗಳಿಗೆ ಆರಿಸಲಾಯಿತು.

'ಬಾಲಚಂದ್ರ' ಪತ್ರಿಕೆಯ ಹಿಂದಿನ ಚಂದಾದಾರರು ಮುಂದಕ್ಕೂ ಚಂದಾದಾರರಾಗಿದ್ದು, ಇದೇ ಮಾರ್ಚಿಯೊಳಗೆ ೧೦೦೦ ಚಂದಾದಾರರನ್ನು ಸೆಂಟರ್ ಕಾರ್ಯದರ್ಶಿಗಳೂ ಕಾರ್ಯಕಾರಿ ಮಂಡಳಿಯವರೂ ಶೇಖರಿಸಬೇಕು; 'ಬಾಲಚಂದ್ರ' ಪತ್ರಿಕೆಯ ಈಗಿನ ಎಡಿಟರರೊಂದಿಗೆ ಶ್ರೀ. ಹೊನ್ನಯ ಶೆಟ್ರು ಜತೆಸಂಪಾದಕರಾಗಬೇಕು ಎಂದು ಮುಂತಾಗಿ ತೀರ್ಮಾನಿಸಲಾಯಿತು.

Watch for the Second

PARIYAYAM SPECIAL

OF

KANTEERAVA

The only one of its kind in the SOUTH.

Only a few inner Advt. Pages left.
Book them early.

RATES.

Full page . . Rs. 12—0—0.
Half page . . „ 6—8—0.
Quarter page . . „ 3—8—0.
(Size of full page 16"×10½")

Further particulars from
THE ADVT. MANAGER.
(DEPT. P.)

೫ನೇ ಮಂಗಳೂರು ಕೈಗಾರಿಕೆ ಮತ್ತು ಕೃಷಿ ಪ್ರದರ್ಶನ.

ಹೀಗೆಂದೆನ್ನಿಸಿಕೊಳ್ಳುವ ಇದು ಇದೇ ತಾ. ೨೬ನೇ ಪ್ರಾತಃಕಾಲ ೧೦—೩೦ ಘಂಟೆಗೆ ಮಂಗಳೂರಿನ ಬಿಶೋಪರವರಿಂದ ತೆರೆಯಲ್ಪಟ್ಟಿತು. ಯಥಾಪ್ರಕಾರ ವ್ಯಾಸ್ ಪ್ರೆಸಿಡೆಂಟರ, ಸೆಕ್ರಿಟೆರಿಗಳ ಭಾಷಣವಿತ್ತು. ಒಳಗೆ ಹೋಗುವಾಗಲೇ ಬಲಕ್ಕೆ ಅಮೃತಾಂಜನದವರ ಸ್ಟಾಲು. ಸಾಬೂನುಗಳೇ ಹೆಚ್ಚು. ಗೋಡ್ರೇಜ್‌ರವರ ಸಾಬೂನುಗಳು ಆರ್ಯನ್ ಟೂತ್ ಬ್ರಶ್ ಮತ್ತು ಕೊಪ್ರನ್ ಟೂತ್ ಪೇಸ್ಟಿನೊಂದಿಗೆ ಇಲ್ಲಿಯ ಯುನೈಟೆಡ್ ಸೋಪ್ ಟ್ರ್ಯೊಲೆಟರಿ ಮಾರ್ಟಿನವರಿಂದ ಸ್ಟೇಜಿನಲ್ಲಿಯೂ, ಒಂದು ಭಾಗದಲ್ಲಿ ಕೇರಳದವರ ಮತ್ತು ವೆಜಟೇಬಲ್ ಸೋಪ್ ವರ್ಕ್ಸ್‌ನವರ ನಾನಾ ಬಗೆಯ ಉತ್ತಮವಾದ ಸಾಬೂನುಗಳೂ ಇತರ ಅಲಂಕಾರ ದ್ರವ್ಯಗಳೂ, ಇನ್ನೊಂದೆಡೆಯಲ್ಲಿ ಸ್ವಸ್ತಿಕಾದವರ ಮತ್ತು ಕೆ. ಬಿ. ಪ್ರಭು ಎಂಡ್ ಕೋರವರ ಅದೇ ತರದ ಉತ್ತಮ ಸಾಹಿತ್ಯಗಳೂ ನೋಟಕರನ್ನು ಆಕರ್ಷಿಸುತ್ತಿದ್ದುವು. ಅದರ ಹಿಂದೆಯೇ ಇನ್ನೊಂದು ಕೋಣೆಯಲ್ಲಿ ಮಲಬಾರಿನ ಔಷಧ ಮಿಶ್ರಿತವಾದ ನಲ್ಪಮಾರಾ ಸಾಬೂನು ಇತ್ತು. ಇನ್ನಿತರ ಪ್ರದರ್ಶನವಸ್ತುಗಳೆಂದರೆ ವೆ॥ ಷಾ ಕಂಪೆನಿಯವರ ಗೃಹೋಪಯೋಗದ ಔಷಧಗಳೂ, ರೋಯಲ್ ದಂತಮಂಜನ, ಎಂ. ಗಣಪಯ್ಯ ಎಂಡ್ ಸನ್ಸ್‌ರವರ ಔಷಧಗಳು ಮತ್ತು ಮಲಬಾರಿನ ಶಕ್ತಿ ಔಷಧಾಲಯದ ಮದ್ದುಗಳು, ಪೂನೆಯ ಗಾಜಿನ ಬಳೆಗಳು, ಮಚಾದೊರವರ ಮಗ್ಗದ ಶೀರೆಗಳು, ಪುತ್ತು ವೈಕುಂಠ ಶೇಟರ ಬೀಡಿಗಳೂ ಪ್ರಭುಗಳ ರಬ್ಬರ್ ಸ್ಟಾಂಪುಗಳು, ಗೋವರ್ಧನ ದಾಸರವರ ಗಂಧದೆಣ್ಣೆ, ನುಸಿಕಡ್ಡಿಗಳು, ಕೆ. ಆರ್. ಕೆ. ಶೇಟರ ಬೆಳ್ಳಿ ಭಂಗಾರದ ನಗನಾಣ್ಯ ಒಡವೆಗಳು, ಡೆಕ್ಕಾನ್ ಕಂಪೆನಿಯವರ ಹಲವು ಸಾಧನಗಳು, ಕೆಳಗೂರು ಟೀ, ಮುಬಾರಕ್ ಟೀ, ಮದ್ರಾಸಿನ ನಾಥ ಮುನಿಯವರ ಬೆಳ್ಳಿ ಭಂಗಾರ ಮುಲಾಮಿನ ಪಾತ್ರೆಗಳು; ಹಾಗೂ ಇಲ್ಲಿಯ ಶ್ರೀ. ವಾಮನ ನ್ಯಾಕರ ಮುಲಾಮಿನ ಆಭರಣಗಳು; ಫ್ರೆಟ್ ವರ್ಕಿನ ಕೆಲಸಗಳು, ಪ್ಯಾರಿ ಕಂಪೆನಿಯವರ ಭರಣಿಗಳು, ಕೆಲವು ಗುಡಿಗಾರರ ಗಡಿಗೆಗಳು, ದೇವಯ್ಯನವರ ಮತ್ತು ಬಿ. ಸಂಜೀವ ರಾಯರ ಯಂತ್ರಗಳೂ. ಲೇಡಿಸ್ ಕ್ಲಬ್ಬಿನವರೂ ಮಹಿಳಾ ಸಭೆಯವರೂ ಕೊನ್ವೆಂಟಿನವರೂ ಕೆಲವು ಚಿತ್ರ, ಹೆಣಿಗೆ, ಕಸೂತಿ ಇತ್ಯಾದಿ ಲಲಿತಕಲೆಯ ಸಾಧನಗಳನ್ನು ಪ್ರದರ್ಶಿಸಿದ್ದರು. ಇದರಲ್ಲಿ ಶ್ರೀಮತಿ ಲೀಲಾಬಾಯಿ ಕತ್ರಿಯವರ ಸಾಧನಗಳು ಆಕರ್ಷಕವೂ ಉತ್ತಮವೂ ಆಗಿದ್ದವು. ಬ್ರಿಜ್‌ಸ್ಟೋನ್ ಜಪಾನು ಟಯರುಗಳೆರಡೂ ಇದ್ದವು. ದಣುವಾರಿಸಲು, ತಂಪನ್ನುಂಟುಮಾಡಲು ಇಲ್ಲಿಯ ಶ್ರೀ. ಸೋಮಯ್ಯ ಶೆಟ್ಟಿಯವರ ಅಮೃತ ಕೇಸರಿ ಪಾನಕವೂ ಇತ್ತು. ಕೊಯಂಬತ್ತೂರು ಘೀ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯವರ ಉತ್ತಮ ತುಪ್ಪವು ಬಂದಿತ್ತು. ಮಂಗಳೂರಿನ ಪ್ರಸಿದ್ಧ ಹಂಚು ಕೈಗಾರಿಕೆಯ ಏಕಮಾತ್ರ ಪ್ರತಿನಿಧಿಯೆಂಬಂತೆ ಸೂಜೀರ್‌ಕಾರ್ ಟೈಲ್ ವರ್ಕ್ಸ್ ಲಿಮಿಟೆಡ್ಡಿನವರು ತಮ್ಮ ವಿಶಾಲವೂ ಅಂದವೂ ಆದ ಸ್ಟಾಲನ್ನು ಹೊರ ಅಂಗಣದಲ್ಲಿಯೇ ಹಾಕಿದ್ದರು.

ಸರಕಾರಕ್ಕೆ ಸಂಬಂಧಪಟ್ಟ ತಾಣೂರಿನ ಫಿಶರೀಸ್ ಶಾಖೆಯವರೂ, ಸ್ಥಳೀಯ ಟ್ರೇಡ್ಸ್ ಸ್ಕೂಲಿನವರೂ, ಜಂಗ್ಲಿ ಇಲಾಖೆಯವರೂ, ಕೃಷಿ ಇಲಾಖೆಯವರೂ, ಆರೋಗ್ಯ ಶಾಖೆಯವರೂ ಪ್ರದರ್ಶನದಲ್ಲಿ ಭಾಗ ವಹಿಸಿದ್ದರು. ಕೃಷಿ ಇಲಾಖೆಯವರ ಸ್ಟಾಲು, ತುಂಬಾ ಶಿಕ್ಷಣ ಮೂಲ್ಯವನ್ನು ಕೊಡುವಂಥಾದ್ದಾಗಿತ್ತು. ಸ್ಥಳೀಯ ಡೆಮೊನ್‌ಸ್ಟ್ರೇಟರರಾದ ವಿ. ನಾಯಕ್‌ರವರು ತುಂಬಾ ಪರಿಶ್ರಮ ವಹಿಸುತ್ತಿದ್ದರು. ಉಡುಪಿಯ ಶ್ರೀ. ಎನ್. ಸುಬ್ಬರಾಯರವರ ಹತ್ತಿಯ ಬೆಳವಣಿಗೆಯ ಉತ್ತಮ ಮಾದರಿಗಳೂ ಇದ್ದವು. ಕೆಲವು ಕೋಳಿಗಳೂ ಇದ್ದುವು. ಜೇನುನೊಣದ ಸಾಕುವಿಕೆಯನ್ನು ಶ್ರೀ. ಪೈಲೂರು ಲಕ್ಷ್ಮೀನಾರಾಯಣರಾಯರು ಜನರಿಗೆ ಮನದಟ್ಟಾಗುವಂತೆ ವಿವರಿಸಿ ತೋರಿಸುತ್ತಿದ್ದರು. ಆರೋಗ್ಯ ಇಲಾಖೆಯವರು ತಮ್ಮ ಸ್ಟಾಲನ್ನು ಬಂದವರಿಗೆ ವಿವರಿಸಿ ಹೇಳುತ್ತಿದ್ದರೆ ಆರೋಗ್ಯಕ್ಕೆ ಕ್ಷೇಮಕರವಾಗುತ್ತಿತ್ತು. ಬಂದವರ ದಾಹಶಾಂತಿಗಾಗಿ ಶ್ರೀ ವಿಲಾಸದವರೂ ಇದ್ದರು.

ಒಟ್ಟಾರೆ ಮೇಲೆ ಇದೊಂದು ಪ್ರದರ್ಶನವಾಗುತ್ತದೆಂಬುದಕ್ಕಾಗಿ ಮಾಡಿದುದೆಂಬಂತೆ ತೋರುತ್ತಿತ್ತು. ಕೃಷಿ ಇಲಾಖೆಯನ್ನು ಬಿಟ್ಟರೆ ನಮ್ಮ ಜಿಲ್ಲೆಯ ಕೈಗಾರಿಕೆಗೆ ಇದರಿಂದ ಯಾವ ಪ್ರಯೋಜನವುಂಟಾಗುವದೆಂದು ಯಾರೊಬ್ಬನೂ ಹೇಳಲಾರನು. ಪಟ್ಟಣದೊಳಗಣ ಮುಕ್ಕಾಲು ಪಾಲು ಜನರಿಗೆ ತಮ್ಮ ಪಟ್ಟಣದಲ್ಲಿ ಇದೊಂದು ಪ್ರದರ್ಶನವಾಗಿದೆಯೆಂದು ತಿಳಿದುಬಂದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಪ್ರದರ್ಶನದ ಅಂಗಗಳಾದ ಪಂದ್ಯಾಟಗಳು, ವಿವಿಧ ವಿನೋದಾವಳಿಗಳು ದೇಶೀಯ ವಾಲಗ, ಸಂಗೀತ ಇತ್ಯಾದಿ ಇದರಲ್ಲಿ ಶೂನ್ಯ. ಸಂಕ್ಷೇಪತಃ ಇದೊಂದು ಮರಿ ಪ್ರದರ್ಶನ.

A NEW SCHEME WITH A NEW YEAR!

TIME DEPOSIT

A new scheme specially suited to
Doctors, Lawyers, Merchants & Middle class.

Interest at a special rate of 3% per annum allowed on **daily balances** in multiples of Rs. 25/- up to Rs. 10,000/-.
Withdrawals by cheques without production of pass books.
¼ of the total at the credit of the account can be withdrawn without notice; any amount can also be withdrawn after 15 days' notice.

Please apply for rules:

THE UDIPI BANK, LIMITED
(ESTABLISHED: 1925)
KALSANK UDIPI S. KANARA

ಕರ್ಣಾಟಕ ಸಾಹಿತ್ಯಸಮ್ಮೇಳನ,-ಬೊಂಬಾಯಿ.

(ಅಧ್ಯಕ್ಷರ ಭಾಷಣದ ಕೆಲವು ಭಾಗ.)

ಪ್ರಾಚೀನ ಕನ್ನಡ ಸಾಹಿತ್ಯದ ಇತಿಹಾಸವನ್ನೂ ಇತ್ತೀಚಿನ ಸಾಹಿತ್ಯದ ಸ್ಥಿತಿಗತಿಯನ್ನೂ ವಿಮರ್ಶಿಸುವದಕ್ಕೆ ಇದೀಗ ಸರಿಯಾದ ಜಾಗ. ಆದರೆ ನನ್ನ ಸಾಹಿತ್ಯಜ್ಞಾನವು ಎಷ್ಟರ ಮಟ್ಟಿಗಿದೆ ಎಂಬುದು ನನ್ನ ಮಿತ್ರರಿಗೂ ಗೊತ್ತು, ಟೀಕಾಕಾರರಿಗೂ ಗೊತ್ತು. ಹೀಗಿರುವಾಗ ಹಿಂದಿನ ಸಾಹಿತ್ಯದ ವೈಭವವನ್ನೇ ಆಗಲಿ ದೋಷವನ್ನೇ ಆಗಲಿ ತಮ್ಮ ಮುಂದೆ ಬಿಡಿಸಿಡುವ ಭಾರದಿಂದ ನಾನು ದೂರನೇ ಆಗಿರಬೇಕು. ಅಷ್ಟೇ ಅಲ್ಲ, ಇಂದಿನ ಸಾಹಿತ್ಯದ ನಿಷ್ಪತ್ತಿ ಆಕಾಂಕ್ಷೆಗಳನ್ನು ಚರ್ಚಿಸುವ ಜವಾಬ್ದಾರಿಯೂ ನನ್ನನ್ನು ಮೀರಿದ್ದೇ ಆಗಿದೆ. ಇಷ್ಟು ಹೇಳಿದರೆ ಸಾಕು ಎಂದು ನನಗೆ ತೋರುತ್ತದೆ. ಸಂಸ್ಕೃತದೊಡನೆ ನಮ್ಮ ಕನ್ನಡ ಭಾಷೆಯು ಮಾಡಿಕೊಂಡ ವಿವಾಹದ ಫಲವಾಗಿ ಒಂದು ಪುರಾತನ ಪ್ರಸಿದ್ಧ ಸಾಹಿತ್ಯ ವಂಶಾವಲಿಯು ನಮ್ಮಲ್ಲಿ ಹುಟ್ಟಿತು. ಪ್ರಸಿದ್ಧ ಕುಲ ಸಂಸರ್ಗದಿಂದ ಅದರ ಅಪೂರ್ವ ಜ್ಯೋತಿಯಲ್ಲಿ ಈ ವಂಶವೂ ಬಹು ಕಾಲ ಮರೆಯಿತು. ಅಲ್ಲಿಯ ವರೆಗೆ ಸರಿಯೇ. ಆದರೆ ಬರಬರುತ್ತ ಈ ವಂಶಕ್ಕೆ ಬಡ ಬಂಧುಗಳ ಅವಸ್ಥೆ ಉಂಟಾಯಿತು. ನಮ್ಮ ಭಾಷಾ ಸಾಹಿತ್ಯಗಳು ಸಂಸ್ಕೃತದ ವಿಶೇಷ ವೈಭವಕ್ಕೆ ಮುಗ್ಧವಾಗುತ್ತ ಹೋದುವು. ಹಾಗಾದಂತೆಲ್ಲ ಕನ್ನಡ ಸಾಹಿತ್ಯ ಎಂದರೆ ಬರೀ ಸಂಸ್ಕೃತ ಸಾಹಿತ್ಯದ ಮುಂದೋಷ್ಣ ಭಾಷಾಂತರ ರೂಪಾಂತರವೇ ಆಗುತ್ತ ಹೋಯಿತು! ಸಂಸ್ಕೃತವೇ ಎಲ್ಲ ಬರೆಹಗಳಿಗೂ ಮಾದರಿ! ತೆಲುಗು ಭಾಷೆಯ ಮೇಲಾದ ಸಂಸ್ಕೃತದ ಆಪಾತವನ್ನು ಕುರಿತು ಮಿಸ್ಟರ್ ಗೆಲೆತಿ ತಮ್ಮ ತೆಲುಗು ನಿಘಂಟಿನಲ್ಲಿ ಬರೆದ ವಿಷಯವು ಕನ್ನಡಕ್ಕೂ ಶಬ್ದಶಃ ಹೊಂದುತ್ತದೆ:— ‘ವ್ಯಾಕರಣಯುಕ್ತ ತೆಲುಗಿನ ದಂಬಾರ್ಥ ಪಾಂಡಿತ್ಯವು ಬಹು ಶೋಚನೀಯವಾಗಿದೆ, ಅನರ್ಥವಾಗಿದೆ. ಹಿಂದೆ ಹೋದ ಶತಮಾನಗಳ ರೂಢಿಯನ್ನು ಅವಲಂಬಿಸಿಯೇ ಇಂದಿನ ವ್ಯಾಕರಣವೂ ಶೈಲಿಯೂ ಇರಬೇಕೆಂಬ ತಪ್ಪು ತಿಳಿವಳಿಕೆಯಿಂದ, ಆ ರೂಢಿಯ ತಪ್ಪು ವಿಧಾನ ರಚನೆಗಳನ್ನೇ ಮುಂದುವರಿಸುತ್ತ ಹೋದಂತೆ, ಸಂಪ್ರದಾಯಪ್ರಿಯ ಸಾಹಿತಿಗಳು ಒಬ್ಬರ ಬರೆಹವನ್ನು ಇನ್ನೊಬ್ಬರು ದೂಷಿತವೆಂದೂ ಗರ್ಹಣೀಯವೆಂದೂ ಭಾವಿಸುವ ಸ್ಥಿತಿಗೆ ಇಳಿದಿದ್ದರು.’ ಹಾಗೆಯೇ ಬರೆಯುತ್ತ ಮುಂದೆ ಅವರು ‘ಆ ಸ್ತಂಭೀಕರಿಸುವ ಪದವಿಭ್ರಮ, ಕೃತ್ರಿಮ ಶೈಲಿಯ ಕೌಟಿಲ್ಯಗಳಿಗೆ ಬದಲಾಗಿ, ಸಾಮಾನ್ಯ ಸಂಭಾಷಣೆಯಲ್ಲಿ ಸಹಜವಾಗಿಯೇ ಬರುವ ಶಬ್ದಗಳ ಸೌಲಭ್ಯ ಸಾರಲ್ಯಗಳೇ’ ಕಾಲಕ್ಕೆ ಬೇಕಾದ ಶೈಲಿ ಗುಣ ಎಂದು ಹೇಳಿದ್ದಾರೆ. ಅವರು ಅಲ್ಲಿ ಮಾಡಿದ ರೋಗಪರೀಕ್ಷೆ ಚಿಕಿತ್ಸೆಗಳೇ ಕನ್ನಡಕ್ಕೂ ಸರಿಯಾಗಿ ಹೊಂದುತ್ತವೆ.

ಈ ಕಾಲದ ಸಾಹಿತ್ಯಪ್ರಪಂಚದಲ್ಲಿ ಗದ್ಯಪದ್ಯಗಳೂ ಹೊಸ ರೂಪ ತಾಳಿದ್ದನ್ನು ನೋಡಬಹುದು. ಹಳೆಯ ಸಾಹಿತ್ಯವನ್ನು ಜಾಗ್ರತೆಯಾಗಿ ಮನಸಾರೆ ಓದುವದೇನೋ ಒಂದು ಕಡೆ ಇದ್ದೇ ಇದೆ. ಆದರೂ ಅದೊಂದರ ರೂಪ ರಚನೆಗೇ ಗಂಟುಬೀಳದೆ, ಹಿಂದಿನ ಶತಮಾನಗಳ ಸಂಪ್ರದಾಯಶೃಂಖಲೆಗಳನ್ನು ಮುರಿದು ಬಿಸುಡುವ ಪ್ರಯತ್ನವೂ ಕಂಡುಬರುತ್ತಿದೆ. ಕಳೆದ ಮೂವತ್ತು ವರ್ಷ ಸುಮಾರಿನ ಸಾಹಿತ್ಯದಲ್ಲಿ ಈ ಸ್ವಾತಂತ್ರ್ಯಪ್ರೇಮವು ಕಂಡುಬರುತ್ತದೆ. ಸಾಹಿತ್ಯರಾಜ್ಯದಲ್ಲಿ ನೂತನ ಮಾರ್ಗಗಳಾಗುತ್ತಿವೆ. ಅದರಲ್ಲೀಗ ಗೀತಿಕೆಗಳಿವೆ. ಪ್ರಾಸಾನುಪ್ರಾಸಶೂನ್ಯ ಕವಿತೆಗಳಿವೆ. ಗದ್ಯ ನಾಟಕಗಳಿವೆ. ನ್ಯಾಸಗಳಿವೆ. ಜೀವನಚರಿತ್ರೆಗಳಿವೆ. ದಿನೇ ದಿನೇ ಇನ್ನೂ ಇನ್ನೂ ಬೆಳೆಯುತ್ತಿರುವ ಇವನ್ನೆಲ್ಲ ನೋಡಿದರೆ, ಸಾಹಿತ್ಯವೆಂದರೆ ಪದ್ಯ ಮಾತ್ರವೇ ಅಲ್ಲ, ಗದ್ಯವೂ ಎಂಬದು ಯಾರಿಗೆ ತಾನೇ ತಿಳಿಯದೆ ಹೋದೀತು? ಅಷ್ಟೇ ಅಲ್ಲ, ಇವೆಲ್ಲವುಗಳ ವೃದ್ಧಿಯನ್ನು ನೋಡಿದರೆ ಸಾಹಿತಿಗಳಿಗೆ ಕಾಲಮಹಿಮೆಯ ಸ್ಪಂದನಸಂಸ್ಪರ್ಶವೂ ಆಗಿದೆ, ಆಗುತ್ತಲಿದೆ ಎಂಬದು ಸ್ಪಷ್ಟವಾಗುತ್ತದೆ.

ಒಂಭನೆಯ ಶತಮಾನದ ಗ್ರೀಕ್ ಕುಡಿಕನೊಬ್ಬನು ತನ್ನ ದೇಶಕ್ಕೆ ಕನ್ನಡ ಶಬ್ದಗಳನ್ನೊಯ್ದನೆಂಬ ದಂತಕಥೆಯಿಂದಲೇ ನಮ್ಮ ಅಭಿಮಾನವು ಅಲೆದಾಡುತ್ತದೆ. ಹೀಗಿರುವಾಗ ನಮ್ಮ ಕಾಲದಲ್ಲಿಯೇ ಕಣ್ಣೆದಿರಿನಲ್ಲಿಯೇ ಮೂಡಿ ಮೇಲೆದ್ದು ಬಂದ ಸಾಹಿತ್ಯಸೂರ್ಯನ ಕಿರಣಗಳು ಪಶ್ಚಿಮಕ್ಕೆ ಹರಿಯುವದನ್ನು ಕಣ್ಣಾರೆ ಕಾಣುವಾಗ ಆಗುವ ನಿಜಾನಂದವಾದರೂ ಹೇಗಿದ್ದೀತು?

ಇಂಥ ಚೈತನ್ಯವೂ ಅದರ ಲಕ್ಷಣವಾದ ಸಹಜ ಪರಿವೃತ್ತಿಯೂ ಈಗ ನಮ್ಮ ಕರ್ಣಾಟಕದಲ್ಲಿ ಇದೆ. ಇದೊಂದು ಶುಭಸೂಚನೆಯೇ ಸರಿ. ನಮ್ಮ ಸಾಹಿತ್ಯವು ಸ್ವಲ್ಪ ಕಾಲಾನುವರ್ತಿಯಾಗಿಯೇ ಸಾಗುತ್ತಿದೆ ಎಂಬದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ಈಗ ನಡೆಯುತ್ತಿರುವ ಜಗತ್ತಿನ ಎರಡು ದೊಡ್ಡ ಪ್ರವೃತ್ತಿಗಳಿಗೂ ಕನ್ನಡಕ್ಕೂ ಇರತಕ್ಕ ಸಂಬಂಧವೇನು ಎಂಬದನ್ನು ವಿವರವಾಗಿ ಪರಿಶೀಲಿಸಬೇಕಲ್ಲವೆ? ಆ ಎರಡು ಪ್ರವೃತ್ತಿಗಳು ಯಾವವು: (೧) ಮಾನವವರ್ಗ ಸಮಸ್ತದ ಸಮವಾಯ, ಸಂಯೋಗ. (೨) ದಿನೇ ದಿನೇ ಬೆಳೆಯುತ್ತಿರುವ ವ್ಯಕ್ತಿಸಾಮಾನ್ಯದ ಮಹತ್ವ, ಗೌರವ. ಒಂದು ಕಡೆ ಲೋಕವೆಲ್ಲ ಸಹಕಾರಿಯಾಗಿ ಪ್ರೇಮ ಸಹಾನುಭೂತಿಗಳಿಂದ ಒಂದಾಗಬೇಕು -ಎಂಬ ಭಾವನೆ ಹಬ್ಬುತ್ತಿದೆ. ಅದಕ್ಕೆ ತಕ್ಕ ಪ್ರಯತ್ನಗಳೂ ನಡೆಯುತ್ತಲಿವೆ. ಇನ್ನೊಂದು ಕಡೆ ವ್ಯಕ್ತಿವ್ಯಕ್ತಿಗಳ ನಡುವೆ ಇರುವ ಕಪೋಲಕಲ್ಪಿತ ಅಂತರವು ಉದುರಿ ಬೀಳುತ್ತಿದೆ. ಈ ಎರಡು ಪ್ರವೃತ್ತಿಗಳು ತಡೆಯಿಲ್ಲದೆ ನಡೆಯುತ್ತಿವೆ. ಕನ್ನಡ ಸಾಹಿತ್ಯವು ಇವುಗಳ ಪ್ರಭಾವವನ್ನು ಕಂಡು ಬೆಳೆಯುತ್ತಿದೆಯೋ? ಅದರ ಆ ಸುಖವಾದ ಕಾವನ್ನು ತಾನು ಅನುಭವಿಸಿದೆಯೋ? ಅದರಿಂದ ಹುರಿಗೊಂಡು ಅದಕ್ಕೆ ತಕ್ಕಂತೆ ಹೊಸ ನಿರ್ಮಾಣವನ್ನು ಮಾಡಿ ಅದರ ಸುಖ ಸಂದರ್ಶನವನ್ನು ತನ್ನ ಜನಾಂಗಕ್ಕೆ ಕೊಡುತ್ತಿದೆಯೋ? ಮನೆಮನೆಯ- ಸಂಸ್ಕೃತಿಯನ್ನು ಬೆಳೆಸಿ ಜನಸಾಮಾನ್ಯದ ಜೀವಿತವನ್ನು ಸಜ್ಜುಗೊಳಿಸಲಿಕ್ಕೆ ನಮ್ಮ ಸಾಹಿತ್ಯವು ಮಾಡುತ್ತಿರುವ ಸಾಧನೆ ಯಾವದು?

ಜನಸಾಮಾನ್ಯಕ್ಕೆ ಹಿತವನ್ನುಂಟುಮಾಡುವ ವಿಭಾಗವನ್ನೇ ಮೊದಲು ತಕ್ಕೊಳ್ಳೋಣ. ಅದು ಹೇಗಾಗಬೇಕು? ಮೊದಲು ನಮ್ಮ ವ್ಯವಹಾರದಲ್ಲಿ ಕನ್ನಡ ಭಾಷೆಯನ್ನೇ ಹೆಚ್ಚಾಗಿ ಉಪಯೋಗಿಸಲಾರಂಭಿಸಬೇಕು. ನಮ್ಮ ಸರಕಾರಿ ವ್ಯವಹಾರ, ಧಾರ್ಮಿಕ ವಿಚಾರ, ವ್ಯಾಪಾರ, ಸಾರ್ವಜನಿಕ ವಿಚಾರಗಳಲ್ಲಿ ಮಾತ್ರವಲ್ಲದೆ ವಿದ್ಯಾಭ್ಯಾಸಪದ್ಧತಿಯಲ್ಲಿಯೂ ಕನ್ನಡವನ್ನೇ ಹೆಚ್ಚಾಗಿ ಬಳಕೆಗೆ ತರಬೇಕು. ಈ ಸೂಚನೆಯನ್ನು ಸಮರ್ಥಿಸಲು ಹೆಚ್ಚು ವಾದವಿವಾದಗಳು ಬೇಕಾಗಿಲ್ಲ. ಯಾಕೆಂದರೆ, ಮಾತೃಭಾಷೆಯು ವ್ಯಕ್ತಿತ್ವದ ಒಂದು ಅಂಗವೇ ಆಗಿದೆ. ಮಾತಾಡುವಾಗ ಎಲ್ಲಿಯಾದರೂ ವ್ಯಾಕರಣದೋಷವಾದೀತು, ಉಚ್ಚಾರಣೆ ತಪ್ಪೀತು ಎಂಬ ಕಳವಳವನ್ನು ಮನಸ್ಸಿನಲ್ಲಿ ಹುಟ್ಟಿಸುವ ಎರಡನೆಯ ಭಾಷೆಯಲ್ಲಿ ಮಾತಾಡುವದಕ್ಕಿಂತಲೂ ಮಾತೃಭಾಷೆಯಲ್ಲಿ ಮಾತಾಡುವಾಗ ಒಂದು ಬಗೆಯ ಉಲ್ಲಾಸವೂ ಸಲಿಗೆಯೂ ಕಂಡುಬರುವದು. ಜನಸಾಮಾನ್ಯದ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸಲು ವಿದ್ಯಾಧರ್ಮದೃಷ್ಟಿಯಿಂದ ಕೂಡ ಮಾತೃಭಾಷಾ ಪ್ರಯೋಗವೇ ಸರಿಯೆಂತಲೂ ಪರಿಣಾಮಕರವಾದ್ದೆಂತಲೂ ಕಂಡುಬರುವದು.

ಹೀಗಿದ್ದರೂ ಇಡೀ ಹಿಂದುಸ್ಥಾನದಲ್ಲೆಲ್ಲಿಯೂ ಉಚ್ಚಶಿಕ್ಷಣ ಮತ್ತು ಸರಕಾರಿ ವ್ಯವಹಾರಗಳಲ್ಲಿ ದೇಶೀಯ ಭಾಷೆಯ ಪ್ರಯೋಗವೂ ಸ್ವೀಕೃತವಾಗಿಲ್ಲ! ಹೈ ಸ್ಕೂಲುಗಳಲ್ಲಿ ಕೂಡ ದೇಶೀಯ ಭಾಷೆಯ ಮೂಲಕ ಶಿಕ್ಷಣ ಕೊಡುವದು ಅನೇಕರಿಗೆ ರುಚಿಸುತ್ತಿಲ್ಲ! ನಮ್ಮ ದೇಶೀಯ ಭಾಷೆಯು ಈ ಬಗೆಯ ಭಾಷೆಯ ಅಡಿಯಾಳುತನದಿಂದ ಇನ್ನೂ ಮುಕ್ತವಾಗಿಲ್ಲ. ಆದ್ದರಿಂದ ಅದು ಪ್ರಾಚೀನ ಭಾಷೆ ಮತ್ತು ಪರದೇಶಭಾಷೆಗಳೊಂದಿಗೆ ತನ್ನ ಸ್ಥಾನರಕ್ಷಣೆಗಾಗಿ ಹೆಚ್ಚು ಹೋರಾಡಬೇಕಾಗಿದೆ. ಲೆಟಿನ್ ಭಾಷೆಯನ್ನು ಬಿಟ್ಟರೆ ಉಳಿದ ಪ್ರಾಂತಿಕ ಭಾಷೆಗಳೆಲ್ಲ ಕೀಳುತರಗತಿಗೆ ಸೇರಿದವೆಂಬ ಭಾವನೆಯಿಂದ ಮಧ್ಯಕಾಲೀನ ಯುರೋಪಿನ ಪರಿಸ್ಥಿತಿಯೇ ಇಂದು ನಮ್ಮಲ್ಲಿ ಉಂಟಾಗಿದೆ. ಅದಕ್ಕಿಂತಲೂ ಲೆಟಿನ್ ಭಾಷೆಯ ಸಾಂಸ್ಕೃತಿಕ ಪ್ರತಿಷ್ಠೆಯಿಂದಲೂ ಆಳುವವರ ಭಾಷೆಯೆನಿಸಿದ್ದ ಫ್ರೆಂಚ್ ಭಾಷೆಯ ರಾಜಕೀಯ ದರ್ಪದಿಂದಲೂ ಹಿಂದೂಡಲ್ಪಟ್ಟಿದ್ದ ಮಧ್ಯಕಾಲೀನ ಇಂಗ್ಲೆಂಡಿನ ಇಂಗ್ಲಿಷ್ ಭಾಷೆಗೆ ಒದಗಿದ್ದ ಸ್ಥಿತಿಯೇ ನಮ್ಮ ಭಾಷೆಗಳಿಗಾಗಿದೆಯೆಂದು ಹೇಳಿದರೆ ಚೆನ್ನಾಗಿ ಒಪ್ಪುವದು. ಆಗ ಅಲ್ಲಿ ಪ್ರಾಂತಿಕ ಭಾಷೆಗಳಿಗೆ ಸಾಹಿತ್ಯದೃಷ್ಟಿಯಿಂದ ಕೆಲವು ಅಡಚಣೆಗಳಿದ್ದವು. ದೇಶವು ಚಿಕ್ಕದಾಗಿದ್ದರೆ ಆ ಮಾತನ್ನಾಡುವ ಜನರ ಸಂಖ್ಯೆಯೂ ಕಡಿಮೆಯಾಗಿಯೇ ಇರಬೇಕು. ಆದರೆ ಯುರೋಪಿನ ಪ್ರತಿ ದೇಶದವರೂ ತಮ್ಮ ವಿಚಾರಗಳನ್ನು ಇಡೀ ಯುರೋಪಿಗೆ ತಿಳಿಸಬೇಕೆಂದು ಕಾತರರಾಗಿರುತ್ತಿದ್ದರು. ಆ ಉದ್ದೇಶಸಾಧನೆಗಾಗಿ ಅವರು ಲೆಟಿನ್ ಭಾಷೆಯನ್ನೇ ಉಪಯೋಗಿಸಬೇಕಾಗಿತ್ತು. ಅಂಥವರಿಗೆ ಪ್ರಾಂತಿಕ ಭಾಷೆಯೆಂದರೆ ಅಸಂಖ್ಯಾಕರ ಅಸಂಸ್ಕೃತ ಭಾಷೆಯಾಗಿತ್ತು! ಹೀಗಾಗಿ ತನ್ನ ‘ಡಿವ್ಯಾನ್ ಕೊಮೆಡಿ’ ಎಂಬ ಉದ್ಗ್ರಂಥವನ್ನು ಇಟೆಲಿಯನ್ ಭಾಷೆಯಲ್ಲಿಯೇ ಬರೆದ ಡಾಂಟೆ ಕವಿಯು ಹೆಮ್ಮೆಗಾರನಾಗಿದ್ದ ತನ್ನ ದೇಶಬಂಧುವೊಬ್ಬನ ಅವಹೇಳನಕ್ಕೆ ಗುರಿಯಾದನು. ಆ ಕವಿಯು ಮೃತನಾದ ಕೆಲವು ವರುಷಗಳ ಬಳಿಕ ಆ ಕಾವ್ಯವು ಲೆಟಿನ್ ಭಾಷೆಗೆ ಪರಿವರ್ತಿತವಾಯಿತು. ಇಲ್ಲವಾಗಿದ್ದರೆ ಗೌರವಸ್ಥಾನವು ದೊರೆಯದೆ ಅದು ಮೂಲೆಪಾಲಾಗಿರಬೇಕಾಗಿತ್ತು! ಈಗ ಇಂಗ್ಲಿಷ್ ಮತ್ತು ಸಂಸ್ಕೃತಗಳಿಗಿರುವ ಗೌರವಪ್ರತಿಷ್ಠೆಗಳನ್ನು ನಮ್ಮ ಕನ್ನಡ ಇನ್ನೂ ಪಡೆದಿಲ್ಲವೆಂದರೆ ಸುಳ್ಳಾಗುವದೆ? ಇದಕ್ಕಾಗಿ ನಾವು ಸಂಸ್ಕೃತವನ್ನಾಗಲಿ, ಇಂಗ್ಲಿಷನ್ನಾಗಲಿ ಅನಾದರಿಸಬೇಕೆಂದಲ್ಲ. ಆ ಭಾಷೆಗಳಲ್ಲಿ ಪಂಡಿತರಾದವರು ಉಚ್ಚ ಸಾಹಿತಿಕ ಸಂಸ್ಕೃತಿಯಿಂದ ನಮ್ಮ ಭಾಷೆಯೂ ತುಂಬಿ ತುಳುಕಾಡುವಂತೆ ಸಹಾಯ ಮಾಡಬೇಕೆಂದು ಹೇಳಲು ನನಗೆ ಹಕ್ಕಿದೆ. ಭಾರತೀಯ ವಿಶ್ವವಿದ್ಯಾಲಯಗಳೆಲ್ಲ ಪದವೀಪ್ರದಾನ ಮಹೋತ್ಸವ ಕಾಲದಲ್ಲಿ ಇದೇ ಹಾಡನ್ನು ಮುಂಚೆ ಹಾಡುತ್ತಿದ್ದವು. ಭಾರತೀಯರಿಗೆ ಇಂಗ್ಲಿಷಿನಲ್ಲಿಯೇ ಶಿಕ್ಷಣ ಕೊಡಬೇಕೆಂಬ ೧೮೩೫ನೆಯ ಸಾಲಿನ ವಿದ್ಯಾಭ್ಯಾಸ ವಿಧಿಗೆ ಮೆಕೊಲೆಯ ಮುಖಾಂತರವಾಗಿ ಬ್ರಿಟಿಷ್ ಸರಕಾರದವರೆ ಹೊಣೆಗಾರರೆನಿಸುವರು. ಆದಾಗ್ಯೂ ಅವರ ಪ್ರತಿನಿಧಿಗಳು ಇಂಗ್ಲಿಷ್ ಶಿಕ್ಷಣ ಹೊಂದಿದ ಭಾರತೀಯರೆಲ್ಲರಿಗೂ, ‘ನೀವು ದೇಶೀಯ ಭಾಷೆಯ ಹೊರತು ಬೇರೆ ಭಾಷೆಯನ್ನರಿಯದ ಜನಸಾಮಾನ್ಯರ ಹಿತಕ್ಕಾಗಿ ನಿಮ್ಮ ಜ್ಞಾನವನ್ನುಪಯೋಗಿಸಿರಿ’ ಎಂದು ಪದೇ ಪದೇ ಒತ್ತಿ ಹೇಳಿದ್ದಾರೆ. ೧೮೬೨ನೆಯ ಸಾಲಿನಲ್ಲಿ ಬೊಂಬಾಯಿ ವಿಶ್ವವಿದ್ಯಾಲಯದ ಎರಡನೆಯ ಪದವೀಪ್ರದಾನ ಮಹೋತ್ಸವ ಕಾಲದಲ್ಲಿ ಆ ವರ್ಷ ಪದವೀಧರರಾದವರಿಗೆ ಸರ್ ಬಾರ್ಟ್ಲ್ ಫ್ರೇರ್ ಎಂಬವರು ಹೀಗೆ ಉಪದೇಶ ಮಾಡಿದರು:—

‘ನೀವು ಈ ವಿಶ್ವವಿದ್ಯಾಲಯದಿಂದ ಪಡೆದ ಜ್ಞಾನದಿಂದ ನಿಮ್ಮ ದೇಶೀಯ ಭಾಷೆಯನ್ನು ಪುಷ್ಟಿಗೊಳಿಸುವದೇ ಯಾವಾಗಲೂ ನಿಮ್ಮ ಮುಖ್ಯ ಗುರಿಯಾಗಿರಬೇಕು. ಇಲ್ಲಿ ನೀವು ಪಡೆದ ಶಿಕ್ಷಣವು ಪವಿತ್ರ ನಿಧಿ, ಮತ್ತು ನಿಮ್ಮ ದೇಶಬಂಧುಗಳ ಹಿತಕ್ಕೇ ಉಪಯೋಗಿಸಲು ಅದನ್ನು ನಿಮ್ಮ ವಶಕ್ಕೆ ಒಪ್ಪಿಸಲಾಗಿದೆ ಎಂಬದನ್ನು ನೀವು ಮರೆಯಕೂಡದು. ಕೆಲವು ನೂರು ಜನರಿಗೆ ಅಥವಾ ಕೆಲವು ಸಾವಿರ ಜನರಿಗೆ ಇಲ್ಲಿ ದೊರೆಯಬಹುದಾದ ಪಾಂಡಿತ್ಯವನ್ನು ನೀವು ಹಿಂದುಸ್ಥಾನದ ಮಿಲಿಯಗಟ್ಟಲೆ ಜನರಿಗೆ ದೇಶಭಾಷೆಯ ಮೂಲಕ ಕಲಿಸಬೇಕು. ನಿಮ್ಮ ದೇಶದಲ್ಲಿ ಅನೇಕರು ಮಾತೃಭಾಷೆಯ ಮೂಲಕ ಮಾತ್ರವೇ ಶಿಕ್ಷಣ ಹೊಂದಬಲ್ಲರು. ಆದ್ದರಿಂದ ಯುರೋಪಿಯನ ವಿದ್ಯೆ ಮತ್ತು ವಿಜ್ಞಾನವನ್ನು ನೀವು ಅವರಿಗೆ ಆ ಭಾಷೆಯ ಮೂಲಕವೇ ಕಲಿಸಬೇಕು.’

ನಮ್ಮ ಶಾಲೆ, ಕೊಲೆಜ್‌ಗಳಲ್ಲಿ ಶಿಕ್ಷಣಕ್ಕೆ ಮಾತೃಭಾಷೆಯನ್ನು ಉಪಯೋಗಿಸಬೇಕೆಂಬ ವಿಚಾರದಲ್ಲಿ ಒಂದು ಮಾತು. ಕೆಳಗಿನ ತರಗತಿಗಳಲ್ಲಂತೂ, ಕೆಲವು ಅವಿಚಾರಗಳನ್ನು ಬಿಟ್ಟು ಉಳಿದವರೆಲ್ಲರಿಗೂ ಮಾತೃಭಾಷೆಯಲ್ಲಿಯೆ ಶಿಕ್ಷಣ ದೊರೆಯುತ್ತಿದೆ. ಹೈಸ್ಕೂಲು ತರಗತಿಗಳ ವಿಚಾರದಲ್ಲಿಯೂ ಮಾತೃಭಾಷೆಯ ಮೂಲಕ ಶಿಕ್ಷಣ ಕೊಡುವವೇ ಸರಿಯೆಂದು ಹಿಂದುಸ್ಥಾನದಲ್ಲಿ ಎಲ್ಲರೂ, ಯಾವ ವಾದವೂ ಇಲ್ಲದೆ, ಈಗ ಸಮ್ಮತಿ ಕೊಡುವಂತಾಗಿದೆ. ಆದರೆ ನಿಜವಾಗಿ ನೋಡಿದರೆ ದೇಶದ ಹಲವು ಭಾಗಗಳಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರು ಭಾಷಾ ವಿಷಯಗಳನ್ನು ಬಿಟ್ಟು ಉಳಿದ ಎಲ್ಲ ವಿಷಯಗಳಿಗೂ ಮಾತೃಭಾಷೆಯಲ್ಲಿಯೇ ಉತ್ತರ ಕೊಡಬಹುದೆಂಬ ಬದಲಾವಣೆ ಮಾತ್ರ ಆಗಿದೆ. ಆದರೆ ದೇಶಿಯ ಭಾಷೆಗಳಲ್ಲಿ ಸರಿಯಾದ ಪಠ್ಯಪುಸ್ತಕಗಳಿಲ್ಲ! ಶಿಕ್ಷಣವೂ ಇಲ್ಲ!

(೧೭ನೇ ಪುಟಕ್ಕೆ ಮುಂದುವರಿಸಿಯದೆ)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

“ಗೊನೊಕಿಲರ್”
(ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER
ORIGINAL
REGD. TRADE MARK

ಇಂದಿನ ಅಪ್ರತಿಮ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೆ, ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ, ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ
ಮೋಸ ಹೋಗಬೇಡಿರಿ.
ಕೊಂಡುಕೊಳ್ಳುವುದಕ್ಕೆ
ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

The Kanara Enterprise Ltd., Puttur.

Estd: 1920] [1920ರಲ್ಲು ಸ್ಥಾಪಿತವಾದದ್ದು.

ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್, ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು. 3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

'ಸೇವಿಂಗ್ಸ್ ಬೇಂಕ್' ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

'ಚಾಲ್ತಿ ಠೇವಣಾತಿಗಳು' ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು.

ಬೇಂಕಿನ ಆಫೀಸು,
ಪುತ್ತೂರು.
ತಾ. 10—4—1935.

G. N. LAKSHMAN PAI,
ಸೆಕ್ರಿಟರಿ.

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Hall and Co.

70/4, Chickpet, BANGALORE CITY.

Illustrate Your Announcements and Double Their Effectiveness.

THE LEADING BLOCK MAKERS

FOR OVER 18 YEARS' EXPERIENCE ARE NOW AT YOUR SERVICE.

Line and Half-tone Blocks on Zinc or Copper for

BOOK ILLUSTRATIONS, MAGAZINES & NEWSPAPERS,

ART LABELS, ETC., ETC.

We specialize in designing and Cinema Slides.

The Zandu Pharmaceutical Works, Ltd., Bombay.

ದಿ ಝಂಡೂ ಫಾರ್ಮೆಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ.

ಇವರ

ಕೇಸರೀ ಜೀವನ

ಆಬಾಲವೃದ್ಧರಲ್ಲಿ ನವಜೀವನವನ್ನುಂಟುಮಾಡುವ ಶಕ್ತಿವರ್ಧಕ 'ಟಾನಿಕ್".

ಈ ಔಷಧವು ಶ್ರೇಷ್ಠವಾದ ಹಸಿಯ ನೆಲ್ಲಿಕಾಯಿ, ರಸಸಿಂಧೂರ, ಅಭ್ರಕ ಭಸ್ಮ, ಕುಂಕುಮಕೇಸರ, ಕಸ್ತೂರಿ ಮೊದಲಾದ ಅತ್ಯಮೂಲ್ಯ ಪದಾರ್ಥಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿದೆ.

ಕೆಮ್ಮು ಶೀತಗಳನ್ನು ನಿವಾರಿಸಿ, ಸ್ವರದ ಕಾಠಿಣ್ಯವನ್ನು ಹೋಗಲಾಡಿಸುವುದಕ್ಕೂ, ಜೀರ್ಣಶಕ್ತಿಯನ್ನು ಹೆಚ್ಚಿಸಲಿಕ್ಕೂ ಇದಕ್ಕೆ ಸಮಾನವಾದ ಔಷಧಿಯು ಬೇರೊಂದಿಲ್ಲ. ಕ್ಷಯರೋಗಕ್ಕಿದು ರಾಮಬಾಣ. ಕ್ರಮವಾಗಿ ಇದನ್ನು ಸೇವಿಸುವುದರಿಂದ ಅಕಾಲದಲ್ಲಿ ಬರುವ ವೃದ್ಧಾಪ್ಯವೂ, ನರಗಳ ನಿಶ್ಶಕ್ತಿಯೂ ಸಂಪೂರ್ಣವಾಗಿ ಗುಣವಾಗುವುದು. ನಿತ್ರಾಣಕ್ಕೂ, ಎದೆಯ ರೋಗಗಳಿಗೂ, ಮೆದುಳಿನ ಕೆಲಸದವರಿಗೂ ಇದು ಅಮೃತಪ್ರಾಯವಾದುದು. ಮಕ್ಕಳಾದಿಯಾಗಿ ಮುದುಕರ ತನಕ ಇದನ್ನು ಸೇವಿಸಿ ಕಳೆದುಹೋದ ಆರೋಗ್ಯಭಾಗ್ಯವನ್ನು ತಿರುಗಿ ಪಡೆಯಬಹುದು. ಇಂದೇ ತರಿಸಿ ಅನುಭವ ಪಡೆಯಿರಿ. ಬೆಲೆ ಪೌಂಡಿಗೆ ರೂ. 5-0-0. ಅರ್ಧ ಪೌಂಡಿಗೆ ರೂ. 2-12-0. ಕಾಲು ಪೌಂಡಿಗೆ ರೂ. 1-9-0. ವಿಶೇಷ ಮಾಹಿತಿಯ ಬಗ್ಗೆ ಈ ಕೆಳಗಿನವರಿಂದ ತಿಳಿಯಿರಿ.

ಮದ್ರಾಸ್ ಪ್ರೆಸಿಡೆನ್ಸಿ ಏಜಂಟ್:—**ದಾಮೋದರ್ ಎಂಡ್ ಕೋ.**, 78, ಚೈನಾ ಬಜಾರ್ ರೋಡ್, ಮದ್ರಾಸ್.

ಮಂಗಳೂರು—**ಷಾ ಅಂಡ್ ಕೋ.**
ಉಡುಪಿ— **ಪಿ. ಎ. ಪೈ ಬ್ರದರ್ಸ್.**
ಕಾರ್ಕಳ— **ವಿ. ವಿ. ಶೆಣೈಯವರು.**
ಕಾಸರಗೋಡು—**ಕ್ಷೇಮಾಯತನ ಫಾರ್ಮೆಸಿ.**

ಕಾರಣ ಮತ್ತು

ಪರಿಣಾಮ

ಮೈಸೂರು ಗಂಧದ ಸಾಬೂನನ್ನು
ನಿತ್ಯವೂ ಉಪಯೋಗಿಸುವುದರ
ಪರಿಣಾಮವೇನೆಂದರೆ,
ಶಾರೀರಕ ಯೋಗ್ಯತೆಯು
ರಮ್ಯವಾದ ಅನುಭವವಾಗಿದೆ.
ಅದು ಚರ್ಮವನ್ನು ಕೂಡ
ಕಾಪಾಡುತ್ತದಲ್ಲದೆ,
ಅದನ್ನು ಕೋಮಲವಾಗಿಯೂ
ನುಣುಪಾಗಿಯೂ ಇರಿಸುತ್ತದೆ.

ಇದರ ಕಾರಣವೇನೆಂದರೆ,
ಬಿ. ಪಿ. ಗುಣವಿಶೇಷದ
ಶುದ್ಧವಾದ ಮೈಸೂರು
ಗಂಧದ ಎಣ್ಣೆಯು
ಈ ತಯಾರಿಯ ಸ್ವಚ್ಛ ದಿನಸುಗಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು

ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

GOVT. SOAP FACTORY,
BANGALORE.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.

ಶೀಸೆ 1ಕ್ಕೆ 12 ಆಣೆ; ಟ. ಖ. 11 ಆಣೆ.

ಪ್ಲೀನೋಲಿವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ

ಇದಕ್ಕೆ ಚಕ್ರಬಿಂದು ದಿವ್ಯೌಷಧವು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.

ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,

ಶಿವಮೊಗ್ಗಾ, ಮೈಸೂರು ಸೀಮೆ.

M. GOPAL RAU

Prop: KANARA PHOTO STORES.

Artists, Photographers, Photo Material Dealers.

Shifted opposite
Wenlock Hospital Gate.

Photos Cabinet 3 copies Rs. 2—0—0
Full Size „ Rs. 5—0—0

Amateurs films developed free.
Awarded gold medals for
High Class Enlargements.

(೧೫ನೇ ಪುಟದಿಂದ)

ಆದ್ದರಿಂದ ಈ ವಿಚಾರದಲ್ಲಿ ಆಗಬೇಕಾದಷ್ಟು ಪ್ರಗತಿಯು ಅಲ್ಲಿ ಆಗಿಲ್ಲ. ಆದರೆ ಮೈಸೂರಿನವರಾದ ನಾವು ಈ ವಿಚಾರದಲ್ಲಿ ಮುಂದಾಳುಗಳಾಗಿ ಕೆಲಸಮಾಡಿದ್ದೇವೆಂದು ಹೇಳಿಕೊಳ್ಳಬಹುದಾಗಿದೆ. ಮೂರು ವರುಷಗಳ ಹಿಂದೆ ನಾವು ಹೈಸ್ಕೂಲುಗಳಲ್ಲಿ ಚರಿತ್ರೆ ಮತ್ತು ಭೂಗೋಳವನ್ನು ಬೇಕಾದವರು ಕನ್ನಡದಲ್ಲಿಯೆ ಕಲಿಯಬಹುದೆಂದು ಒಂದು ಪ್ರಾಯೋಗಿಕ ಯೋಜನೆಯನ್ನು ಹೂಡಿದೆವು. ಈ ವರ್ಷದಿಂದ ನಮ್ಮ ಎಲ್ಲ ದೊಡ್ಡ ಹೈಸ್ಕೂಲುಗಳಲ್ಲಿ ಚರಿತ್ರೆ, ಭೂಗೋಳ ಮತ್ತು ಗಣಿತವನ್ನು ಕನ್ನಡದಲ್ಲಿಯೆ ಕಲಿಸಬೇಕೆಂದು ನಿರ್ಬಂಧಮಾಡಿದೆ. ಕನ್ನಡ ಮಾತೃಭಾಷೆಯಲ್ಲದವರಿಗೆ ಮಾತ್ರ ಇಂಗ್ಲಿಷಿನಲ್ಲೆ ಕಲಿಸಬಹುದಾಗಿದೆ. ಯಾಕೆಂದರೆ, ಅವರಿಗೆ ಅವರವರ ಮಾತೃಭಾಷೆಯ ಮೂಲಕವೇ ಶಿಕ್ಷಣದ ಏರ್ಪಾಟು ಮಾಡುವದು ಇನ್ನೂ ಸಾಧ್ಯವಾಗಿಲ್ಲ. ಚರಿತ್ರೆ ಭೂಗೋಳಗಳನ್ನು ಕನ್ನಡದಲ್ಲಿ ಕಲಿತ ವಿದ್ಯಾರ್ಥಿಗಳೂ ಇಂಗ್ಲಿಷಿನಲ್ಲಿ ಕಲಿತ ವಿದ್ಯಾರ್ಥಿಗಳೂ ಪರೀಕ್ಷೆಗೆ ಕುಳಿತುಕೊಂಡರು. ಫಲಿತಾಂಶದಲ್ಲಿ, ಕನ್ನಡದಲ್ಲಿ ಕಲಿತ ಹುಡುಗರೇ ಚರಿತ್ರೆ ಭೂಗೋಳಗಳಲ್ಲಿ ಇಂಗ್ಲಿಷಿನಲ್ಲಿ ಬರೆದವರಿಗಿಂತಲೂ ಉತ್ತಮವಾಗಿ ಉತ್ತರ ಬರೆದಿದ್ದರಲ್ಲದೆ, ಇಂಗ್ಲಿಷ್ ಭಾಷಾ ಪತ್ರಿಕೆಯಲ್ಲಿಯೂ ಅವರ ಉತ್ತರಗಳು ಮೇಲ್ತರಗತಿಯವಾಗಿದ್ದುವು. ಇದು ಎಲ್ಲರೂ ಗಮನಿಸಬೇಕಾದ ಮುಖ್ಯ ವಿಚಾರ. ಯಾಕೆಂದರೆ, ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಕೂಡ ಇಂಗ್ಲಿಷಿನಲ್ಲಿ ಸಾಕಾದಷ್ಟು ಜ್ಞಾನವುಳ್ಳವರಾಗಿಲ್ಲ ಎಂಬ ಹಾಡನ್ನೇ ವಿಶ್ವವಿದ್ಯಾಲಯಗಳವರು ಯಾವಾಗಲೂ ಹಾಡುತ್ತಿರುವರು. ಹೈಸ್ಕೂಲುಗಳಲ್ಲಿ ಪ್ರಾಂತಿಕ ಭಾಷೆಯ ಮೂಲಕವೇ ಶಿಕ್ಷಣ ಕೊಡಬೇಕೆಂದು ನಮ್ಮ ಪಕ್ಷವಾಗಿ ವಾದಿಸುವವರು, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣವು ಇಂಗ್ಲಿಷಿನಲ್ಲಿಯೇ ನಡೆಯುವವರೆಗೆ, ಹೈಸ್ಕೂಲುಗಳಲ್ಲಿ ಇಂಗ್ಲಿಷ್ ಭಾಷಾ ಜ್ಞಾನಮಾನವು ಕುಗ್ಗದಂತೆ ಜಾಗರೂಕತೆಯನ್ನು ವಹಿಸಬೇಕು.

ನಾವು ಕರ್ಣಾಟಕವೆಂದು ಕರೆಯುವ ಭಾಗದಲ್ಲಿ ಹೆಚ್ಚು ಜನರು ಕನ್ನಡ ಮಾತಾಡುವವರೇ ಆಗಿದ್ದಾರೆ. ಅವರೆಲ್ಲ ಒಂದು ಬಗೆಯ ಸಾಹಿತಿಕ ಸಂಪ್ರದಾಯಕ್ಕೆ ಒಳಪಟ್ಟಿದ್ದಾರೆ. ಕನ್ನಡಿಗರಾದ ನಮ್ಮೆಲ್ಲರಿಗೂ ಅದು ಮುಖ್ಯವಾಗಿದೆ. ಇತರ ಸಾಂಪ್ರದಾಯಿಕ ವಿಚಾರಗಳಲ್ಲಿ ನಾವು ಉಳಿದ ಭಾರತೀಯರೊಂದಿಗೆ ಒಂದಾಗಿದ್ದೇವೆ. ಹಿಂದುಸ್ಥಾನದಲ್ಲಿ ಉಳಿದ ಭಾಗಕ್ಕೂ ಕರ್ಣಾಟಕಕ್ಕೂ ಮಧ್ಯೆ ಗೋಡೆಯನ್ನು ನಿಲ್ಲಿಸದೆ, ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ನೆಲಸಿರುವ ಕನ್ನಡಿಗರೊಂದಿಗೆ ಹೆಚ್ಚು ಬಾಂಧವ್ಯವನ್ನುಂಟುಮಾಡಲು ನಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹೇಗೆ ಬೆಳೆಸಬೇಕು? ಮತ್ತೆ ನಾವು ನಮ್ಮ ಮಧ್ಯದಲ್ಲಿರುವ ಅಲ್ಪಸಂಖ್ಯಾಕ ಅನ್ಯಭಾಷೀಯರ ಆತ್ಮವಿಕಾಸ, ಭಾವಪ್ರಕಾಶನೆಗಳಿಗೆ ಅಡ್ಡಹೋಗದೆ, ಕನ್ನಡಿಗರ ಐಕ್ಯವನ್ನು ಹೇಗೆ ಸಾಧಿಸಬೇಕು? ಈ ವಿಚಾರಗಳನ್ನು ಕುರಿತು ನಾವು ಯೋಚನೆ ಮಾಡಬೇಕು.

ನಾವೆಲ್ಲರು ಆಡುವದು ಕನ್ನಡ, ಬರೆಯುವದು ಕನ್ನಡ, ಅದಕ್ಕೊಂದು ಸನ್ಮಾನ್ಯ ಭಾಷೆಯೆಂದೆನಿಸಿಕೊಳ್ಳುವ ಹಕ್ಕಿದೆ. ಆದಾಗ್ಯೂ, ಇತರ ಭಾಷೆಗಳಲ್ಲಿರುವಂತೆ, ಕನ್ನಡದಲ್ಲಿಯೂ ಆಡುವ ಭಾಷೆಯಲ್ಲಿ ಭೇದಗಳಿವೆ. ಅವುಗಳಲ್ಲಿ ಕೆಲವು ಗ್ರಾಮ್ಯ, ಕೆಲವು ಪ್ರತ್ಯಯಭೇದಗಳುಳ್ಳವು. ಲೂಥರ್ ಎಂಬಾತನು ಜರ್ಮನ್ ಗ್ರಾಮ್ಯ ಭಾಷೆಯೊಂದರಲ್ಲಿ ಬೈಬಲನ್ನು ಬರೆದು ಜರ್ಮನಿಯು ಒಂದು ಭಾಷಾಮಾನವನ್ನು ಪಡೆಯುವಂತೆ ಮಾಡಿದನು; ಕೊರೇಸ್ ಎಂಬಾತನು ಗ್ರೀಕ್ ದೇಶದ ಎಲ್ಲ ಗ್ರಾಮ್ಯ ಶಬ್ದಗಳನ್ನು ಸಂಗ್ರಹಿಸಿ ಗ್ರೀಕ್ ಭಾಷೆಯ ಮಾನದಂಡದಿಂದ ಗ್ರೀಕರ ಸ್ವಾತಂತ್ರ್ಯಕ್ಕೆ ಹಾದಿ ಹಾಕಿಕೊಟ್ಟನು. ಮತ್ತೆ ಇಂಗ್ಲಿಷಿಗೆ ಕೂಡ ಒಂದು ಮಾನದಂಡವಿದೆ; ಇಷ್ಟಾಗಿದ್ದರೂ ಆ ದೇಶಗಳಲ್ಲಿ ಇಂದಿಗೂ ಸ್ಥಳೀಯ ಪದಭೇದಗಳು ಇದ್ದೇ ಇವೆ. ಹೀಗಿರುವಾಗ ಶಬ್ದಕೋಶ, ವಾಕ್ಯವಿನ್ಯಾಸ, ಉಚ್ಚಾರ, ಸಾಹಿತಿಕ ಸಂಪ್ರದಾಯ ಮುಂತಾದ ವಿಚಾರಗಳಲ್ಲಿ ನಾವು ಕನ್ನಡಕ್ಕೂ ಒಂದು ಅಳತೆಯನ್ನು ಶೀಘ್ರದಲ್ಲಿಯೆ ನಿರ್ಧರಿಸುವದು ನಮಗೆ ಎಷ್ಟುಮಟ್ಟಿಗೆ ಸಾಧ್ಯ?

ಮನುಷ್ಯನಿಗೆ ಸಂಪ್ರದಾಯವೂ ಬೇಕು, ವಿಭಿನ್ನತೆಯೂ ಬೇಕು. ನನಗೆ ಪರಿಚಯವಿರುವ ಶಾಸ್ತ್ರದಲ್ಲಿ ಹಣದ ವಿಚಾರ ಮಾತಾಡುವಾಗ ನಾವು ಮಾನದಂಡ ಸಂಗ್ರಾಮವನ್ನು ಕುರಿತು ಹೇಳುತ್ತೇವೆ. ಆಗ ನಮ್ಮ ಕ್ರಯ ವಿಕ್ರಯ ಮತ್ತು ಕೊಡುಕೊಳ್ಳುವ ವ್ಯವಹಾರದಲ್ಲಿ ಯಾವದು ಬೆಲೆಯ ಮಾನವಾಗಿರಬೇಕು—ಚಿನ್ನವೊ, ಬೆಳ್ಳಿಯೊ ಅಥವಾ ಎರಡೂ ಸೇರಿರಬೇಕೊ? ಅಥವಾ ಕಾಗದವೆ ಬೆಲೆಯ ಮಾನವಾಗಿರಬೇಕೊ? ಎಂದು ಕೇಳುತ್ತೇವೆ. ಮತ್ತೆ ನಾವು ಜೀವಮಾನ, ಆಯಮಾನ, ವ್ಯಯಮಾನ ಎಂದು ಮಾನವಿಚಾರಗಳನ್ನಾಡುತ್ತೇವೆ. ಆ ಸಂದರ್ಭದಲ್ಲಿ ಮಾನ ನಿರ್ಧಾರವು ಸ್ಥಳೀಯ ಬದಲಾವಣೆಗಳನ್ನವಲಂಬಿಸಿರುವದು. ಭಾಷೆಯ ವಿಚಾರದಲ್ಲಿಯೂ ಹಾಗೆಯೇ, ಹೆಚ್ಚು ಭೇದವಿಲ್ಲ. ಸಾಹಿತ್ಯವ್ಯವಹಾರಕ್ಕೂ ಒಂದು ಟಂಕಸಾಲೆ ಸ್ಥಾಪಿಸಿಕೊಳ್ಳುವದು ಪ್ರಯೋಜನಕರ. ಆ ಶಬ್ದಟಂಕಸಾಲೆಯಿಂದ ಹೊರಬಿದ್ದ ಪದಗಳು ವಿಶಾಲವಾಗಿ ಪ್ರಚಾರವಾಗುವಂತಿರಬೇಕು. ಸಾಧ್ಯವಾದರೆ ಮೈಸೂರು, ಧಾರವಾಡ, ಉತ್ತರ ಮತ್ತು ದಕ್ಷಿಣ ಕನ್ನಡ ಮುಂತಾದ ಕನ್ನಡ ನಾಡಿನ ಭಾಗಗಳಲ್ಲಿ ಶಬ್ದಸಾಮ್ಯತೆಯನ್ನು ತಂಲೆತ್ತಿಸುವದು ಪ್ರಯೋಜನಕರ. ಈ ವಿಚಾರದಲ್ಲಿ ಯಾವ ಸರ್ವಾಧಿಕಾರಿಯಿಂದಲೂ ನಮಗೆ ನಿಜವಾದ ಸಹಾಯವಾಗಲಾರದು. ಆದ್ದರಿಂದ ಈ ಕೆಲಸವನ್ನು ಎಂದಿನಂತೆ ನಾವು ಒಂದು ಕಮಿಟಿಗೆ, ಎಂದರೆ ಸಾರ್ವಜನಿಕ ಮಂಡಳಿಗೆ ವಹಿಸಬೇಕು. ಮಂಡಳಿಯ ಕೆಲಸ ನಡೆಯುವದು ಮಂದವಾದರೂ, ಕೊನೆಗಾಣುವದು ಖಂಡಿತ. ಆದರೆ ಆ ಮಂಡಳಿಯು ಮಾತ್ರ ಪ್ರಾತಿನಿಧಿಕವಾಗಿರಬೇಕು, ಕೊಡುಕೊಳ್ಳುವ ವಿಚಾರದಲ್ಲಿ ಉದಾರ ಹೃದಯದ್ದಾಗಿರಬೇಕು. ಈ ಯೋಜನೆಯೂ ಕೃತ್ರಿಮವಾಗಬಹುದು. ಇದಕ್ಕೂ ಉತ್ತಮವಾದ ಯೋಜನೆಯೆಂದರೆ ಕರ್ಣಾಟಕದ ಬೇರೆ ಬೇರೆ ಭಾಗಗಳ ಜನರು ಆಗಾಗ್ಗೆ ಕಲೆತು ಸಲಿಗೆಯಿಂದ ಬೆರೆಯುವಂತೆ ಕೂಟಗಳು ಸೇರಬೇಕು, ಸಂಭಾಷಣೆ ನಡೆಸಬೇಕು. ಪರಸ್ಪರ ಸಾಹಿತ್ಯ ಕೃತಿಗಳನ್ನು, ಪತ್ರಿಕೆಗಳನ್ನು ಪಠಿಸಬೇಕು. ಇತರ ದೇಶದಲ್ಲಿರುವಂತೆ ನಮ್ಮ ಕರ್ಣಾಟಕದಲ್ಲಿಯೂ ಸ್ಥಳೀಯ ಪದಭೇದಗಳಿವೆ. ಅವು, ಅಲ್ಲಿಯೂ ಹೋಗಿಲ್ಲ, ಇಲ್ಲಿಯೂ ಹೋಗುವದಿಲ್ಲ. ಆದಾಗ್ಯೂ ಅಖಿಲ ಕರ್ಣಾಟಕದಲ್ಲಿ ಎಲ್ಲರಿಗೂ ಸುಲಭವಾಗಿ ತಿಳಿಯುವಂಥ ಒಂದು ಜ್ಞಾನಮಾನವನ್ನು, ಭಾವಮಾನವನ್ನು ಸ್ಥಾಪಿಸಲು ನಾಟಕ, ಟಾಕಿ, ಮತ್ತೆ ಹೆಚ್ಚಾಗಿ ರೇಡಿಯೋಗಳ ಸಹಾಯವನ್ನು ಪಡೆಯಬಹುದು.

ಕನ್ನಡಿಗರ ಜೀವನಕ್ರಮದಲ್ಲಿ ಸಾಹಿತ್ಯಸಂಸ್ಕೃತಿಗಳಲ್ಲಿ ಸಲಿಗೆ, ಶ್ರೇಷ್ಠತೆಗಳು ಹೆಚ್ಚಿದರೂ, ಅವರು ಪೃಥಕ್ಕಾಗಿ ಹಿಂದುಸ್ಥಾನದ ಉಳಿದ ಭಾಗಗಳಿಂದ ಬೇರ್ಪಟ್ಟು ಸುಖವಾಗಿ ಬಾಳಲಾರರು. ಸುದ್ದಿಗಳನ್ನು ತಿಳಿಸುವದರಲ್ಲಿ ಉಂಟಾಗಿರುವ ಸಾಧನಸೌಕರ್ಯಗಳು, ಮತ್ತು ಈಚೆಗೆ ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರೀಯ ಭಾವನೆಗಳು, ಹೊರಗಿನವರೊಂದಿಗೆ ನಮ್ಮ ಸಂಬಂಧವನ್ನು ಹೆಚ್ಚಿಸುತ್ತಿವೆ. ಒಂದೇ ಪ್ರಭುತ್ವದ ಆಡಳಿತದಲ್ಲಿರುವ ವಿಶಾಲ ಕರ್ಣಾಟಕದವರ ವಿಚಾರದಲ್ಲಂತೂ ಈ ಸಂಬಂಧವು ವಿಶೇಷ ಬೆಳೆಯುತ್ತಿವೆ. ಈ ಬಾಂಧವ್ಯವನ್ನು ಅಭಿವೃದ್ಧಿಗೊಳಿಸಬೇಕು ಆ ಕೆಲಸಕ್ಕೆ ಸರಿಯಾದ ಸಾಧನವು ಬೇಕು. ಏಕಭಾಷೆಯೇ. ಅದಕ್ಕೆ ಸರಿಯಾದ ಸಾಧನ. ಆ ಸಾಧನಕ್ಕೆ ತಕ್ಕ ಭಾಷೆಯನ್ನು ಹುಡುಕಲು ನಾವು ದೂರ ಹೋಗಬೇಕಾಗಿಲ್ಲ. ಇಂಗ್ಲಿಷ್ ಇದ್ದೇ ಇದೆ. ಈಚೆಗೆ ಹಿಂದೀ ಅದಕ್ಕೆ ಪ್ರತಿಸ್ಪರ್ಧಿಯಾಗಿ ನಿಂತಿದೆ. ಇಂಗ್ಲಿಷಿಗೆ ಎರಡು ಬಗೆಯ ಸೌಕರ್ಯಗಳಿವೆ: (೧) ಸರಕಾರೀ ವ್ಯವಹಾರ ಮತ್ತು ಶಿಕ್ಷಣಪದ್ಧತಿಯಲ್ಲಿ ಅದು ಆಗಲೇ ಪ್ರಚಾರಕ್ಕೆ ಬಂದಿದೆ; (೨) ಹಿಂದುಸ್ಥಾನದ ಹೊರಗಿರುವವರೊಂದಿಗೆ ಸಂಸ್ಕೃತಿ ಸಂಬಂಧವನ್ನು ಬೆಳೆಸಲು ಅದು ಸಹಾಯಕವಾಗಿದೆ. ಇಂಗ್ಲಿಷ್ ನಮಗೆ ಎರಡನೇ ಭಾಷೆಯಂತಾಗಿದೆ. ಅದರ ಮೂಲಕ ಹಿಂದುಸ್ಥಾನದ ಬೇರೆ ಭಾಗದಲ್ಲಿರುವವರೊಂದಿಗೆ ನಾವು ಕಲೆಯಲನುಕೂಲವಾಗಿದೆ ಎಂಬುದು ನಿಜ. ಅದರೆ ಆ ಭಾಷೆ ಹೆಚ್ಚು ಜನರಲ್ಲಿ ಪ್ರಚಾರವಾಗುವದೆ ಎಂದು ಸಂದೇಹವಾಗಿದೆ. ಮತ್ತೆ ಹಿಂದೀಯು ಹೆಚ್ಚು ಜನರ ಮಾತೃಭಾಷೆಯಾಗಿದೆ. ಅದರಂತೆಯೆ ಅದಕ್ಕೆ ಸಂಬಂಧಿಸಿದ ಉರ್ದುವೆ ಮಾತೃಭಾಷೆಯಾಗಿರುವ ಜನರ ಪಂಗಡವೂ ದೊಡ್ಡದಾಗಿದೆ. ಮತ್ತೆ ಆ ಭಾಷೆಯು ಸುಖವನ್ನುವಾಗಿದೆಯೆಂತಲೂ ಹೇಳಿಕೊಳ್ಳುವರು. ಅದು ನ್ಯಾಯವಾಗಿದ್ದರೂ ಇರಬಹುದು. ಈಚಿಗೆ ಅದರಲ್ಲಿ ಉಂಟಾಗಿರುವ ಅನೇಕ ಮಾರ್ಪಾಟುಗಳಿಂದ ಆಧುನಿಕ ಜೀವನದ ಎಲ್ಲ ಭಾವಗಳನ್ನು ಪ್ರಕಾಶಗೊಳಿಸುವ ಶಕ್ತಿಯು ಅದಕ್ಕೆ ಬಂದಿದೆ. ಮತ್ತೆ ಅದನ್ನು ರಾಷ್ಟ್ರಭಾಷೆಯಾಗಿ ಮಾಡಲು ಬೇಕಾದಷ್ಟು ಪ್ರಯತ್ನಗಳೂ ನಡೆಯುತ್ತಿವೆ. ಸಾಮಾಜಿಕ ಜೀವನದ ಇತರ ವಿಷಯಗಳಂತೆ ಇದರಲ್ಲಿಯೂ ಬಹುಜನರ ನಿರ್ಧಾರದಂತೆಯೇ ತೀರ್ಮಾನವಾಗತಕ್ಕದ್ದು ಸಹಜ. ಆದ್ದರಿಂದ ಹಿಂದುಸ್ಥಾನದಲ್ಲಿ ಆಗುವ ಸಂಸ್ಕೃತಿಯ ಚಳವಳಿಗಳೊಂದಿಗೆ ನಾವು ಸರಿಸಮವಾಗಿ ನಡೆಯಲು ಹಿಂದೀ ಭಾಷೆಯನ್ನು ಬಿಟ್ಟು ಬೇರೆ ಭಾಷೆಯನ್ನು ಹುಡುಕುವ ಆವಶ್ಯಕತೆಯಿಲ್ಲ.

ಎರಡನೆಯ ಪ್ರಶ್ನೆಯು ಕೇವಲ ಕರ್ಣಾಟಕದವರಿಗೆ ಮತ್ತೆ ಹಿಂದೀ ಭಾಷೆ ಅರಿಯದ ಬೇರೆಯವರಿಗೆ ಸಂಬಂಧಿಸಿದ್ದು. ಹಿಂದೆ ಹೇಳಿದ ತೊಂದರೆಗಳೆಲ್ಲ ನಿವಾರಣೆಯಾಗಿ, ಹಿಂದೀ ಭಾಷೆಯು ಏಕರೂಪತೆಯನ್ನು ಹೊಂದಿ ರಾಷ್ಟ್ರಭಾಷೆಯಾಯಿತೆಂದಿಟ್ಟುಕೊಳ್ಳೋಣ. ಆಗ ನಮ್ಮ ಸಂಸ್ಕೃತಿ ಜೀವನ ಮತ್ತು ಶಿಕ್ಷಣಪದ್ಧತಿಯಲ್ಲಿ ಆ ಭಾಷೆಗೆ ಯಾವ ಸ್ಥಾನ ಕೊಡಬೇಕು? ಆಗ ನಮ್ಮ ಮಾತೃಭಾಷೆ ಮತ್ತು ರಾಷ್ಟ್ರಭಾಷೆಗಳ ಸ್ಥಾನವನ್ನು ನಿರ್ಣಯಿಸುವದು ಹೇಗೆ? ಬಡವರಾದ ನಮ್ಮ ಮನೆಯ ಮಗುವೆ ರೋಗದಿಂದ ಬಳಲಿ ಬೆಂಡಾಗಿ ಈಗ ಚೇತರಿಸಿಕೊಳ್ಳುತ್ತಿದೆ ಎನ್ನುವಾಗ ಈ ನೆರೆಮನೆಯ ಪುಷ್ಟವಾಗಿರುವ ಸಾಕುಮಗುವನ್ನು ಮನೆಯಲ್ಲಿಟ್ಟುಕೊಂಡರೆ ನಮ್ಮ ಮಗುವಿಗೆ ಸಾಕಾದಷ್ಟು ಪೋಷಣೆಯಿಲ್ಲದೆ ಕೃಶವಾಗುವದೆಂಬ ಭೀತಿಗೊಂಡಿದ್ದವರಿಗೂ, ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಮಕ್ಕಳ ಮರಣಸಂಖ್ಯೆಯಿಂದ ಸ್ವಲ್ಪ ಸಂತಾಪಗೊಂಡು, ತಮ್ಮ ವಶದಲ್ಲಿರುವ ಮಗುವಿನ ವಿಚಾರವಾಗಿ ಕಾತರಗೊಂಡಿರುವ ಆ ಸಾಕುಮಗುವಿನ ಪಾಲಕರೆನಿಸಿದವರಿಗೂ ಈಚೆಗೆ ಈ ವಿಚಾರದಲ್ಲಿ ಉಗ್ರವಾದ ವಾದವಿವಾದಗಳು ನಡೆದಿವೆ. ಆ ಕಲಹವಿಚಾರವನ್ನು ಇಲ್ಲಿ ಹೇಳುವದು ನನ್ನ ಉದ್ದೇಶವಲ್ಲ. ಆದರೆ ಆ ಸಮಯದಲ್ಲಿ ನಾನು ಹೇಳಿದ ಅಭಿಪ್ರಾಯಗಳು ನಮ್ಮ ಸಂಸ್ಥಾನದಲ್ಲಿ ಎರಡು ಪಕ್ಷದವರಿಗೂ ಒಪ್ಪಿಗೆಯಾದ್ದರಿಂದ ನಾನು ಇಲ್ಲಿ ಅದನ್ನು ಮತ್ತೆ ಹೇಳಬೇಕಾಗಿದೆ. ಯಾಕೆಂದರೆ, ಹಿಂದೀ ಪಕ್ಷದಲ್ಲಿ ಜವಾಬ್ದಾರರಾದವರು ಕನ್ನಡಿಗರ ಈ ಅಕಾರಣ ಭೀತಿಯನ್ನು ನಿವಾರಿಸಿ, ಕರ್ಣಾಟಕದಲ್ಲಿ ಹಿಂದೀ ವಿಚಾ ವಾಗಿ ಸಾಧ್ಯವಾದಷ್ಟು ಸಹಾಯ ಮಾಡಬೇಕೆಂದು ಕೇ ಕೊಂಡಿದ್ದಾರೆ. ಈ ವಿಚಾರದಲ್ಲಿ ನಾನು ಹೀಗೆ ಹೇಳಿದ್ದೇನೆ:—ಕನ್ನಡ ನಮ್ಮ ಮಾತೃಭಾಷೆ. ಕನ್ನಡ ನಾಡಿನಲ್ಲಿ ಬಹು ಜ ರೊಂದಿಗೆ ನಾವು ಕಲೆತು ಬೆರೆಯುವದು ಈ ಭಾಷೆಯಿಂದಲೆ ಆದ್ದರಿಂದ ಕನ್ನಡ ಭಾಷೆಗೆ ನಾವು ಪ್ರಮುಖಸ್ಥಾನವನ್ ಕೊಡುವದು ನಮ್ಮ ಕರ್ತವ್ಯ. ಸ್ಕೂಲು, ಕೊಲೆಜ್‌ಗಳಲ್ಲಿ ಕನ್ನ ಭಾಷೆಗೆ ಕೊಟ್ಟಿರುವ ಸ್ಥಾನವನ್ನು ಹಿಂದೀಯು ಆಕ್ರಮಿಸಲಾರದು ಸೆಕೆಂಡರಿ ಮತ್ತು ಕೊಲೆಜ್ ತರಗತಿಗಳಲ್ಲಿ ಇಂಗ್ಲಿಷಿಗೆ ಪ್ರಥಮ ಸ್ಥಾನವನ್ನು ಕೊಟ್ಟಿರುವದು ನಿಜ. ಸಂಸ್ಕೃತ ಅಥವಾ ಅರಬಿ ಭಾಷೆಯನ್ನು ಅಲ್ಲಿ ಕನ್ನಡಕ್ಕೆ ಬದಲಾಗಿ, ದ್ವಿತೀಯ ಭಾಷೆಯಾಗಿ ಸ್ವೀಕರಿಸಬಹುದು. ಹಿಂದೂಗಳಿಗೆ ಸಂಸ್ಕೃತದಲ್ಲಿಯೂ ಮುಸಲ್ಮಾನ ಬಂಧುಗಳಿಗೆ ಅರಬಿ ಭಾಷೆಯಲ್ಲಿಯೂ ಒಂದು ಬಗೆಯ ಅಭಿಮಾನವಿರುವದು. ಶಿಕ್ಷಣಪದ್ಧತಿಯಲ್ಲಿ ಮಾತೃ ಭಾಷಾ ಸ್ಥಾನವನ್ನು ಕಾಪಾಡಲು ಕಾತರಗೊಂಡಿರುವ ನಾವ ಸಂಸ್ಕೃತ ಅರಾಬಿಕ್ ಭಾಷೆಗಳಿಗಿರುವ ಗೌರವಸ್ಥಾನವನ್ನು ಒಪ್ಪಿಕೊಳ್ಳಬೇಕಾಗಿದೆ. ಮತ್ತೆ ನಮ್ಮ ಈಗಿನ ಶಿಕ್ಷಣಪದ್ಧತಿಯಲ್ಲಿ, ಇಂಗ್ಲಿಷಿಗೆ ಬದಲಾಗಿ ಹಿಂದೀಯನ್ನು, ಇನ್ನು ಕೆಲವು ವರ್ಷಗಳ ವರೆಗಾದರೂ ನಿಯೋಜಿಸಲೆತ್ನಿಸುವದು ವ್ಯಾವಹಾರಿ ರಾಜನೀತಿಯಾಗಲಿಕ್ಕಿಲ್ಲ. ಆದ್ದರಿಂದ ಹಿಂದೀ ಭಾಷೆಗೆ ಈ ರೀ ಯಾಗಿ ಪ್ರೋತ್ಸಾಹ ಕೊಡಬಹುದು:—(೧) ಶಾಲೆ, ಕೊಲೆಜ್‌ಗಳಲ್ಲಿ ಅದನ್ನು ಐಚ್ಛಿಕ ವಿಷಯವಾಗಿಡಬಹುದು; (೨) ಸಾಧ್ಯವಿದ್ದಷ್ಟು ವಿದ್ಯಾಸಂಸ್ಥೆಗಳಲ್ಲಿ ಪರೀಕ್ಷೆಗೆ ಅವಶ್ಯವಲ್ಲದ ಭಾಷೆಯಾಗಿ ಸಂಕ್ಷಿಪ್ತ ಪಾಠಕ್ರಮದಲ್ಲಿ ಹಿಂದೀಯನ್ನು ಕಲಿಸಬಹುದು; (೩) ಪ್ರೌಢರ ಶಿಕ್ಷಣದ ಮುಖ್ಯ ಅಂಗವಾಗಿಯೂ ಹಿಂದೀ ಭಾಷೆಯನ್ನು ಕಲಿಸಬಹುದು—ಕೊನೆಯ ವಿಚಾರದಲ್ಲಿ ನನಗೆ ಆಸಕ್ತಿ ಹೆಚ್ಚು. ಯಾಕೆಂದರೆ, ನಮ್ಮಲ್ಲಿ ಸುಶಿಕ್ಷಿತರಾದ ಅನೇಕರಿ ಬೇಕಾದಷ್ಟು ವಿರಾಮವಿದೆ. ಆ ವಿರಾಮಕಾಲವನ್ನು ನಿರ್ಬಾಧಕವಾಗಿ ಲಾಭದಾಯಕವಾಗಿ ಹಿಂದೀ ಕಲಿಯುವದಕ್ಕೆ ಉಪಯೋಗಿಸಬಹುದು. ಅಂಥವರು ಹಿಂದೀ ಕಲಿತು ಅಖಿಲ ಭಾ ತೀಯ ವಿಚಾರಗಳನ್ನು ಕರ್ಣಾಟಕದಲ್ಲಿಯೂ ಹರಡಬಹುದು ಕರ್ಣಾಟಕದಲ್ಲಿ ಹೆಚ್ಚು ಜನ ಸ್ತ್ರೀಯರು ಉತ್ಸಾಹದಿಂದ ಹಿಂದೀ ಕಲಿಯಲಾರಂಭಿಸಿರುವದು ಸಂತೋಷಕರವಾದ ಸಂಗತಿಯಾಗಿದೆ ಯಾಕೆಂದರೆ, ಭಾರತೀಯ ಸಮಾನಾಧಿಕರಣ ಭಾವನೆಯೂ ಸಂಸ್ಕೃತಿ ಪ್ರೇಮವೂ ಸಂಸ್ಕೃತಿ ಸ್ವಾಭಿಮಾನಗಳ ಮೂಲಸ್ಥಾ ವಾದ ಕುಟುಂಬದಲ್ಲಿ ಬೇರೂರಲಾರಂಭಿಸಿವೆಯೆಂದು ಇದರಿಂದ ವ್ಯಕ್ತವಾಗುವದು.

ಚಿತ್ರಾ ಟೊಕಿಸ್,
(ಮಾಜಿ ಹಿಂದೂಸ್ಥಾನ್ ಥಿಯೇಟರ್)
ಮಂಗಳೂರು,
ಇವರು
ಶ್ರೇಷ್ಠ ತರಗತಿಯ ಫಿಡೆಲಿಟಿ ಸೌಂಡ್ ಸಿಸ್ಟಂ
ಯಂತ್ರದಿಂದ ಸದ್ಯದಲ್ಲೇ
ಪ್ರಭಾತ ಸಿನೆಟೋನಿನವರ ಪ್ರಖ್ಯಾತ ಪೌರಾಣಿಕ
"ಚಂದ್ರಸೇನಾ"
ಚಿತ್ರದೊಡನೆ ಪ್ರದರ್ಶನಗಳನ್ನಾರಂಭಿಸುವರು.
ಧ್ವನಿಯು ಅತ್ಯಂತ ಸ್ಪಷ್ಟ!

'ರಾಮದಾಸ' ವಜ್ರಕಾಯ ಗುಟಿಕಾ
(STERN-VIGOUR)

ಈ ಔಷಧದಲ್ಲಿ ಭಂಗಾರ, ಕಸ್ತೂರಿ, ಕೇಸರಿ ಮುಂತಾ ಅಮೂಲ್ಯ ಜಿನಸುಗಳಿದ್ದು ಇದು ಮುಖ್ಯವಾಗಿ ಧಾತುವನ್ನು ಗಟ್ಟಿಮಾ ಧಾತು ಕ್ಷೀಣತೆ ಮೂಲಕ ಉದ್ಭವಿಸುವ ಸ್ವಪ್ನೇಂದ್ರಿಯ ಮೊದಲಾ ಕೊರತೆಗಳನ್ನು ದೂರಪಡಿಸಿ, ಧಾತುಸ್ತಂಭನ ಶಕ್ತಿಯನ್ನು ಹೆಚ್ಚಿಸಿ ರತಿಕ್ರೀಡೆಯಲ್ಲಿ ಹೆಚ್ಚಿನ ಆಹ್ಲಾದವನ್ನು ಕೊಡುವುದು, ಹಾಗೂ ಅ ಚಾರದಿಂದ ಉಂಟಾದ ನಪುಂಸಕತ್ವವನ್ನು ಸಹಾ ಹೋಗಲಾಡಿಸುವುದು ೧೨ ಗುಳಿಗೆಗಳ ಬಾಟ್ಲಿ ೧ಕ್ಕೆ ರೂ. ೧—೪—೦; ಅಂಚೆ ೪—೮—೦.

ಪ್ರತಿ ದಿನ ಒಂದೇ ಗುಳಿಗೆಯಂತೆ ಸೇವಿಸುವುದು.

ನಮ್ಮ ಇತರ ಅನುಭವಸಿದ್ಧ, ವನಸ್ಪತಿಜನ್ಯ ಔಷಧಗಳ ಮಾಹಿತಿ ಪತ್ರಕವನ್ನು ನಮ್ಮ ಏಜಂಟರಿಂದಾಗಲೀ ವ್ಯಾಪಾರಸ್ಥರಿಂದಾಗಲೀ ಪ ಕೊಳ್ಳಿರಿ. ನಮ್ಮ ಔಷಧಗಳು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಒಂದ ಊರಲ್ಲಿ ಪ್ರಮುಖ ವ್ಯಾಪಾರಸ್ಥರಲ್ಲಿ ದೊರಕುವವು.

ತಯಾರಿಸುವವರು:—
ರಾಮದಾಸ ಕೆಮಿಕಲ್ ವರ್ಕ್ಸ್, ಹುಬ್ಬಳ್ಳಿ.
ಜಿಲ್ಲಾ ಏಜಂಟರು:—
ಮಲ್ಲಾಪುರ ಕಂಪೆನಿ, ಲಿಮಿಟೆಡ್, ಹೊಸಗದ್ದೆಕೇರಿ,
ಮಂಗಳೂರು
ಸಬ್ ಏಜಂಟರು:—
ಕೆ. ರಾಮ ನಾಯಕ, ಕಾಸರಗೋಡು.
ಎಮ್. ಮುಕುಂದ ಕೃಷ್ಣನಾಯಕ, ಮಂಜೇಶ್ವರ.
ಡಾ। ಕೆ. ಶ್ರೀನಿವಾಸ ಪೈ, L. M. P., ಪುತ್ತೂರು.
ವಿಕ್ಟೋರಿಯಾ ಪ್ರೆಸ್, ಬಂಟ್ವಾಳ.
ಡಾ। ರಾಯಪ್ಪ ಕಾಮತ್, ಎಲ್. ಎಂ. ಪಿ., ಮೂಲ್ಕಿ.
ವಿ. ವಿ. ಶೆಣೈ, ಕಾರ್ಕಳ.
ಮೆ। ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.
ದಿ ಮೊಡರ್ನ್ ಫಾರ್ಮಸಿ, } ಕುಂದಾಪುರ.
ರಾಮಚಂದ್ರ ಹೆಬ್ಬಾರ, ಕೋಣಿ }

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ
ಮಕ್ಕಳನ್ನು ಕಾಪಾಡಿರಿ.

ಬಾಲಸಂಜೀವಿನಿಯನ್ನು ಉಪಯೋಗಿಸಿರಿ.

(ರಿಜಿಸ್ಟರ್ಡ್)

ಉತ್ತಮ, ಖರೆ ಮತ್ತು ತಾಜಾ ಆದ ಅದೊಂದೇ
ವಿಜಯನಗರಂ ಔಷಧ.

ವಿ. ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು ಎಷ್ಟೇ ಕಠಿಣತರದ್ದಾಗಿದ್ದರೂ ಫಲಕಾರಿಯಾಗಿ ಗುಣಪಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವನ್ನು ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.

ಪಿಳ್ಳಾ ಪಾಪಯ್ಯ್ಯ ಪಾತ್ರೂಡು ಮತ್ತು ಸಹೋದರ,
(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),
98—99 ಬ್ರೋಡೀಸ್ ರೋಡ್, ಮೈಲಾಪುರ್, :: ಮದ್ರಾಸು.
(ರಾಮಕೃಷ್ಣ ಮಠದ ಎದುರು).



**ಈಡ್ಸ್ ಪ್ರಖ್ಯಾತ
ರುಮೆಟಿಕ್ ಮತ್ತು ಗೌಟ್ ಮಾತ್ರೆಗಳು.**
ವಾತ, ಸಂದುಬೇನೆ, ನಡುವು ನೋವು, ಸೊಂಟ ನೋವು, ತಲೆ, ಮುಖ, ಅಂಗಗಳಲ್ಲಿ ನೋವು, ಮುಂತಾದ ಎಲ್ಲಾ ವಾತ ರೋಗಗಳಿಗೆ ಸುಪ್ರಸಿದ್ಧ ಔಷಧ.

ಈ ಎಲ್ಲಾ ನೋವುಗಳಿಂದ ನರಳುವವರಿಗೆ ಈ ಔಷಧವು ಪೂರ್ವದ ಅನುಭವದಿಂದ ದಿಟವಾಗಿಯೂ, ಖಂಡಿತ ಗುಣಕಾರಿಯೆಂದು ಪ್ರತ್ಯೇಕವಾಗಿ ಶಿಫಾರಸುಮಾಡಲ್ಪಟ್ಟಿದೆ.

ಇತರ ಎಲ್ಲಾ ಒಳಗಣ ಮತ್ತು ಬಾಹ್ಯ ಔಷಧಗಳು ನಿಷ್ಪ್ರಯೋಜಕವಾದಲ್ಲಿ, ಈ ಮಾತ್ರೆಗಳು, ಬಾರಿ ಬಾರಿಗೂ ಶಮನವನ್ನುಂಟುಮಾಡಿರುತ್ತವೆ. ಯಾವ ರೀತಿಯಲ್ಲಿಯೂ ಅವುಗಳ ಗುಣವು ಭಾಧಕಕರವಾಗಿರದೆ, ಸಾಮಾನ್ಯ ಆರೋಗ್ಯಕ್ಕೆ ಯಾವಾಗಲೂ ಕಳೆಗೊಳಿಸುವ ಔಷಧವಾಗಿರುತ್ತದೆ.

Madras Stockists:—
Messrs. DADHA & CO.,
52, Nainiappa Naick Street, Madras.

The Reliance Assurance Company Limited, Bangalore City.
ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಹೊಸತರುಗು ಪೇಟೆ, ಬೆಂಗಳೂರು ಸಿಟಿ.

ಈ ವರಿವಿಗೆ ಕೊಟ್ಟಿರುವ ಹಕ್ಕಿನ ಹಣ ರೂ. 2,85,000. ಅಭಿವೃದ್ಧಿ ಹೊಂದುತ್ತಿರುವ ಸಂಪೂರ್ಣ ಸ್ವದೇಶಿ ಕಂಪೆನಿ.

1. ಪಾಲಿಸಿಯು ತಾನಾಗಿಯೇ ಜಾರಿಯಲ್ಲಿರುವ ಕ್ರಮ.
2. ರದ್ದಾದ ಪಾಲಿಸಿಗಳನ್ನು ಪುನಃ ಜಾರಿಗೆ ತರುವುದು.
3. ಸ್ಥಿರವಾದ ಅಶಕ್ತತೆಗೆ ರಿಯಾಯತಿ.
4. ಭರವಸೆಯಾದ ಸರೆಂಡರ್ ವ್ಯಾಲ್ಯು. ಮತ್ತು ಪೈಡಪ್ ಪಾಲಿಸಿಗಳನ್ನು ಪಡೆಯುವಿಕೆ.
5. ಇಮ್ಮಡಿ ಹಣ ಪಡೆಯುವಿಕೆ.
6. ಸರೆಂಡರ್ ವ್ಯಾಲ್ಯುವಿನ ಸೇಕಡ 90ರಷ್ಟು ಸಾಲಗಳನ್ನು ಪಡೆಯುವಿಕೆ.

ಇವು ರಿಲೈಯನ್ಸ್ ಕಂಪೆನಿಯ ವಿಶೇಷತೆಗಳು.

ಸಮರ್ಥರಾದ ಚೀಫ್ ಏಜಂಟರುಗಳೂ ಮತ್ತು ಆರ್ಗನೈಸರುಗಳೂ, ಧಾರವಾಡ, ಬಳ್ಳಾರಿ, ಬೆಳಗಾಂ, ಬಿಜಾಪುರ ಜಿಲ್ಲೆಗಳಿಗೂ ಮತ್ತು ಮಂಗಳೂರು ಪ್ರಾಂತ್ಯಕ್ಕೂ ಬೇಕಾಗಿದ್ದಾರೆ.

ತಿರುಪತಿ ಬಲಿಜಾ ಅಂಡ್ ಕಂಪೆನಿ,
ಮ್ಯಾನೇಜಿಂಗ್ ಏಜಂಟರುಗಳು.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್

ಟ್ರೇಡ್ ಮಾರ್ಕ್.

ಡಾ. ವಾಮನ್ ಗೋಪಾಲರ
ಸರ್ಸಪರಿಲ್ಲಾ

೬ ವರ್ಷಗಳ ಅನುಭವದಿಂದ ಹುಲ್ಲಿಯಗಟ್ಟೆ ಜನರು, ರಕ್ತ ಶುದ್ಧಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ। ಗೌತಮರಾವ್ ಕೇಶವರಾವ್‌ರವರ ಟೊನಿಕ್ ಫೊಸ್ಫರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ। ಗೌತಮರಾವ್ ಕೇಶವ್ ಎಂಡ್ ಸನ್, ಠಾಕೂರ್‌ದ್ವಾರ್ 2, ಬೊಂಬಾಯಿ.

ಅಶಕ್ತ ಮಕ್ಕಳಿಗೆ
ಡೋಂಗರೆ
ಇವರ
ಬಾಲಾಮೃತ.
ವನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷಚಿತ್ತರೂ ಆಗುವರು.
ಕೆ. ಟೀ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

PAINTERS

Do you require the service of a painter?
Please call or write to:

THE MANGALORE ART WORKS,
Hampankatta, Mangalore.

K. NAGAPPA RAO,
MANGALORE JEWELLER,
Dadoba Jagannath Trust Building, Gamdevi,
BOMBAY.

High class Jewellery of the latest designs manufactured.

DEALERS IN

All sorts of precious stones, Diamonds, Pearls. Moderate Rate. Ready made ornaments of up-to-date style are always in stock.

Orders—accepted, for all kinds of ornaments, which will be manufactured on short notice—prompt delivery. Reasonable charges.

A trial will ensure satisfaction.

ರುಚಿಯಾದ ತೀನಿ.

ನಿಮ್ಮ ನಿತ್ಯದ ತಿಂಡಿ ಪಲ್ಯಗಳಲ್ಲಿ ಎ. ಕೆ. ಮಾರ್ಕಿನ, ಹಿಂಗನ್ನು ಉಪಯೋಗಿಸಿರಿ. ದಬ್ಬಾ 1ಕ್ಕೆ 0-2-6, 0-3-0, 0—4—0, 0—12—0, 1—2—0, 2—0—0.

ವಿಳಾಸ:— ಷಾ ಕಂಪೆನಿ, ಮಂಗಳೂರು.

ಬೆಲೆ ಬಹು ಸುಲಭ! | ಒಂದೇ ದರ!! | ಹೊಸ ಜವುಳಿಗಳು!!!

ಮಾಲುಗಳ ಬಣ್ಣ, ಮೊಳ ಮುಂತಾದ ನಿಜಸ್ಥಿತಿಗಳನ್ನು ಹೇಳಿಯೇ ಮಾರಲ್ಪಡುತ್ತದೆ.

ಒಮ್ಮೆ ದಯಮಾಡಿ ಬಂದು ನಮ್ಮ ಮಳಿಗೆಯನ್ನು ಸಂದರ್ಶಿಸಿದ್ದಲ್ಲಿ ಮನಸ್ಸಿಗೆ ಸಮಾಧಾನ ಕಂಡೀತು.

ಈಗಿನ ಹೊಸ ಹೊಸ ಫೇಶನುಗಳಿಗೂ, ಮದುವೆ ಮೊದಲಾದ ಶುಭಕಾರ್ಯಗಳಿಗೂ ಬೇಕಾದ ನಮೂನೆವಾರು ರೇಶ್ಮೆ ಜರಿ ಶೀರೆಗಳೂ, ಬೇರೆ ಬೇರೆ ಪ್ರಾಂತದ ಕೈಮಗ್ಗಗಳಲ್ಲಿ ತಯಾರಾದ ಅನೇಕ ವಿಧದ ಸ್ವದೇಶಿ ಶೀರೆಗಳೂ, ಮಂಗಳೂರು ಉಡ್ಪಿಯಲ್ಲಿ ತಯಾರಾದ ಮಿಶನ್ ಮಗ್ಗದ ಶೀರೆಗಳೂ ರಖಂ ಮತ್ತು ಚಿಲ್ಲರೆಯಾಗಿ ದೊರೆಯುತ್ತವೆ.

ಸಿಲ್ಕು, ಜರಿ ಮತ್ತು ನೂಲಿನ ನಾಜೂಕಾದ ಧೋತಿಗಳು, ಶಾಲು, ರುಮಾಲುಗಳು, ಮಡಿಗಳು, ಕೋಟಿಂಗ್ ಮತ್ತು ಶರ್ಟಿಂಗ್ ಬಟ್ಟೆಗಳೂ, ಇನ್ನೂ ಅನೇಕಾನೇಕ ನಮೂನೆವಾರು ಜವುಳಿಗಳೂ ಕೂಡಾ ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕಿವೆ.

☞ **ವಿ. ಸೂ:—** ನಮ್ಮಲ್ಲಿ ಪಡೆದ ಮಾಲು ಬೇರೆ ಅಂಗಡಿಗಳಿಗಿಂತ ಬೆಲೆ ಸುಲಭವಲ್ಲವೆಂತ ಕಂಡುಬಂದಲ್ಲಿ ಯಾ ಇತರ ಕಾರಣಗಳಿಂದಾಗಲಿ ಬೇಡವೆಂತ ತೋರಿದ್ದಲ್ಲಿ ಹಾಳು ಮಾಡದೆ 8 ದಿವಸದೊಳಗೆ ವಾಪಾಸು ಮಾಡಬಹುದು.

ಸೇಲಂಕಾರ್ ಎ. ವರದರಾಜು ಚೆಟ್ಟಿಯಾರ್, ಜವುಳಿ ಅಂಗಡಿ, ಮಾರ್ಕೆಟು ರಸ್ತೆ, ಮಂಗಳೂರು.

ಶಿಕ್ಷಣ ವಿಚಾರ

ಪರೀಕ್ಷೆಗಳ ಪರೀಕ್ಷೆ.

ಪರೀಕ್ಷೆಗಳಿಂದುಂಟಾಗುವ ಕೆಡುಕುಗಳ ವಿಷಯ ಅನೇಕರು ಅನೇಕ ರೀತಿಯಾಗಿ ಬರೆದಿರುವರು. ಆದರೆ ಅದಕ್ಕೆ ತಕ್ಕ ಪ್ರತಿಚ್ಛಂದವಾವುದನ್ನೂ ಅದಾರೂ ಕಂಡುಹಿಡಿದಿರುವುದಿಲ್ಲ. ಪರೀಕ್ಷೆಗಳಿಂದ ಯಾವ ತೆರದಲ್ಲಿ ಕೆಡಕುಗಳುದ್ಭವಿಸುತ್ತಿವೆ ಎಂದು ಪರಿಶೋಧಿಸಲೋಸುಗ ಪ್ರಪಂಚದಲ್ಲೆಲ್ಲಾ ಪರೀಕ್ಷಣೆಗಳು ಆಗುತ್ತಿವೆ. ಒಬ್ಬೊಬ್ಬ ಪರೀಕ್ಷಕನು ಒಂದೊಂದು ರೀತಿಯಲ್ಲಿ ಮಾರ್ಕುಗಳನ್ನು ಕೊಡುವನು, ಮಾತ್ರವಲ್ಲದೆ, ಒಬ್ಬನೇ ಪರೀಕ್ಷಕನು ಬೇರೆ ಬೇರೆ ಸಮಯದಲ್ಲಿ ಒಂದೇ ಉತ್ತರಕ್ಕೆ ವಿಧವಿಧವಾಗಿ ಮಾರ್ಕನ್ನು ಕೊಡುವನು. ಪರೀಕ್ಷಕರನ್ನು ಬಹಳ ಜಾಗ್ರತೆಯಲ್ಲಿ ಚುನಾಯಿಸಿ ತೆಗೆದಲ್ಲೂ, ಅವರಿಗೆ ಉದ್ಬುದ್ಧ ಆಜ್ಞಾಪನೆಗಳನ್ನು ಕೊಟ್ಟರೂ ಅವರ ಕೆಲಸವನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ ನೋಡಿದರೂ, ಈ ವಿಷಯವನ್ನು ಸುಧಾರಿಸಲು ಸಾಧ್ಯವಾಗಿರುವುದಿಲ್ಲ. ಪರೀಕ್ಷೆಗೆ ಕುಳಿತುಕೊಳ್ಳುವ ಹುಡುಗರ ಅವಸ್ಥೆಯು ಅದೃಷ್ಟಬಲದ ಮೇಲೆ ತುಂಬ ಹೊಂದಿಕೊಂಡಿದೆ. ಇದನ್ನೆಲ್ಲಾ ವಿಚಾರಿಸಿದಲ್ಲಿ, ಈ ಪರೀಕ್ಷೆ ಎಂಬುದನ್ನೇ ತೆಗೆದು ಹಾಕುವ ಎನ್ನಿಸುತ್ತದೆ. ಆದರೆ ಪ್ರಕೃತ ಪರೀಕ್ಷೆಗಳ ಪರೀಕ್ಷೆಯನ್ನು ವಿದ್ಯಾವಂತರಿಂದ, ತಜ್ಞರಿಂದ ಮಾಡಿಸಲು ಅವರು ಪರೀಕ್ಷೆಯೆಂಬುದು ಪ್ರಪಂಚಕ್ಕೊಂದು ಅನಿವಾರ್ಯ ಅನಿಷ್ಟ ಎಂದು ನಿರ್ಣಯಿಸಿದ್ದಾರೆ. ಕೆಲವು ದಿನಗಳ ಹಿಂದೆ ಸರ್ ಫಿಲಿಪ್ ಹಾರ್ಟೊಗ್ ಮತ್ತು ಮಿ। ಇ. ಸಿ. ರ್ಹೋಡ್ಸ್ ಇವರೀರ್ವರು ದೇಶಗಳ ಪರಸ್ಪರ ಪರೀಕ್ಷೆಗಳ ಕಾನ್ಫರೆನ್ಸಿನಲ್ಲಿ ಒಂದು ಪಟ್ಟಿಯನ್ನು ತಂದಿದ್ದರು. ಇದರಲ್ಲಿ ಒಂದೇ ಉತ್ತರಕ್ಕೆ ಬೇರೆ ಬೇರೆ ಪರೀಕ್ಷಕರು ಹೇಗೆಲ್ಲ ಮಾರ್ಕು ಕೊಟ್ಟಿರುತ್ತಾರೆ. ಎಂಬುದನ್ನವರು ವಿಚಾರಿಸಿ ಬರೆದಿದ್ದಾರೆ. ಇದನ್ನು ಬಹುಮಂದಿ ವಿದ್ವಾಂಸರಿಂದ ಕೂಡಿದ ಎರಡನೇ 'ಇಂಟರ್‌ನೆಶನಲ್ ಕೊನ್ಫರೆನ್ಸ್ ಒಫ್ ಎಕ್ಸಾಮಿನೇಶನ್ಸ್'ನಲ್ಲಿ ಚರ್ಚಿಸಲಾಯಿತು. ಬ್ರಿಟಿಷ್ ಸದಸ್ಯರಲ್ಲಿ ಅತ್ಯುತ್ತಮ ವಿದ್ಯಾವಂತರೇ ಈ ಕಾನ್ಫರೆನ್ಸಿನಲ್ಲಿ ಭಾಗವಹಿಸಿದ್ದರು. ಬೇರೆ ಬೇರೆ ಪರೀಕ್ಷಕರಿಂದ ಹಲವು ಪ್ರಶ್ನಾಪತ್ರಗಳಿಗೆ ಉಮೇದ್ವಾರರು ಬರೆದ ಉತ್ತರಗಳನ್ನು 'ತೂಕ ಮಾಡಿ' ಮಾರ್ಕು ಕೊಡುವುದಕ್ಕೆ ಇವರು ಪ್ರಯತ್ನಿಸಿದರು. ಹೀಗೆ ಮಾರ್ಕು ಹಾಕುವ ಸಲುವಾಗಿ ಅವರಿಗೆ ವೇತನವೂ ಕೊಡಲಾಗಿದ್ದಿತು. ಎಂದರೆ, ತ್ಯಾಗಬುದ್ಧಿಯಿಂದಲಾಗಲಿ ಅಥವಾ ಸೇವೆಯಿಂದಾಗಲಿ ಈ ಕೆಲಸ ಮಾಡಿಸುವಾಗ ಇರುವ ಮನೋಧರ್ಮಕ್ಕಿಂತ, ಇವರಿಗೆ ವೇತನ ಕೆತ್ತಾಗ ಒಂದು ಬಗೆಯ ತೇಜಸ್ಸು ಆ ಮನೋಧರ್ಮಕ್ಕೆ ಉಂಟಾಗುವುದಾಗಿ ಮನಃಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದರು.

'ಚರಿತ್ರೆ' ವಿಷಯಕ ಪರೀಕ್ಷೆಯ ಉತ್ತರಗಳನ್ನು ಈ ವರ್ಷ ಪರೀಕ್ಷಕರಿಂದ ತೂಕಮಾಡಿಸಿದರು; ಹನ್ನೆರಡು ತಿಂಗಳ ತರುವಾಯದಲ್ಲಿ ಅವೇ ಉತ್ತರಗಳನ್ನು ಅವರೇ ಪರೀಕ್ಷಕರಿಂದ ತೂಕ ಮಾಡಿಸಿದರು. ಎರಡನೆ ಸಲ, ಅವರೇ ಪರೀಕ್ಷಕರು, ಅವೇ ಉತ್ತರಗಳಿಗೆ ತೀರ ಬೇರೆ ಮಾರ್ಕುಗಳನ್ನು ಕೊಟ್ಟರು! ಪ್ರತಿಯೊಂದು 'ಸಬ್ಜೆಕ್ಟ'ನ ಉತ್ತರಗಳ ವಿಷಯದಲ್ಲೂ ಇದೇ ಬಗೆಯ ಪರಿಣಾಮ ಉಂಟಾಯಿತು. 'ಇಂಗ್ಲಿಷು' ಭಾಷೆಯ ಪ್ರಶ್ನೆಗಳಿಗೆ ೪೮ ಮಂದಿ ಬರೆದ ಉತ್ತರಗಳನ್ನು ಈ ರೀತಿ ಪರೀಕ್ಷಿಸಿ ಎರಡು ಸಲ (೧೨ ತಿಂಗಳ ಅವಧಿ ಬಿಟ್ಟು) ಮಾರ್ಕು ಹಾಕಿಸಲು, ಒಬ್ಬನೇ ಒಬ್ಬ ವಿದ್ಯಾರ್ಥಿಯ ಮಾರ್ಕುಗಳು ಮಾತ್ರ ಬದಲಾಗಲಿಲ್ಲ! ಏಳು ಮಂದಿ ಪರೀಕ್ಷಕರು ಇವನೊಬ್ಬನ ವಿಷಯವಾಗಿ ಮಾತ್ರ ಸರಿಯಾದ ತೀರ್ಮಾನವನ್ನು ಎರಡು ಸಲವೂ ಹೇಳಿದರು. ಯಾವನೊಬ್ಬನಿಗೆ ದೊರೆತ ಅತಿ ಹೆಚ್ಚು ಮತ್ತು ಅತಿ ಕಡಿಮೆ ಮಾರ್ಕುಗಳು (ಒಬ್ಬನೇ ಪರೀಕ್ಷಕನಿಂದ) ಅಜಗಜಾಂತರ ವ್ಯತ್ಯಾಸ ತೋರಿಸಿದುವು.

ಮೂವತ್ತು ಮಂದಿಯನ್ನು ಬಾಯಿದೆರೆ ಪರೀಕ್ಷೆಗೆ ಆರಿಸಿದರು. ಪರೀಕ್ಷಕರ ಎರಡು ಗುಂಪುಗಳ ಮುಂದೆ ಇವರ ಪರೀಕ್ಷೆ ನಡೆಯಿತು. ಫಲಿತಾಂಶ ಹೀಗಾಯಿತು:—

ಯಾವನೊಬ್ಬ ವಿದ್ಯಾರ್ಥಿಯ ವಿಷಯ ಎರಡೂ ಬೋರ್ಡುಗಳು ಒಂದೇ ಮಾರ್ಕನ್ನು ಕೊಟ್ಟುದಿಲ್ಲ. ನಂಬ್ರ ೯, ೧೨, ೧೬ ಉಳ್ಳ ಹುಡುಗರಿಗೆ ಕ್ರಮವಾಗಿ ೧೦, ೨, ೫, ಮಾರ್ಕುಗಳ ಅಂತರವುಂಟಾಯಿತು; ಎಂದರೆ ಒಂದು ಬೋರ್ಡು ಅಷ್ಟು ಹೆಚ್ಚಿಗೆ ಕೊಟ್ಟಿದ್ದಿತು. ನಂಬ್ರ ೧, ೨, ೬, ೭ ಉಳ್ಳ ಹುಡುಗರಿಗೆ ಕ್ರಮವಾಗಿ ೯೨, ೭೦, ೭೦, ೭೦ ಮಾರ್ಕುಗಳ ಅಂತರವಾಯಿತು; ಎಂದರೆ, ಒಂದು ಬೋರ್ಡು ಅಷ್ಟು ಮಾರ್ಕುಗಳನ್ನು ಅವರಿಗೆ ಮತ್ತೊಂದು ಬೋರ್ಡಿಗಿಂತ ಹೆಚ್ಚಿಗೆ ಕೊಟ್ಟಿತು! ಸರಾಸರಿಯಾಗಿ ಇವೆರಡು ಬೋರ್ಡುಗಳು ಒಬ್ಬನೇ ವಿದ್ಯಾರ್ಥಿಗೆ ಕೊಟ್ಟ ಮಾರ್ಕುಗಳ ಭೇದವು ೩೭ ಮಾರ್ಕು! ಬಾಯಿದೆರೆ ಪರೀಕ್ಷೆಯಲ್ಲಿ ಹೆಚ್ಚೆಂದರೆ ೯೨ ಮಾರ್ಕುಗಳ, ಸರಾಸರಿಯಾಗಿ ೩೭ ಮಾರ್ಕುಗಳ ಭೇದವು ಇಬ್ಬರು ಪರೀಕ್ಷಕರ ತಂಡಗಳಿಂದ ಉಂಟಾಗುವುದಾದರೆ, ನಮ್ಮ ಎಸ್. ಎಸ್. ಎಲ್. ಸಿ.ಯಲ್ಲಿ ೩೦–೪೦ ಪರೀಕ್ಷಕರು ೨೦,೦೦೦ ವಿದ್ಯಾರ್ಥಿಗಳಿಗೆ ಮಾರ್ಕು ಕೊಡುವಾಗ, ಎಷ್ಟು ಸಾವಿರ ಮಂದಿಗೆ ಎಷ್ಟು ಮಾರ್ಕುಗಳ ಭೇದವುಂಟಾಗಲು ಅವಕಾಶವಿದೆಯೋ ವಾಚಕರೇ ಊಹಿಸಬೇಕು. ಶಾಲೆಯಲ್ಲಿ ೧೬ ಸಿಕ್ಕಿದವನಿಗೆ ಪರೀಕ್ಷೆಯಲ್ಲಿ ೬೧ ಸಿಕ್ಕಿದ್ದು ಇರಬಹುದು; ಅಥವಾ ತದ್ವಿರುದ್ಧವೂ ಆಗಬಹುದಷ್ಟೆ!

ಪ್ರಶ್ನಾಪತ್ರಗಳನ್ನು ಕೊಟ್ಟ ಬಳಿಕ, ಮಾರ್ಕು ಕೊಡುವ ಕ್ರಮವನ್ನು ಕೂಲಂಕಷವಾಗಿ ವಿವರಿಸಿ, ಎಷ್ಟು ಏನು ಹೇಗೆ ಬರೆದರೆ ಎಷ್ಟು ಮಾರ್ಕು ಎಂದು ಸರಿಯಾಗಿ ಸೂಚಿಸಿದಲ್ಲಿ, ಈ ಪರೀಕ್ಷಾಗುಣಗಳ ಭೇದವು ಕಡಮೆಯಾಗುವ ಸಂಭವವಿದೆ. ಮುಖ್ಯವಾಗಿ ಪ್ರಬಂಧರೂಪವಾಗಿ ಉತ್ತರ ಬರೆಯಲು ಹೇಳಿದಲ್ಲಿ, ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಮಾರ್ಕು ಕೊಡುತ್ತ, ಕೊನೆಗೆ ಕೈಗೆ ಬಂದಂತೆ ಮಾರ್ಕುಗಳನ್ನು ಕೊಡುವಂತಾಗುವುದಾಗಿ ಎಲ್ಲೆಲ್ಲಿಯೂ ಸಿದ್ಧಾಂತವೇ ಆಗಿದೆ.

ಇದನ್ನು ನೋಡುವಾಗ, ಇನ್ನು 'ಪರೀಕ್ಷೆ ಎಂದರೆ ಏನು ಮಾಡಬೇಕು?' ಎನ್ನಿಸುವುದಿಲ್ಲವೆ? 'ಅತಿ ಕೂಲಂಕಷವಾಗಿ ಸೂಚನೆ ಕೊಟ್ಟಲ್ಲಿ ಸಹ ಮಾರ್ಕುಗಳ ಅಂತರವು ಭಯಂಕರವಾದುದುಂಟು' ಎಂದು ಈ ವರದಿ ಟೀಕಿಸಿಯದೆ. ಬಿ. ಎ. ಪರೀಕ್ಷೆಯ ಇಂಗ್ಲಿಷ್ ಪೇಪರಿನ ಒಂದು ಉತ್ತರವನ್ನು ಹತ್ತೆಂಟು ಪರೀಕ್ಷಕರು, ೧೨ರಿಂದ ೪೮ ತನಕ ಮಾರ್ಕು ಕೊಟ್ಟರು; ಮುಖ್ಯ ಪರೀಕ್ಷಕರು ೭ ಮಾರ್ಕು ಕೊಡಬಹುದೆಂದರು, ಒಬ್ಬ ಎಮ್. ಎ. ಪರೀಕ್ಷಕರು ಎದ್ದು ನಿಂತು,—'ಸರ್, ಅಲ್ಲಲ್ಲಿ ಹಾಕಬೇಕಾಗಿರುವ 'ಕೊಮ' ಬಿಟ್ಟುದಕ್ಕೆ ಎಷ್ಟು ಕಳಿಯಬೇಕು?' ಎಂದು ಮುಖ್ಯ ಪರೀಕ್ಷಕನಿಗೆ ಕೇಳಿದರು. ಉತ್ತರದಲ್ಲಿರುವ ಇತರ ವಿಚಾರಗಳಿಗಿಂತ ಕೊಮಗಳೇ ಈ ಮಹನೀಯರಿಗೆ ಮಹತ್ವದುವಾಗಿ ತೋರಿದುವು! ಬಿ. ಎ.ಗಳಿಗೂ ಒಂದು ಕೊಮಜ್ಞಾನವಿರಬೇಡವೆ ಮತ್ತೆ?

ಪರೀಕ್ಷೆಗಳನ್ನು ಕಿತ್ತುಬಿಡಲಾಗುವುದಿಲ್ಲ. ಆದರೆ ಪ್ರಬಂಧದ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಿ ಯಾವ ಪ್ರಯೋಜನವೂ ಇಲ್ಲ. ಹಾಗೆಂದು ಪ್ರಬಂಧಗಳನ್ನು ಬೇಡವೆನ್ನಲೂ ಆಗುವುದಿಲ್ಲ. ಆದುದರಿಂದ, ಪರೀಕ್ಷಾಕ್ರಮಗಳನ್ನು ಬದಲಾಯಿಸಬೇಕು; ನಿರ್ದಿಷ್ಟವಾದ ಉದಾಹರಣೆಯ ಉತ್ತರದ ಒಕ್ಕಣೆಗೆ ಎಷ್ಟು ಮಾರ್ಕು ಎಂಬುದನ್ನು ನಿಶ್ಚಿತವಾಗಿ, ಸಂಪೂರ್ಣವಾಗಿ ಕೂಲಂಕಷವಾಗಿಯೂ ಮಾರ್ಕು ಹಾಕುವ ವಿಧಾನಗಳನ್ನು ಮಾಡಿಕೊಡಬೇಕಾಗಿದೆ. ತೂಕದ ಕಲ್ಲು, ತಕ್ಕಡಿ ಇವೆರಡು ಸರಿಯಾಗಿರದೆ,—ತೂಗುವುದೇನನ್ನು?

ಎಡ್ಯುಕೇಶನ್ ಎಡ್ವೈಸರಿ ಬೋರ್ಡು.

ಈ ಬೋರ್ಡು ಹೊಸತಾಗಿ ಸ್ಥಾಪನೆ ಹೊಂದಿದೆ. ಇದರ ಮೊದಲನೆ ಸಭೆಯು ತಾ. ೧೯ರಲ್ಲಿ ಸೇರಿತು. ಸರ್ ಗಿರಿಜಾಶಂಕರ ವಾಜಪೇಯರು ಅಧ್ಯಕ್ಷರಾಗಿದ್ದರು. ಇವರು ಸದಸ್ಯರಿಗೆ ಬೋರ್ಡಿನ ಮಹದುದ್ದೇಶಗಳನ್ನು ಸಾರುವಾಗ,—ಪ್ರಕೃತ ಎಲ್ಲ ತೆರದ ನೂತನ ಶಿಕ್ಷಣವಿಚಾರಗಳು ಎಲ್ಲೆಲ್ಲಿಯೂ ಉಂಟಾಗಿವೆ; ಅವನ್ನು ಒಂದುಗೂಡಿಸಿ, ವಿಚಾರ ಮಾಡಿ ನೋಡಿ, ಅತ್ಯುಪಯುಕ್ತವಾದುವನ್ನು ಆರಿಸಿ, ನಮ್ಮಲ್ಲಿನ ಶಿಕ್ಷಣಪದ್ಧತಿಯು ಉತ್ತಮವಾಗುವ ಹಾಗೆ ಶಾಶ್ವತವಾದ ಮೂಲಭಿತ್ತಿಯನ್ನು, ಸುಧಾರಣಾರೀತಿಗಳನ್ನು ಸೂಚಿಸುವುದೇ ಈ ಬೋರ್ಡಿನ ಉದ್ದೇಶವಾಗಿದೆ ಎಂದರು.

ಸಭೆಯು ಗೋಪನದಲ್ಲೇ ನಡೆವುದು. ಆದರೆ, ಸಭೆಯಲ್ಲಾದ ತೀರ್ಮಾನಗಳನ್ನು ಸಂಕ್ಷೇಪವಾಗಿ ಪ್ರಕಟಿಸುವರು.

ಮುಖ್ಯವಾಗಿ ಶಿಕ್ಷಿತರು ಉದ್ಯೋಗರಹಿತರಾಗಿರುವ ಕಾರಣಗಳನ್ನು ವಿಚಾರಮಾಡಿ, ನಿರುದ್ಯೋಗೀ ಶಿಕ್ಷಿತರ ಸಮಸ್ಯೆ ಬಿಡಿಸುವುದು ಈ ಸಭೆಯ ಕರ್ತವ್ಯವಾಗಿದೆ.

ಶಿಕ್ಷಣಕ್ರಮಗಳ ಪುನರ್ಘಟನೆ ಎಂಬುದೇ ಈ ಎಡ್ವೈಸರಿ ಬೋರ್ಡಿನ ಉದ್ಯಮವಾಗಿದೆ. ಈ ವಿಚಾರಗಳು ಎಲ್ಲೆಲ್ಲಿಯೂ ಜನರಲ್ಲಿ ಕುತೂಹಲವನ್ನು ಉಂಟುಮಾಡಿವೆ. ಎಲ್ಲ ಮುಖಂಡರೂ ವಿಚಾರಿಗಳೂ ಈ ವಿಷಯಕವಾದ ಎಷ್ಟೋ ಅಭಿಪ್ರಾಯಗಳನ್ನು ಇಷ್ಟರಲ್ಲೇ ಹೊರಗೆಡವಿದ್ದಾರೆ.

ದೇಶವಾಸಿಗಳಲ್ಲಿ ಪ್ರತಿಯೊಬ್ಬನ ಜೀವನದಲ್ಲಿ ತೃಪ್ತಿಯುಂಟಾಗಬೇಕಾದರೆ, ಅದು ಮೂಲತಃ ಶಿಕ್ಷಣವನ್ನೇ ಅವಲಂಬಿಸಿದೆ. ಶಿಕ್ಷಣದ ಗೊಡವೆ ಬಿಟ್ಟರೆ, ದೇಶದಲ್ಲಿ ಸಂಪನ್ನತೆಯಿಲ್ಲ, ತೃಪ್ತಿಯಿಲ್ಲ. ಇಷ್ಟೇ ಅಲ್ಲ,—ಇವುಗಳ ಬದಲು, ದಾರಿದ್ರ್ಯವೂ ಅತೃಪ್ತಿಯೂ ಮಹಾಪ್ರಸಾದವಾಗಿ ಜನರಿಗೆ ದೊರೆವುವು.

ಇಂಥ ದುಷ್ಪರಿಣಾಮಗಳಿಂದ ಈ ಬೋರ್ಡು ನಮ್ಮ ಜನಾಂಗವನ್ನು ಕಾಪಾಡಲು ಯಾವ ಉಪಾಯಗಳನ್ನು ಮಾಡುವುದೋ ಎಂದು ಬೋರ್ಡಿನ ಕಾರ್ಯಕಲಾಪಗಳನ್ನು ನಾವು ಎದುರು ನೋಡುತ್ತೇವೆ.

ದಸರಾ ಮತ್ತೂ ದೀಪಾವಳಿ ಮಹೋತ್ಸವ

ಹತ್ತರ ಬಂತು. ಅಂತಹ ಶುಭಸಂತೋಷ ಸಮಯದಲ್ಲಿ ಹಿಂದಿನ ಕಾಲದಲ್ಲಿ, ಸುಜ್ಞರಾದ ಗೃಹಸ್ಥರೂ, ಮಹಿಳೆಯರೂ ತಮ್ಮ ತಲೆಗಳು ಶುಭ್ರವಾಗಿಯೂ ತಂಪಾಗಿಯೂ ಇರುವಂತೆ, ಮಧುರವಿದ್ದು ಮನೋಹರವಾಗಿ ಪರಿಮಳಿಸುತ್ತಿರುವ ಶುದ್ಧ ಸುಗಂಧ ತೈಲವನ್ನು ಲೇಪಿಸಿಕೊಳ್ಳುವ ಪದ್ಧತಿ ಇದ್ದಿತೆಂದು ಚರಿತ್ರೆಯು ನಮಗೆ ಸ್ಮರಣೆಗೆ ತಂದುಕೊಡುತ್ತಿದೆ. ಕಾರಣವಿಷ್ಟೆ;—ಆ ತೈಲದ ಮಧುರ ಮನೋಹರ ಸುವಾಸನೆಯು, ಅವರ ಸುತ್ತುಮುತ್ತಲಿನ ಪ್ರದೇಶವನ್ನೆಲ್ಲ,—ಅವರು ಹೋದಲ್ಲೆಲ್ಲ,—ಪರಿಶುದ್ಧವಾಗಿಯೂ, ಆನಂದಮಯವಾಗಿಯೂ ಮಾರ್ಪಡಿಸುತ್ತಿತ್ತು. ಇದರಿಂದ ಮನಸ್ಸಿನ ಮೇಲಿನ ನೇರವಾದ ಪರಿಣಾಮವೂ ಸುಸ್ಪಷ್ಟವೂ, ಉತ್ಸಾಹದಾಯಕವೂ, ಶಾಂತಿದಾಯಕವೂ ಆಗಿರುತ್ತಿತ್ತು. ಈ ರೀತಿ ಪರಿಶುದ್ಧವಾದ ಮನಸ್ಸು, ಅಂಥ ಮಂಗಲೋತ್ಸವದ ಶುಭಮುಹೂರ್ತಕ್ಕೆ ಹಿತಾವಹವೆಂದು ಆ ಗೃಹಸ್ಥ ಗೃಹಿಣಿಯರಿಗೆ ಚೆನ್ನಾಗಿ ಗೊತ್ತಿತ್ತು. ಹಿಂದಿನ ಕಾಲದ ಈ ಸುಜ್ಞರಾದ ಸ್ತ್ರೀಪುರುಷರ ಹಾದಿಯನ್ನು ಅನುಸರಿಸುವುದೇ, ನಿಮ್ಮ ಹಿತಾಭಿವೃದ್ಧಿಯ ಮಾರ್ಗವೂ ಆಹುದೆಂದು ನೀವು ತಿಳಿದುಕೊಳ್ಳುವುದಾದರೆ, ಯಾವುವುಗಳ ಉಪಯೋಗದಿಂದ ನಿಮಗೆ ತಲೆಶೂಲೆಯುಂಟಾಗಲು ಕಾರಣವಾಗಬಹುದೋ, ಅಂಥ ಅಗ್ಗವಾದ, ಗುಣದಲ್ಲಿ ಕನಿಷ್ಟವಾದ, ನಿಮ್ಮಿಂದ ಪರೀಕ್ಷಿಸಲ್ಪಡದ, ಆದರೆ ಮಾರ್ಕೆಟುಗಳಲ್ಲೆಲ್ಲ ತುಂಬಿ ಉಕ್ಕುತ್ತಿರುವ ಕೇಶ 'ತೈಲ'ಗಳನ್ನು ಕೊಳ್ಳುವಲ್ಲಿ, ನೀವು ಕಷ್ಟಪಟ್ಟು ಸಂಪಾದಿಸಿದ ಹಣವನ್ನೆಂದಿಗೂ ಹಾಳು ಮಾಡಬೇಡ, ಕಂಡಿರಾ?

ಚುನಾಯಿಸಿ ಮಾಡಿದ ಸುಪ್ರಸಿದ್ಧವಾದ

ಕಾಮಿನಿಯಾ ಎಣ್ಣೆ
ಯನ್ನೇ (ರಿಜಿಸ್ಟರ್ಡ್)
ಉಪಯೋಗಿಸಿರಿ.

'ಕಾಮಿನಿಯಾ ತೈಲ'ದ ಪರಿಚಯವಿಲ್ಲದ ಕುಗ್ರಾಮವಾಸಿಯಾದ ಹಳ್ಳಿಯವನಲ್ಲಿ ಕೂಡ ಅದು ದೊರಕುವುದು.

ಒಂದಾಣೆಯ ಪೋಸ್ಟಲ್ ಸ್ಟಾಂಪನ್ನು ಕಳುಹಿಸಿ, ಮಾದರಿಗಳನ್ನು ಉಚಿತವಾಗಿ ಪಡೆಯಿರಿ. ಬೆಲೆ ಬಾಟಲಿ 1ಕ್ಕೆ ರೂ. 1—0—0. ಬಾಟಲಿಗಳಿಗೆ ರೂ. 2—10—0. ವಿ. ಪಿ. ಚಾರ್ಜು ಬೇರೆ.

ಹೂವುಗಳ ಒಂದು ಇಡೀ ತೋಟವನ್ನೇ—

ಒಟೋ ದಿಲ್‌ಬಹಾರ್ (ರಿಜಿಸ್ಟರ್ಡ್)ನ
ಒಂದು ಬಾಟಲಿಯಲ್ಲಿ ಹಿಂಡಿದಂತೆ ಕಂಡುಬರುವುದು.

ಇದು ಹೂವುಗಳ ಶುದ್ಧವಾದ ಸಾರ; ಇದರ ಯಾವ ಬಾಟಲಿಯಲ್ಲಿಯಾದರೂ ಅಲ್ಕಹೋಲಿನ ಒಂದು ಬಿಂದುವಾದರೂ ಇಲ್ಲವೆಂದು ನಮ್ಮಿಂದ ನಿಮಗೆ ಗ್ಯಾರಂಟಿ ಇದೆ. ಒಮ್ಮೆ ಕೆಲವು ಬಿಂದುಗಳನ್ನು ಮಾತ್ರವೇ ಚುಮುಕಿಸಿರಿ—ಸಾಕು! ಬೆಲೆ ¼ ಔನ್ಸು ಬಾಟಲಿಗೆ ರೂ. 1—4—0. ಒಂದು ಡ್ರಾಮಿನ ಬಾಟಲಿಗೆ ಆಣೆ 12 ವಿ. ಪಿ. ಚಾರ್ಜು ಪ್ರತ್ಯೇಕ. 2 ಆಣೆ ಪೋಸ್ಟೇಜ್ ಸ್ಟಾಂಪು ಕಳುಹಿಸಿಕೊಟ್ಟಲ್ಲಿ ಇದರ ಮಾದರಿ ನಿಮಗೆ ಉಚಿತ.

ಈಗ ತಾನೇ ಸಿದ್ಧವಾದ ನವೀನ ಸುಗಂಧ ದ್ರವ್ಯ.

ಒಟ್ಟೋ ಮಸ್ಕ್ ಬಹಾರ್ (ರಿಜಿಸ್ಟರ್ಡ್)

ತಾಜಾ ಕಸ್ತೂರಿ ಸುಗಂಧದ್ರವ್ಯಗಳಲ್ಲಿ ಇದಕ್ಕೆ ಸರಿಯಾದದ್ದು ಇನ್ನೊಂದಿಲ್ಲ ಇದೇ ಅದ್ವಿತೀಯ. ಇದರ ಅತ್ಯಂತ ಸೂಕ್ಷ್ಮವಾದ, ಮೋಹಗೊಳಿಸುವ ಸುವಾಸನೆಯು ನಿಜವಾದ ಸ್ವರ್ಗಸುಖಾನುಭವವನ್ನು ನಿಮ್ಮಲ್ಲಿ ಉಂಟುಮಾಡುವುದು. ಬೆಲೆ ಬಾಟ್ಲಿ 1ಕ್ಕೆ ರೂ. 1—4—0; (¼ ಔನ್ಸಿನದು) 1 ಡ್ರಾಮಿನ ಒಂದು ಬಾಟಲಿಗೆ ಆಣೆ 0—12—0; ವಿ. ಪಿ. ಚಾರ್ಜು ಪ್ರತ್ಯೇಕ. ಉಚಿತವಾದ ಮಾದರಿಗೆ 2 ಆಣೆಯ ಪೋಸ್ಟೇಜು ಸ್ಟಾಂಪು ಕಳುಹಿಸಬೇಕು.

ಆರೋಗ್ಯಕ್ಕೂ ಬಣ್ಣಕ್ಕೂ,

ಆಧುನಿಕ ಶಕದಲ್ಲಿ, ಕಾಮಿನಿಯಾ ಟ್ವೈಲೆಟ್ ಸೋಪು ಅಲಂಕಾರ ಸಾಮುಗ್ರಿಗಳ ರಾಜರುಗಳಲ್ಲಿ ಅತ್ಯದ್ಭುತ ಸಾಧನವಾದ 'ಕಾಮಿನಿಯಾ ವ್ಹಾಟ್ ರೋಸ್ ಸೋಪು' (ರಿಜಿಸ್ಟರ್ಡ್) ಮಧುರವಾದ ಗುಲಾಬೀ ಹೂವುಗಳ ಅತ್ಯಂತ ಸೂಕ್ಷ್ಮವಾದ ಪುಷ್ಪಸೌರಭವನ್ನು ಬೀರುತ್ತದೆ.

ಕಾಮಿನಿಯಾ ಗಂಧದ ಸಾಬೂನು
(ರಿಜಿಸ್ಟರ್ಡ್).

ಇದೀಗ ಹಿಂದೀಯರಿಗೆ ಆದರ್ಶಪ್ರಾಯವಾದ ಸಾಬೂನು. ಉಷ್ಣ ಹವೆಯ ಎಲ್ಲ ಬಾಧಕಗಳಿಂದ, ಇದು ಅತ್ಯಂತ ಸೂಕ್ಷ್ಮವಾದ ಚರ್ಮವನ್ನು ರಕ್ಷಿಸುತ್ತದೆ. ಚರ್ಮವನ್ನು ನಯಗೊಳಿಸಿ, ಅದನ್ನು ಸಂಪೂರ್ಣವಾಗಿ ನಿರ್ಮಲಗೊಳಿಸುತ್ತದೆ; ಗಂಧದ ಸೂಕ್ಷ್ಮವಾದ ಮತ್ತೂ ಆಹ್ಲಾದಕರವಾದ ಪರಿಮಳವನ್ನು ಹೊರಸೂಸುತ್ತದೆ.



ದಿಲ್‌ಬಹಾರ್ ಸೋಪ್ (ರಿಜಿಸ್ಟರ್ಡ್)

ಚರ್ಮಕ್ಕಿದು ಅತ್ಯುತ್ಕೃಷ್ಟವಾದ ಸಾಬೂನು; ಇದರ ಚಿತ್ತಾಕರ್ಷಕವಾದ ಪರಿಮಳದ ವಿಚಾರದಲ್ಲಿ ಇದು ನಿಜವಾಗಿಯೂ ಅಪ್ರತಿಮ. ಬೆಲೆ ಮೇಲೆ ಕಾಣಿಸಿದ 3 ತರಹದ ಸಾಬೂನಿಗೂ 3 ತುಂಡುಗಳ ಒಂದು ಪೆಟ್ಟಿಗೆಗೆ 0—14—0 ಆಣೆ; ವಿ. ಪಿ. ಚಾರ್ಜು ಪ್ರತ್ಯೇಕ.

ದೊರಕುವ ಸ್ಥಳ:— ಮೆಸರ್ಸ್ ಷಾ ಎಂಡ್ ಕೊ.,
ಮಂಗಳೂರು, ಮತ್ತೂ ಇಂಡಿಯದ ಯಾವತ್ತು
ಮುಖ್ಯ ಸ್ಟೋರುಗಳಲ್ಲಿ.

ಸೋಲ್ ಏಜೆಂಟರು:—

ದಿ ಆಂಗ್ಲೋ—ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ಸ್
ಕಂಪೆನಿ, 285, ಜುಮ್ಮಾ ಮಸೀದಿ, ಬೊಂಬಯಿ 2.

ಕಂಠೀರವ

ಪ್ರತಿ ಮಂಗಳವಾರ ಪ್ರಕಟವಾಗುವ ಶ್ರೇಷ್ಠವರ್ಗದ

ಕನ್ನಡ ವಾರ ಪತ್ರಿಕೆ.

ಚೆಂದಾ ವಿವರ.

	ಸ್ಥಳದವರಿಗೆ	ಪರಸ್ಥಳದವರಿಗೆ
೧ ವರ್ಷಕ್ಕೆ	ರೂ. ೨—೮—೦	ರೂ. ೩—೫—೦
೬ ತಿಂಗಳುಗಳಿಗೆ	ರೂ. ೧—೪—೦	ರೂ. ೧—೧೧—೦

ಬಿಡಿ ಸಂಚಿಕೆ ಬೆಲೆ ೦—೧—೦.

ಮಾದರಿ ಸಂಚಿಕೆಗಳು ಅಪೇಕ್ಷಕರಿಗೆ ಧರ್ಮಾರ್ಥವಾಗಿ ಕಳುಹಲ್ಪಡುವವು.

ಕರ್ಣಾಟಕದ ಎಲ್ಲಾ ಭಾಗಗಳಲ್ಲಿಯೂ ಬಿಡಿ ಸಂಚಿಕೆಗಳು ವಿಕ್ರಯಕ್ಕೆ ಸಿಗುವವು.

ನಮ್ಮ ಏಜೆಂಟರಿಲ್ಲದ ಸ್ಥಳಗಳಲ್ಲಿ ಏಜೆಂಟರಾಗಲಪೇಕ್ಷಿಸುವವರು ಕೂಡಲೇ ಬರಕೊಳ್ಳಬಹುದು. ಧಾರಾಳವಾದ ಕಮಿಶನ್ ಕೊಡಲಾದೀತು.

Circulation Manager,
THE KANTEERAVA,
MANGALORE.

ಶ್ರೀ ದತ್ತಾತ್ರೇಯ ಕಾಫಿ ಪುಡಿ

ಶ್ರೇಷ್ಠತೆಗೂ, ಪರಿಶುದ್ಧತೆಗೂ ಮೈಸೂರು ಗೌರ್ನಮೆಂಟು ಕೆಮಿಕಲ್ ಎಕ್ಸಾಮಿನರಿಂದ ಪರೀಕ್ಷಿಸಲ್ಪಟ್ಟದೆ.

ಇದನ್ನು ಉತ್ತಮವಾದ ಗಿರಿ ಕಾಫಿಯಿಂದ ತಾಕದೆ ಎಲೆಕ್ಟ್ರಿಕ್ ಮಿಷನ್ನುಗಳಿಂದ ತಯಾರಿಸಲ್ಪಟ್ಟದೆ. ಬಳ್ಳಾರಿ, ಧಾರವಾಡದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿಯೂ, ಬೆಂಗಳೂರು ಪಾರ್ಕು ಫೇರಿನಲ್ಲಿಯೂ ಬಂಗಾರದ ಪದಕಗಳು ಬಹುಮಾನವಾಗಿ ಬಂದಿವೆ.

ಒಂದು ದಫ ತರಿಸಿನೋಡಿ.

ಶ್ರೀ ದತ್ತಾತ್ರೇಯ ಕಾಫಿ ವರ್ಕ್ಸ್,
ಮೈಸೂರು ರೋಡು, ಬೆಂಗಳೂರು ಸಿಟಿ.

BLOCKS

Used in this weekly are available at very reasonable rates. For further particular write to:—

The Kanteerava Office,
(Publication Dept.),
MANGALORE.

ಈ ಪತ್ರಿಕೆಯಲ್ಲಿ ಮುದ್ರಿಸಲ್ಪಡುವ ಪಡಿಯಚ್ಚುಗಳು ಯೋಗ್ಯ ಬೆಲೆಗೆ ಕೊಡಲ್ಪಡುವವು. ಬೇಕಾದವರು ಮಂಗಳೂರು, ಕಂಠೀರವ ಕಾರ್ಯಾಲಯದೊಡನೆ ಪತ್ರವ್ಯವಹಾರ ನಡೆಸಬಹುದು.

ಪದವಿಗಳು! ಔಷಧಗಳು! ಪುಸ್ತಕಗಳು!

ಎಚ್. ಎಲ್. ಎಂ. ಎಸ್. ಎಚ್. ಎಂ. ಬಿ., ಎಚ್. ಯಂ. ಡಿ., ವೈದ್ಯರಾಜ ಮೊದಲಾದ ಹೋಮಿಯೊ-ಆಯುರ್ವೇದ, ಯುನಾನಿಗಳಲ್ಲಿ ಟಪ್ಪಾಲಿನ ಮೂಲಕ ಬೋಧನೆ ಪಡೆಯಬಹುದು. ಡಿಗ್ರಿಗೆ ಪ್ರತಿಫಲ ಕೊಡಬೇಕಾಗಿಲ್ಲ. ಹೋಮಿಯೋ-ಮೆಟೀರಿಯ ಮೆಡಿಕ ಇದರ ಬೆಲೆ ರೂ. 5. ಹೋಮಿಯೋ ಪ್ರಾಕ್ಟಿಸ್ ಓಫ್ ಮೆಡಿಸಿನ್ ಬೆಲೆ ರೂ. 4. ೨ ಆಣೆಯ ಸ್ಟಾಂಪುಗಳನ್ನಿಡಿರಿ.

Homœopathic Institute,
MAHUVA (Kathiawar Dt.)

ESTD. 1925.

The Canara Industrial & Banking Syndicate, Ltd.

(INCORPORATED IN BRITISH INDIA.)

Authorised Capital	Rs. 5,00,000.	Subscribed Capital	Rs. 2,84,000.
Paid-up Capital	Rs. 2,14,000.	Reserve Fund	Rs. 45,000.

FIRST & FOREMOST

First & foremost among the ideals of the Syndicate are the ideals of SERVICE to Customers and the SECURITY OF DEPOSITORS' MONEY.

Our last five years' progress is a proof of our growing popularity.

YEAR	WORKING CAPITAL.
1930	2,42,095/-
1931	4,95,266/-
1932	9,25,958/-
1933	13,90,798/-
1934	15,93,238/-

It now exceeds **20** lakhs.

FIXED DEPOSITS.

3 to 5 months	4% p. a.
6 to 11 months	4½% p. a.
12 to 23 months	5% p. a.
24 months	5½% p. a.
60 months	6% p. a.

CURRENT DEPOSITS.

2% p. a. on daily balances.

SAVINGS BANK DEPOSITS.

3½% p. a. on the minimum balance standing between 5th and the last day of every month. Operation by Cheques.

Our Laxmi Cash Certificates, yielding Rs. 6—10—8% p. a. a speciality.

All kinds of Banking business transacted.

Further particulars can be had from the Branch Agent or Head Office, UDIPI.

BRANCHES.

1. Mangalore.
2. Ankola.
3. Honavar.
4. Bellary.
5. Bangalore.
6. Brahmavar.
7. Coondapoor.
8. Karwar.
9. Hubli.
10. Payyanur.
11. Hungarcutta.
12. Cannanore.
13. Belgaum.
14. Kanhangad (Hosdurg.)
15. Sirsi.
16. Udipi.
17. Kumta & 18. Adoni.

P. A. PAI BROS., *Managing Agents.*

ಬೆನ್ನು ನೋವು!

ಕ್ಷೀರಬಲಾ
KSHEERABALA

ಸೊಂಟದಲ್ಲಿ ನೋವು!

ವಾತದ ಪ್ರಥಮ ಲಕ್ಷಣಗಳಲ್ಲಿ ಇವೂ ಒಂದು. ಬೆನ್ನಿನಲ್ಲಿ, ಸೊಂಟದಲ್ಲಿ ಸಳೆಯುವ, ಕೊರೆಯುವ, ಚುಚ್ಚುವ ನೋವು ಎಷ್ಟೇ ಇದ್ದರೂ, ಪ್ರತಿನಿತ್ಯವೂ ಬೆಳಗ್ಗೆ, ಬರೇ ಹೊಟ್ಟೆಗೆ, ಋಷಿಗಳ 'ಕ್ಷೀರಬಲ'ದ ಕೆಲವು ಬಿಂದುಗಳನ್ನು ಸೇರಿಸಿದ ಒಂದು ಟಂಬ್ಲರು ಬಿಸಿನೀರು ಕುಡಿಯುವುದರಿಂದಲೇ ವಾಸಿಯಾಗುವುದು. ಈ ಪ್ರಕಾರ ಮಾಡುವುದರಿಂದ, ನರಗಳು ಸರಿಯಾದ ಸ್ಥಿತಿಯಲ್ಲಿರುವುವು; ಶರೀರಗತವಾದ ಅಶುದ್ಧತೆಯನ್ನು ಹೊರತಳ್ಳುವುದು; ನೋವಿರುವಲ್ಲಿ ರಕ್ತಸಂಚಾರವು ಕ್ರಮವಾಗಿ ಆಗುವಂತೆ ಮಾಡುವುದು; ಗೋಳಾಡಿಸುವ ಸ್ಥಿತಿಯನ್ನು ತಪ್ಪಿಸುವುದು.

ಸೊಂಟದಲ್ಲಿ, ಬೆನ್ನಿನಲ್ಲಿ, ಕೈಕಾಲುಗಳಲ್ಲಿ, ಅಥವಾ ಗಂಟುಗಳಲ್ಲಿ ವಿಪರೀತವಾದ ನೋವು ಇದ್ದು ನರಳುತ್ತಿರುವ ಸಂದರ್ಭದಲ್ಲಿ—ಬಿಸಿ ನೀರಿನ ಬದಲಿಗೆ—ಸಾಮಾನ್ಯ ಜೀರಿಗೆ ಕಷಾಯವನ್ನು ಉಪಯೋಗಿಸಿದರೆ, ನಮ್ಮ ಋಷಿಗಳ 'ಕ್ಷೀರಬಲ'ವು ಎಂತಹ ಆಶ್ಚರ್ಯಕರವಾದ ಪರಿಣಾಮವನ್ನು ಉಂಟುಮಾಡುವುದೆಂದು ನೀವೇ ನೋಡುವಿರಿ! ಈ ಋಷಿಗಳ 'ಕ್ಷೀರಬಲ'ಕ್ಕೆ ಅಪೂರ್ವವಾದ ಗಿಡಮೂಲಿಕೆಗಳೂ, ಬೇರುನಾರುಗಳೂ, ಧಾರಾಳವಾದ ಆಕಳ ಹಾಲೂ ಬೇಕು; ಮಾತ್ರವಲ್ಲ; ಬಹಳ ತಾಳ್ಮೆಯಿಂದ, ಬಹಳ ಜಾಗರೂಕತೆಯಿಂದ ಅದನ್ನು ಸಿದ್ಧಮಾಡಬೇಕು. ಅದನ್ನು ಪೂರ್ಣವಾಗಿ ತಯಾರಿಸಲು ಸುಮಾರು ನೂರವೊಂದು ದಿನಗಳು ಹಿಡಿಯುತ್ತದಾದರೆ,—ಅದು ಉಪಯೋಗಕ್ಕೆ ಬರುವಂತೆ ಸರಿಯಾಗಿ ಪಾಕವಾಗಲು ಅದಕ್ಕಿಂತಲೂ ಎಷ್ಟೋ ಹೆಚ್ಚಿನ ಸಮಯವೇ ಬೇಕು. ಋಷಿಗಳ 'ಕ್ಷೀರಬಲ'ವು ದುರ್ಬಲವಾದ, ಹದಗೆಟ್ಟ ನರಗಳ ಮೇಲೆ ಅತ್ಯಂತ ತೀವ್ರ ಪರಿಣಾಮಕಾರಿಯಾಗಿರುವುದಲ್ಲದೆ, ಅವುಗಳನ್ನು ಎಷ್ಟು ಚುರುಕಾಗಿಯೂ, ಆರೋಗ್ಯಕಾರಿಯಾಗಿಯೂ ಮಾಡುವುದೆಂದರೆ,—ಅದು ಗೋಳಾಡಿಸುವ ಎಲ್ಲ ಬಗೆಯ ನೋವುಗಳನ್ನೂ 'ಗಡಿಪಾರು' ಮಾಡಿಬಿಡುತ್ತದೆ. ಅದು ತುಪ್ಪದಷ್ಟೇ ದಪ್ಪ. ಒಂದು ಔನ್ಸಿನ ಬಾಟಲಿಯೊಂದರ ಬೆಲೆ ರೂ. 4—0—0. (ಪೋಸ್ಟೇಜ್ ಬೇರೆ.)

ನರಗಳು ಎಳೆಯುವುದು, ಬಿಗಿಹಿಡಿಯುವುದು, ಹೆಚ್ಚುಕಡಿಮೆಯಾಗಿರುವುದು ಇವಕ್ಕೂ,—ಗಂಟುಗಳು, ಮೊಣಕಾಲು ಗಂಟುಗಳು, ಕೈಗಳು ಬಾಯುವುದಕ್ಕೂ, ಕಷ್ಟದಿಂದ ಉಸಿರಾಡುವುದಕ್ಕೂ, ಕಸಕ್ಕೂ, ಬರೆಯುವಾಗ ಕೈ ನಡುಗುವುದಕ್ಕೂ ದೇಹದ ಯಾವ ಭಾಗದಲ್ಲಿಯಾದರೂ ಸೂಜಿಯಿಂದ ಚುಚ್ಚುವಂತೆ ಅಥವಾ ಕಠಾರಿಯಿಂದ ಇರಿದಂತೆ ನೋವಾಗುವುದಕ್ಕೂ, ಪಾದಗಳು ಉರಿಯುವುದಕ್ಕೂ ಟೊಂಕದಿಂದ ತೊಡೆಯ ವರೆಗಿನ ನರಗಳಲ್ಲಿ ವೇದನೆಯಾಗುವುದಕ್ಕೂ, ಎಲ್ಲ ಬಗೆಯ ರಕ್ತವಾತ, ಪಕ್ಷವಾತಗಳಿಗೂ ಋಷಿಗಳ ಈ 'ಕ್ಷೀರಬಲ'ವು ಅತ್ಯುತ್ಕೃಷ್ಟವಾದ ರಾಮಬಾಣದಂತಹ ದಿವ್ಯೌಷಧವಾಗಿದೆ.

ದಿ ಮಲೆಯಾಳ ಔಷಧ ಕಂಪೆನಿ,

ಚಾಲಪುರಂ ಪೋಸ್ಟ್, ಮಲಬಾರ್.

ನಮ್ಮಲ್ಲಿ ಗ್ಯಾರಂಟಿಯುಳ್ಳ ಇನ್ನೂ ಅನೇಕ ಸಿದ್ಧೌಷಧಗಳಿವೆ. ಸಂತಾನೋತ್ಪತ್ತಿಯನ್ನು ಮಿತಪಡಿಸಲಿಕ್ಕೆ; ನವಚೈತನ್ಯವನ್ನು ತುಂಬಿಸಲಿಕ್ಕೆ; ಚಪ್ಪಟೆಯಾದ, ಸಡಿಲವಾದ, ಜೋತುಬಿದ್ದ ಹೆಂಗಸರೆದೆಯನ್ನು ದುಂಡಗಾಗಿ ಮಾಡುವುದಕ್ಕೆ.

ಸೂಜೀಕಾರ್ ಬ್ರದರ್ಸರಲ್ಲಿಗೇ ಹೋಗುವುದೇತಕ್ಕೆ?

ಯಾತಕ್ಕೆಂದರೆ—ಈಗಿನ ಫ್ಯಾಶನಿಗೆ ತಕ್ಕುದಾದ ನೂತನವಾದ, ನಯ ನಾಜೂಕಾದ, ಬಗೆಬಗೆಯ ಅಂದವಾದ ಬಣ್ಣಗಳ, ಮಾದರಿಗಳ, ಹೊಸ ಹೊಸ ಬಟ್ಟೆಬರೆಗಳನ್ನು ಅಲ್ಲಿ ಚುನಾಯಿಸಿ ಇರಿಸಲಾಗಿದೆ. ಬಾಳಿಕೆಯಲ್ಲಿ ಬಣ್ಣದಲ್ಲಿ ಹಿರಿದು; ಬೆಲೆಯಲ್ಲಿ ಕಿರಿದು; ನಿತ್ಯ ಉಪಯೋಗಕ್ಕೆ, ಶುಭ ಶೋಭನಗಳಿಗೆ, ಕರವಸ್ತ್ರದಿಂದ ಮೊದಲ್ಗೊಂಡು ಜರಿಯ ಪೀತಾಂಬರದ ವರೆಗೆ, ಎಲ್ಲವೂ ದೊರಕುವುದಿಲ್ಲಿಯೇ—ಬಡವರಿಗೆ, ಶ್ರೀಮಂತರಿಗೆ, ಗಂಡಸರಿಗೆ, ಹೆಂಗಸರಿಗೆ, ಎಲ್ಲರಿಗೂ! ಸೊಗಸಾದ ಶೀರೆಗಳು ನಮ್ಮಲ್ಲೊಂದು "ಸ್ಪೆಶಾಲಿಟಿ!" ನಂಬಿಕೆಯ ಸರಕು; ಪ್ರಮಾಣಿಕತೆಯ ವ್ಯವಹಾರ; ಹಲವು ವರ್ಷಗಳ ಅನುಭವಸಿದ್ಧವಾದ ವ್ಯಾಪಾರ. ಸಂದರ್ಶಿಸದವರೊಮ್ಮೆ ದಯವಿಟ್ಟು ಪರೀಕ್ಷಿಸಿರಿ!

ಮೆಸರ್ಸ್ ಸೂಜೀಕಾರ್ ಬ್ರದರ್ಸ್,

ಮಾರ್ಕೆಟ್ ರೋಡ್, ಮಂಗಳೂರು, ದ. ಕ.

ಹೆಂಗಸರಿಗಾಗಿ

ಜಪಾನಿನಲ್ಲಿ ಮಾತೃತ್ವದ ಶಿಕ್ಷಣ.

(ಮಿಸೆಸ್ ಬಿ. ಟಿ. ಜಿ. ಕೃಷ್ಣ.)

ಜಪಾನಿಗಳ ವ್ಯವಹಾರಿಕ ಜೀವನವು ಬಹಳ ಆಶ್ಚರ್ಯಯುಕ್ತವಾಗಿದೆ. ಯೋಚಿಸಿದ ವಿಷಯವನ್ನು ಕಾರ್ಯರೂಪದಲ್ಲಿ ತಂದು ಕೃತಕೃತ್ಯರಾಗದೆ ಅವರು ನಿಶ್ಚಿಂತರಾಗುವುದಿಲ್ಲ. ದೇಶ ಮತ್ತು ಸಮಾಜದ ಹಿತಕ್ಕಾಗಿ ಯಾವ ಕಾರ್ಯವನ್ನವರು ಅವಶ್ಯವೆಂದೆಣಿಸುವರೋ ಅದನ್ನು ಮಾಡದೆ ಇರುವುದೇ ಇಲ್ಲ. ಮಕ್ಕಳ ಭವಿಷ್ಯವು ಮಾತೆಯರ ಕೈಯಲ್ಲಿದೆ. ಆದುದರಿಂದ ತಾಯಿಯರಿಗೆ ಮಾತೃತ್ವದ ಶಿಕ್ಷಣವು ಅತ್ಯಗತ್ಯ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ ಜಪಾನಿನ ವಿನಹ ಬೇರಾವ ದೇಶಗಳಲ್ಲೂ ಮಾತೃತ್ವದ ಶಿಕ್ಷಣವನ್ನು ಕೊಡುವ ವಿದ್ಯಾಲಯಗಳಿಲ್ಲ. ಜಪಾನಿನಲ್ಲಿ ಇದಕ್ಕೋಸ್ಕರವಾಗಿಯೇ ಅನೇಕ ಸ್ಕೂಲುಗಳಿವೆ. ಟೋಕಿಯೊದ ಮಾತೃತ್ವ ಶಿಕ್ಷಣದ ವಿದ್ಯಾಲಯವಂತೂ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಈ ಶಾಲೆಯಲ್ಲಿ ಲಾರ್ಡ್, ಜನರಲ್, ಜಮೀನ್ದಾರರ ಮಗಳಂದಿರೊಡನೆ ಬಡವರ ಹುಡುಗಿಯರಿಗೂ ಶಿಕ್ಷಣವು ಕೊಡಲ್ಪಡುತ್ತದೆ. ಈ ವಿಷಯದಲ್ಲಿ ಉಚ್ಚನೀಚರೆಂಬ ಭೇದಭಾವವಿಲ್ಲದೆ ಎಲ್ಲರಿಗೂ ಸಮಾನ ಶಿಕ್ಷಣವು ದೊರೆಯುತ್ತದೆ.

ಈ ಸ್ಕೂಲುಗಳಲ್ಲಿ ವಿವಾಹಯೋಗ್ಯರಾದ ಹುಡುಗಿಯರನ್ನೇ ಸೇರಿಸಿಕೊಳ್ಳುತ್ತಾರೆ. ಜಪಾನೀ ರಮಣಿಯಲ್ಲಿ ಆರ್ಯಸಂಸ್ಕೃತಿಯ ನಿಕಟ ಸಂಬಂಧವು ತೋರ್ಪಡುತ್ತದೆ. ಅವರಲ್ಲೂ ಆರ್ಯಲಲನೆಯಲ್ಲಿ ಕಾಣಬಹುದಾದ ಅನೇಕ ಗುಣಗಳನ್ನು ನಾವು ಕಾಣಬಹುದು.

ಹುಡುಗಿಯರಿಗೆ ಈ ವಿದ್ಯಾಲಯಗಳಲ್ಲಿ ಬೇರೆ ವಿಷಯಗಳ ಜೊತೆಯಲ್ಲಿಯೇ, ನಡೆಯುವಾಗ ಗತಿ ಹೇಗಿರಬೇಕು, ಹೂವಿನ ಗೊಂಚಲುಗಳನ್ನು ಹೇಗೆ ಜೋಡಿಸಬೇಕು, ಟೀಯ ಪ್ರಬಂಧವನ್ನು ಹೇಗೆ ಮಾಡಬೇಕು ಎಂದು ಮುಂತಾದ ವಿಷಯಗಳನ್ನು ಕಲಿಸುತ್ತಾರೆ. ಸಾಮಾಜಿಕ ನಿಯಮಗಳನ್ನು, ಬೇರೆಯವರೊಡನೆ ಹೇಗೆ ವರ್ತಿಸಬೇಕೆಂಬುದನ್ನೂ ಹುಡುಗಿಯರು ಅಲ್ಲಿ ಕಲಿಯುತ್ತಾರೆ. ಈ ಎಲ್ಲ ಶಿಕ್ಷಣಗಳೊಡನೆ ಅವರಿಗೆ ಗಾನ ಮತ್ತು ವಾದ್ಯವಿದ್ಯೆಗಳೂ ಕಲಿಸಲ್ಪಡುತ್ತವೆ.

ಇದಲ್ಲದೆ ಹುಡುಗಿಯರು ಹೊಲಿಯುವುದು, ಬಡಿಸುವುದರೊಡನೆ ಪಾಕಶಾಸ್ತ್ರವನ್ನೂ ಕಲಿಯಬೇಕಾಗುತ್ತದೆ. ಅವರು ಮಧ್ಯಾಹ್ನದಲ್ಲಿ ಶಾಲೆಗಳಲ್ಲಿಯೇ ಊಟಮಾಡುತ್ತಾರೆ. ಅದಕ್ಕೆ ಅಡಿಗೆಯನ್ನೂ ಅವರೇ ಮಾಡಬೇಕು. ಜಪಾನೀ ಮಹಿಳೆಯರು ಕೆಲಸಕ್ಕೆ ಹಿಂತೆಗೆಯುವವರಲ್ಲ. ಆದರೂ ಪ್ರತ್ಯೇಕ ಹುಡುಗಿಗೂ ವ್ಯವಹಾರಿಕ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ಬಹಳ ನಾಜೂಕಾಗಿ ಎಲ್ಲಾ ತರದ ಅಡಿಗೆಗಳನ್ನು ಮಾಡುವ ವಿಧಾನವನ್ನು ಹೇಳಿಕೊಡುತ್ತಾರೆ. ಹುಡುಗಿಯರೇ ತಮ್ಮ ಪಾತ್ರೆಗಳನ್ನೂ ತೊಳೆದುಕೊಳ್ಳಬೇಕು.

ಇವುಗಳೆಲ್ಲವುಗಳಿಗಿಂತಲೂ ಹೆಚ್ಚಿನ ಮಹತ್ವಪೂರ್ಣ ಶಿಕ್ಷಣವು ಮಕ್ಕಳ ಪಾಲನೆ ಪೋಷಣೆಯ ಸಂಬಂಧವಾಗಿರುತ್ತದೆ. ಮನೆಯನ್ನು ಚೊಕ್ಕಟವಾಗಿ ಹೇಗಿಡುವುದು, ಮಕ್ಕಳ ರಕ್ಷಣೆಯನ್ನು ಮಾಡುವುದು ಹೇಗೆ, ಅವುಗಳ ಪಾಲನೆ, ಔಷಧಿ ಉಪಚಾರ, ಅವುಗಳ ಸ್ವಾಸ್ಥ್ಯ ಮತ್ತು ಸೌಂದರ್ಯರಕ್ಷಣೆ ಆದಿ ವಿಷಯಗಳನ್ನು ಬಹಳ ಸೂಕ್ಷ್ಮವಾಗಿ ತಿಳಿಸುತ್ತಾರೆ. ಈ ಶಿಕ್ಷಣದ ಪರಿಣಾಮಸ್ವರೂಪವಾಗಿ ಜಪಾನಿನಲ್ಲಿ ಬಾಲಮೃತ್ಯುಗಳು ಬಹಳ ಕಡಿಮೆಯಾಗಿವೆ.

ಟೋಕಿಯೊದ ವಿಖ್ಯಾತ ಸ್ಕೂಲಿನಲ್ಲಿ ೧೬ ಕೋಣೆಗಳಿವೆ. ಪಾಠಶಾಲೆ, ಭೋಜನ ಮತ್ತು ಶಯನಗೃಹಗಳೂ ಇದರಲ್ಲೇ ಇವೆ.

ಒಂದು ಸುಂದರವಾದ ಉದ್ಯಾವನದ ಮಧ್ಯೆ ಈ ಸ್ಕೂಲಿದೆ. ಕೆಲವು ಹುಡುಗಿಯರು ತಮ್ಮ ಅಧ್ಯಯನ ಮುಗಿಯುವ ತನಕ ಶಾಲೆಯಲ್ಲೇ ವಾಸಮಾಡುತ್ತಾರೆ. ಮೊದಲನೆಯ ಕೋರ್ಸು ಆರು ತಿಂಗಳಲ್ಲಿ ಸಮಾಪ್ತವಾಗುತ್ತದೆ. ಆದರೆ ಇಚ್ಛಿಸುವವರಿಗೆ ಇನ್ನೂ ಆರು ತಿಂಗಳ ಶಿಕ್ಷಣವು ದೊರೆಯುತ್ತದೆ. ಅಧಿಕಾಂಶ ಹುಡುಗಿಯರು ಉಚ್ಚಶಿಕ್ಷಣವನ್ನು ಹೊಂದುವ ಪ್ರಯತ್ನ ಮಾಡುತ್ತಾರೆ.

ಭಾರತದಲ್ಲಿ ಬಾಲಮೃತ್ಯುಗಳ ಸಂಖ್ಯೆ ಕಡಿಮೆಯಾಗಬೇಕಾದರೆ ಈ ತರದ ಶಿಕ್ಷಣದ ಅತ್ಯಾವಶ್ಯಕತೆ ಇದೆ.

ಬಾಲಕಿಯರಿಗೆ ಅತ್ಯಾವಶ್ಯಕವಾದ ಕೆಲವು ಬುದ್ಧಿಮಾತುಗಳು.

• ಜಪಾನ್ ದೇಶದಲ್ಲಿ ಹೆಣ್ಣು ಮಕ್ಕಳಿಗೆ ಮದುವೆಯಾಗುವ ಸಮಯದಲ್ಲಿ ತಾಯಿಯು ಮಗಳಿಗೆ ಈ ಕೆಳಗೆ ಸೂಚಿಸಿರುವ ಹತ್ತು ಬುದ್ಧಿಮಾತುಗಳನ್ನು ಹೇಳುವುದು ಪೂರ್ವಕಾಲದಿಂದಲೂ ಬಂದ ಪದ್ಧತಿಯಂತೆ:—

೧. ವಿವಾಹವಾದ ಗಳಿಗೆಯಿಂದ ನೀನು ನನ್ನ ಮಗಳಲ್ಲ. ನಿನ್ನ ಅತ್ತೆಯೇ ನಿನ್ನ ತಾಯಿ, ನಿನ್ನ ಮಾವನವರೇ ನಿನ್ನ ತಂದೆ. ಇಷ್ಟು ದಿನಗಳ ವರೆಗೂ ನೀನು ನನಗೂ ನಿನ್ನ ತಂದೆಗೂ ವಿಧೇಯಳಾಗಿ ನಡೆದಂತೆಯೇ ಇನ್ನುಮೇಲೆ ನೀನವರಿಗೆ ವಿಧೇಯಳಾಗಿ ನಡೆಯಬೇಕು. ನಿನ್ನ ಅತ್ತೆಯನ್ನು ತಾಯಿಯಂತೆ ಭಾವಿಸಿ ಅವಳಲ್ಲಿ ವಿಶ್ವಾಸದಿಂದ ನಡೆಯಬೇಕೆಂಬುದನ್ನು ಮರೆಯಬೇಡ.

೨. ಸ್ತ್ರೀಯ ಬೆಲೆಯುಳ್ಳ ಆಭರಣವು ಪತಿಯ ಆಜ್ಞಾನುಸಾರ ನಡೆಯುವುದೇ. ಅವನು ನಿನ್ನ ಯಜಮಾನ. ಅವನಲ್ಲಿ ಮರ್ಯಾದೆಯಿಂದಲೂ ಭಕ್ತಿಯಿಂದಲೂ ನಡೆದುಕೊಳ್ಳುವುದನ್ನು ಮರೆಯಬೇಡ.

೩. ಯಾವಾಗಲೂ ಹೆಮ್ಮೆಪಡಬೇಡ. ನೀನು ಹೆಮ್ಮೆಪಡುತ್ತಿದ್ದರೆ ನಿನ್ನಲ್ಲಿ ನಿನ್ನ ಪತಿಗೆ ಬೇಸರವುಂಟಾಗುವುದು.

ವಿಲಾಯಿತಿಯ ಪ್ರವಾಸವನ್ನು ಮುಗಿಸಿ ಹಿಂತೆರಳಿರುವ ಬರೋಡೆಯ ಮಹಾರಾಣಿಯವರು.

೪. ಪತಿಯ ಮುಂದೆ ಕಠಿಣ ವಾಕ್ಯಗಳನ್ನಾಡಬೇಡ. ಯಾರ ಮಾತಿಗೂ ಎದುರಾಡದಿರುವುದೇ ಸ್ತ್ರೀಯ ಲಕ್ಷಣ. ತಾಳ್ಮೆಯೆಂಬ ಆಭರಣವನ್ನು ಯಾವಾಗಲೂ ಧರಿಸು. 'ತಾಳ್ಮೆಯುಳ್ಳವರು ಧರಣಿಯಾಳುವರು' ಎಂಬ ನಾಣ್ಣುಡಿಯನ್ನು ಮರೆಯಬೇಡ. ಅಂತಹ ಸಂದರ್ಭ ಒದಗಿದಾಗ ತಾಳ್ಮೆಯಿಂದಲೂ ವಿಶ್ವಾಸದಿಂದಲೂ ಮಾತನಾಡು.

೫. 'ಹರಟೆ ಮಲ್ಲಿ' ಎಂದು ಹೆಸರು ಪಡೆಯಬೇಡ. ಹೆಚ್ಚು ಮಾತನಾಡುವವಳು ಒಂದು ಚಿಕ್ಕ ಕಾಸಿಗೂ ಬೆಲೆಯಾಗಳು. ಮಾತು ಹೆಚ್ಚಾದರೆ ಸುಳ್ಳು ತಟವಟಗಳು ಹೆಚ್ಚುವುವು. ಮಾತನಾಡದಿದ್ದರೆ ತಂಟೆಯೇ ಇಲ್ಲ.

೬. ಕಥೆ ಕೇಳುವ ಪದ್ಧತಿಯನ್ನು ಖಂಡಿತವಾಗಿಯೂ ಬಿಟ್ಟುಬಿಡು. ಕಥೆ, ಶಕುನ ನೋಡುವ ಹೆಂಗಸು ತನಗೆ ತಾನೇ ಶತ್ರು.

೭. ಮನೆಯ ಕೆಲಸಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸು. ಆದಾಯಕ್ಕೆ ತಕ್ಕ ವೆಚ್ಚಮಾಡು.

೮. ನೀನು ಶ್ರೀಮಂತ ಮಹಿಳೆಯಾದರೆ ಗರ್ವಪಡಬೇಡ. ನಿನ್ನ ಶ್ರೀಮಂತಿಕೆಯನ್ನು ಅವರಿವರಲ್ಲಿ ಹೇಳಬೇಡ. ಆತ್ಮಸ್ತುತಿ ಮಾಡಿಕೊಳ್ಳಬೇಡ. ನಿನ್ನ ಗಂಡನ ಮನೆಯವರನ್ನು ನಿನ್ನ ಗಂಡನೊಡನೆ ದೂರಬೇಡ.

೯. ಯುವಕರ ಸ್ನೇಹವನ್ನೆಂದೂ ಮಾಡಬೇಡ.

೧೦. ರಂಗುರಂಗಿನ ವಸ್ತ್ರವನ್ನುಡಬೇಡ. ಶುಭ್ರವಾದ ಸುಲಭವಾದ ವಸ್ತ್ರಗಳನ್ನೇ ಧರಿಸು.

'ಸರಸ್ವತಿ.'

Equitable Policy
STANDS FOR:
Easy Revival Schemes:
Quickness in Claim Settlement:
Uninterrupted Declaration of Bonus:
Indian Office—cent per cent:
Testimony of Satisfaction from 1000s:
A-1. Investments:
Benefits of Permanent Disability:
Liberal Policy Conditions:
Equity to Policyholders.
INDIA EQUITABLE INSURANCE
COMPANY, LIMITED,
CALCUTTA.
(ESTD: 1908).
For Agency Terms Apply to:—
The Controller, West Coast Agencies,
TELLICHERRY.



ಸ್ವಸ್ತಿಕಾ ಸಾಬೂನುಗಳು ಬೆಲೆಯಲ್ಲಿ ಅಗ್ಗವಾದರೂ ಕೊಳೆ ಕಶ್ಮಲಗಳನ್ನು ತೀವ್ರವಾಗಿ ನಾಶಪಡಿಸುವುದರಲ್ಲಿ ಅತ್ಯುಜ್ವಲವಾಗಿವೆ.

ಸಿಲ್ಕು ಮತ್ತಿನ್ನಿತರ ಬಹು ಬೆಲೆಬಾಳುವ ವಸ್ತ್ರಗಳನ್ನು ಒಗೆಯಲು ಉಚ್ಚ ತರಗತಿಯ ಸ್ವಸ್ತಿಕಾ ಸಾಬೂನುಗಳನ್ನೇ ಉಪಯೋಗಿಸಿರಿ.

ಸ್ವಸ್ತಿಕಾ
ಮತ್ತು
ಲಾಯನ್ ಬ್ರೇಂಡ್
ವಾಶಿಂಗ್
ಸಾಬೂನುಗಳು.

ಯಕೃತ್ತಿನ ರೋಗಗಳಿಗೆ ಔಷಧಗಳು ಅನೇಕ ಇವೆ; ಆದರೆ ಅವೆಲ್ಲ ರೋಗಗಳನ್ನು ಗುಣಪಡಿಸಬಲ್ಲ ಔಷಧವು ಒಂದೇ

ಈ ಔಷಧವನ್ನು 'ಸಂಜೀವಿನಿ'ಗೆ ಸಮಾನವೆಂತಲೂ, ಈ ಔಷಧವನ್ನು ಕಂಡುಹಿಡಿದವರನ್ನು ಪ್ರತ್ಯಕ್ಷ 'ಮೃತ್ಯುಂಜಯ'ನೆಂತಲೂ ಜನರು ಕರೆಯುತ್ತಾರೆ.

ಈ ಔಷಧವು 'ಸ್ವರ್ಗೀಯ'ವೆಂತಲೂ, ಅದು ತನ್ನ ಒಳ್ಳೇಯ ಹೆಸರನ್ನು ನ್ಯಾಯವಾಗಿ ಸಂಪಾದಿಸಿದೆ ಎಂತಲೂ ಜನರು ಆಡುತ್ತಾರೆ. ಗುಣಪಡಿಸುವಲ್ಲಿ ಅದು ಯಶಸ್ವಿಯಾಗಿದೆ. ಅದರಿಂದ ಗುಣವಾಗುವುದು ಖಂಡಿತ.

ಆ ಔಷಧವು,— **ಲಿವರ್ ಕ್ಯೂರ್** (ರಿಜಿಸ್ಟರ್ಡ್)

ಮತ್ತೂ ಯಕೃತ್ತು ಹಾಗೂ ಪ್ಲೀಹಗಳ 'ಸ್ಪೆಶಲಿಸ್ಟ್' ಜಮ್ಮಿ ವೆಂಕಟರಮಣಯ್ಯನವರ ಸುಪ್ರಸಿದ್ಧವಾದ ಗುಣಕಾರಿ ಔಷಧ.

ಮೈಲಾಪುರ,
ಮದ್ರಾಸು.

ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್,
ಬೆಂಗಳೂರು ಸಿಟಿ.

ಹ್ಯಾರಿಸನ್ ರೋಡ್,
ಕಲ್ಕತ್ತಾ.

"ಬ್ರೇಕ್ ಪಿಲ್ಸ್"

ಸ್ತ್ರೀ ಪುರುಷರಿಗೆ ಆನಂದವನ್ನುಂಟುಮಾಡುವದು ಈ ಮಾತ್ರೆಗಳೆ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ರಸ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಗ್ರಹಿಸಿ, ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನುಂಟುಮಾಡುವುದು. ಗುಣವಿಲ್ಲದಿದ್ದಲ್ಲಿ ಹಣಾ ವಾಪಸು.

೬೦ ಮಾತ್ರೆಗಳು ರೂ. ೫—೦—೦. ೩೦ ಮಾತ್ರೆಗಳು ರೂ. ೩—೦—೦.

ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೆ.

DR. A. S. MURTHY,
CHICACOLE, GANJAM DT.

THE GENERAL INSURANCE BANK OF INDIA LIMITED.,
OPPOSITE TALUK POLICE STATION.
MANGALORE.
ESTD. 1933.

AS ON 31ST OCTOBER 1935.

BENEFIT AMOUNT PAID EXCEEDS RS. 13,250/—
RESERVE FUND EXCEEDS RS. 4,300/—

WE HAVE THREE SCHEMES FOR YOU.

LIFE MARRIAGE BIRTH

ADMISSION FEE RS. 5—8—0 ONLY. (By Instalments if required)

MONTHLY PREMIUM RUPEE ONE ONLY.

WANTED Special Agents & Representatives on Liberal Terms.

For Full Prospectus & Agency Terms please call at or write to:—

THE GENERAL INSURANCE BANK OF INDIA LIMITED., MANGALORE.

Mangalore.
Dated 5th November '35.

P. K. MENON,
Secretary.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ
ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,
ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೀಳೋಣ, ಶೌಚಕ್ಕೆ ಸಾಪು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯುವ್ವನವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಪ್ರಮಾಣ:—ನಸಿಕಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬ್ಯಾ. ಬೆಲೆ ೩॥ ರೂ.
೧ ಡಜನ್ ಬಾ. ಬೆಲೆ ೧೨ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಷ್ಟ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು ಮಿಜಾರಕರ ಬ್ರದರ್ಸ, ಶೆಣೈ ಬ್ರದರ್ಸ್,
ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ,
ಉಡ್ಪಿ— ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ,
ತಂಕಪೇಟೆ.

ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ-ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮ ನಾಯ್ಕ ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋಅರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

ಪತ್ರವ್ಯವಹಾರ.

ಸೂಚನೆ:—[ಖಾತಮಿದಾರರ ಅಭಿಪ್ರಾಯಗಳು ಕಂಠೀರವನ ಅಭಿಪ್ರಾಯಗಳಲ್ಲ. ಎಲ್ಲ ಪತ್ರಗಳನ್ನು ಬರೆಯುವವರು ತಮ್ಮ ಹೆಸರು ವಿಳಾಸ ಕೊಡಬೇಕಾಗಿದೆ—ಸಂ.]

ಡಿ. ಬೋ. ಸೆಕೆಂಡರಿ ಶಾಲೆಗಳು.

ಅಯ್ಯಾ ಕಂಠೀರವನೇ,

ಮಾನ್ಯ ಕಲೆಕ್ಟರರು ಪ್ರೆಸಿಡೆಂಟರ ಚಾರ್ಜನ್ನು ವಹಿಸಿ ಬೋರ್ಡನ್ನು ಸುವ್ಯವಸ್ಥಿತ ಸ್ಥಿತಿಗೆ ತರುವುದು ಸ್ತುತ್ಯ. ಆದುದರಿಂದ ಈ ಸಂದರ್ಭದಲ್ಲಿಯೇ ಬಡ ಉಪಾಧ್ಯಾಯರ ಕೆಲವರ ಗೋಳನ್ನು ನಿನ್ನ ಮೂಲಕ ತಿಳಿಸಲು ಆಶಿಯಿದೆ.

ನಮ್ಮ ಜಿಲ್ಲೆಯಲ್ಲಿ ಬೋರ್ಡಿನ ೬ ಹೈಸ್ಕೂಲುಗಳೂ ೨ ಮಿಡ್ಲ ಸ್ಕೂಲುಗಳೂ ಇವೆ. ಇಷ್ಟು ಇದ್ದರೂ ಕೆಲವು ಉಪಾಧ್ಯಾಯರಿಗೆ ಮಾತ್ರ ಮೊದಲಿನಿಂದಲೂ ಒಂದೇ ಶಾಲೆಯಲ್ಲಿ ಕೆಲಸಮಾಡುವ ಪುಣ್ಯವು ಸಿಕ್ಕಿದೆ. ಇದು ಅಂತವರ ಮೂಲಿಹಕ್ಕಿನಂತಾಗಿ ಇತರರಿಗೆ ಅಲ್ಲಿ ಪ್ರವೇಶವೇ ಇಲ್ಲದಂತಾಗಿದೆ. ಇದು ಅನ್ಯಾಯವಲ್ಲವೇ? ಹತ್ತು ವರ್ಷಕ್ಕಿಂತ ಹೆಚ್ಚಿಗೆ ಒಂದೇ ಶಾಲೆಯಲ್ಲಿ ಕೆಲಸ ಮಾಡಿರುವ ಉಪಾಧ್ಯಾಯರನ್ನಾದರೂ ವರ್ಗಾಯಿಸಿ ಇತರರಿಗೆ ಸಂದರ್ಭ ದೊರಕಿಸಿ ಕೊಡುವುದು ಯೋಗ್ಯವಲ್ಲವೇ?

ಕಳೆದ ೨ ವರ್ಷಗಳಿಂದ ಆಗುತ್ತಿರುವ ವರ್ಗಾವರ್ಗಿಗಳು ಆಗಿ ಉಪಾಧ್ಯಾಯರ ಮನನೊಂದು ಅತೃಪ್ತಿ, ಅಸಮಾಧಾನಗಳು ಎಲ್ಲೆಲ್ಲಿಯೂ ತಲೆದೋರುವುದರಲ್ಲಿ ಸಂಶಯವಿಲ್ಲ. ಆದುದರಿಂದ ಮಾನ್ಯ ಕಲೆಕ್ಟರರು ಈ ವಿಷಯ ಪರ್ಯಾಲೋಚಿಸಿ ವರ್ಗಾವರ್ಗಿಯ ವಿಷಯದಲ್ಲಿ ಇನ್ನಾದರೂ ಅನ್ಯಾಯವಾಗದಂತೆ ಯೋಗ್ಯ ವ್ಯವಸ್ಥೆಯನ್ನು ಮಾಡುವರೇ?

N.

ಸ್ವಾರ್ಥದ ಮುಂದೆ ಸದಾಚಾರವೇ?

ಬೇರೆ ವಿಚಾರದಲ್ಲಿ ಮತಭೇದವಿದ್ದರೂ ನಮ್ಮ ಜಿಲ್ಲೆಯ ಶಿಕ್ಷಣ ವಿಚಾರದಲ್ಲಿ ಕೆಲವು ಬದಲಾವಣೆಗಳು ಶ್ರೀ। ಎ. ಬಿ. ಶೆಟ್ರು ಜಿಲ್ಲಾ ಬೋರ್ಡು ಅಧ್ಯಕ್ಷರಾದಂದಿನಿಂದ ಉಂಟಾಗಿರುವುದೆಂದು ಕೇಳಿದ್ದೇನೆ. ಆದರೆ ಕೆಲವು ವ್ಯಕ್ತಿಗಳ ಸ್ವಾರ್ಥತೆಯಿಂದ ಶ್ರೀ। ಶೆಟ್ಟರೆ ಕಾರ್ಯದ ಸಂಪೂರ್ಣ ಫಲವನ್ನುಣ್ಣುವ ಭಾಗ್ಯವು ಸರ್ವರಿಗೂ ಲಭಿಸದಂತಾಗಿದೆಯೆಂದು ತಿಳಿಸುವರೆ ತುಂಬಾ ವ್ಯಸನವಾಗುತ್ತದೆ. ಕೀರ್ತಿಶೇಷ ಅಬ್ದುಲ್ಲಾ ಸಾಹೇಬರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ ಉಡುಪಿ ಜಮಖಾನಾ ಕಮಿಟಿಯ ಆಡಳಿತವು ಈಗ ಜಿಲ್ಲಾ ಬೋರ್ಡಿನ ಕೈಕೆಳಗಿದೆ. ಮೊನ್ನೆ ಈ ಸಂಸ್ಥೆಯ ಸ್ಪರ್ಧೆಗಳು ಉಡುಪಿಯಲ್ಲಿ ನಡೆದುವು. ಆ ಬಗ್ಗೆ ಕುಂದಾಪುರ ಹೈಸ್ಕೂಲಿನಿಂದ ಜೂನಿಯರ್ ಮತ್ತು ಸೀನಿಯರ್ ಹೀಗೆ ಎರಡು ತಂಡವು ಕುಂದಾಪುರ ಹ್ಯಾಸ್ಕೂಲು ಗೇಮ್ಸ್ ಸೆಕ್ರಟರಿ ಶ್ರೀ। ರಾಮಣ್ಣ ಸೆಟ್ಟರ ನೇತೃತ್ವದಲ್ಲಿ ಕಳುಹಿಸಲ್ಪಟ್ಟವು. ಅಲ್ಲಿ ನಡೆದ ಎಲ್ಲಾ ಕಾರ್ಯಕಲಾಪಗಳಲ್ಲಿ ಕುಂದಾಪುರದವರು ಸಂಪೂರ್ಣ ಗೆದ್ದುದು ಸ್ತುತ್ಯ. ಆದರೆ ಇದರಿಂದ ಉಡುಪಿಯವರ ಪ್ರೀತಿಪ್ರಸನ್ನತೆಗೆ ಪಾತ್ರರಾಗುವ ಬದಲಿಗೆ ಅವರ ದ್ವೇಷ ಅಸೂಯೆ, ಕೋಪ ಕುಯುಕ್ತಿಗಳಿಗೆ ಬಲಿಬೀಳಬೇಕಾಯಿತು—ಜಮಖಾನಾ ಕಮಿಟಿಯ ಕಾರ್ಯದರ್ಶಿಯವರಾದ ಉಡುಪಿ ಬೋರ್ಡು ಹ್ಯಾಸ್ಕೂಲಿನ ಮುಖ್ಯ ಉಪಾಧ್ಯಾಯರೂ ಅವರ ವಿದ್ಯಾರ್ಥಿಗಳೂ ತೋರಿಸಿರುವ ವರ್ತನವು ಯಾವನೊಬ್ಬ ನಾಗರಿಕನೆನಿಸಿಕೊಂಡವನಿಗೂ ತೃಪ್ತಿಕರವಾಗಿರಲಿಲ್ಲ. ಮೇಲಿನ ವಿದ್ಯಾರ್ಥಿಗಳ ವರ್ತನವು ಎಷ್ಟರ ಮಟ್ಟಿಗೆ ಅತೃಪ್ತಿಕರವಾಗಿತ್ತೆಂದರೆ ಜಮಖಾನಾ ಕಮಿಟಿಯ ಜತೆಕಾರ್ಯದರ್ಶಿಯವರೂ ಮತ್ತು ಉಡುಪಿ ಬೋರ್ಡು ಹೈಸ್ಕೂಲಿನ ಅಧ್ಯಾಪಕರೂ ಆದ ಶ್ರೀ ದೇವರಾಯರಿಗೂ ಕೂಡ ತಮ್ಮ ಶಾಲೆಯ ವಿದ್ಯಾರ್ಥಿಗಳ ವರ್ತನವನ್ನು ಸಹಿಸಲಿಕ್ಕಾಗಲಿಲ್ಲ. ಆದರೆ ಮಾಡುವುದೇನು? ಹೆಡ್ ಮಾಸ್ತರ ಬೆಂಬಲ ಪಡೆದ ಈ ವಿದ್ಯಾರ್ಥಿ ತಂಡವು ಈ ದೇವರಾಯರನ್ನು ಲಕ್ಷ್ಯಮಾಡುವುದೇ?

ಒಂದು ವಿಚಾರ ನೋಡುವುದಾದರೆ ಹೆಡ್ ಮಾಸ್ತರರನ್ನೂ ದೂರಲಿಕ್ಕಾಗುವುದಿಲ್ಲ. ಯಾಕಂದರೆ ಕಳದ ೨ ವರ್ಷಗಳಿಂದ ಆದಷ್ಟು "ಕಪ್ಪು"ಗಳನ್ನು ತಮ್ಮ ಕಡೆ ಮಾಡಿಕೊಂಡು, ಈ ವರ್ಷವೂ ಕೂಡ ತಮ್ಮ ಶಾಶ್ವತ ಹಕ್ಕನ್ನು ಸ್ಥಾಪಿಸಬೇಕೆಂಬ ಅವರ ಮನೋಭೀಷ್ಟಕ್ಕೆ ಈ ಕುಂದಾಪುರ ವಿದ್ಯಾರ್ಥಿಗಳು ಈ ಪ್ರಕಾರ ತೊಂದರೆಯನ್ನು ತಂದೊಡ್ಡಿ ಗಂಟಲಿನೊಳಗೆ ಇಳಿದಿದ್ದ ತುತ್ತನ್ನು ಎತ್ತಿಕೊಂಡು ಹೋಗುವಾಗ, ಪಾಪ, ಯಾರಿಗೂ ವ್ಯಥೆಯಾಗುವುದೇ. ಆದರೆ ಹೆಡ್ ಮಾಸ್ತರರಾಗಿ ಹೀಗೆ ವರ್ತಿಸಿದುದು, ಜಮಖಾನಾ ಕಮಿಟಿಯ ಸೆಕ್ರೆಟರಿಗಳಾಗಿ ವರ್ತಿಸಿದುದು ಮಾತ್ರ ಮೇಲಿನ ಜಮಖಾನಾ ಕಮಿಟಿಗೂ, ಅದರ ಸ್ಥಾಪಕರ ಪವಿತ್ರ ಹೆಸರಿಗೂ ಒಳ್ಳೆಯ ಹೆಸರನ್ನು ತಾರದು. ಈ ವಿಚಾರದಲ್ಲಿ ಅನ್ಯಾಯಹೊಂದಿದ ಶಾಲೆಯ ಮೇಲಧಿಕಾರಿಗಳು ತಮಗುಂಟಾದ ಅಪಮಾನವನ್ನು ಯುಕ್ತಕಂಡ ರೀತಿಯಲ್ಲಿ ಸರಿಪಡಿಸಿಕೊಳ್ಳದಿದ್ದರೆ ಮುಂದೆ ಈ ಜಮಖಾನಾ ಕಮಿಟಿಯ ಸ್ಪರ್ಧೆಗೆ ಬೇರೆ ಶಾಲೆಗಳು ಹೋಗುವುದೇ ಅಸಾಧ್ಯವಾಗಬಹುದು. ಮತ್ತು ಈಗಿನ ಜಿಲ್ಲಾ ಬೋರ್ಡು ಅಧ್ಯಕ್ಷರು ಕೂಡಾ ತನ್ನ ಆಡಳಿತಕ್ಕೆ ಒಳಪಟ್ಟ ಮೇಲಿನ ಜಮಖಾನಾ ಕಮಿಟಿಯ ಕೀರ್ತಿಗೆ ಕಳಂಕ ಉಂಟಾಗದಂತೆ ತಕ್ಕ ವ್ಯವಸ್ಥೆ ಮಾಡಿಯಾರೆಂದು ನಂಬುತ್ತೇನೆ.

ವಿದ್ಯಾರ್ಥಿಗಳ ಹಿತಾಭಿಲಾಷಿ.

For all kinds of
NEAT AND ACCURATE PRINTING,
please consult
The Saraswathi Printing Works, Ltd.,
MANGALORE, S. K.

ಮಂಗಳೂರು ಪೇಟೆಯ ಚಾಲತಿ ಧಾರಣೆ.

ಹೊಸ ರಾಶಿ	...	3— 5	3—12
ಮಸ್ಕತಿ ಅಕ್ಕಿ ಮುಡಿ ೧ಕ್ಕೆ	...	3 - 10	4—10
ಗುಡ್ಡೆ	...	3—12	4— 0
ಸುಗ್ಗಿ ರಾಶಿ	...	3— 6	3—12
ಅವ್ವಲ್ ಬಿ ಬೆಳ್ತಿಗೆ „ ೧„	...	4— 4	4—10
ಗುಡ್ಡೆ ಬೆಳ್ತಿಗೆ „ „	...	4— 0	4— 4
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	6— 4	7— 0
ಗೋಧಿ ಗೋಣಿ ೧ಕ್ಕೆ	...	8— 8	10— 4
ಹುರುಳಿ „ „	...	5— 8	—
ಕಡಲೆ „ „	...	7— 4	9— 8
ತೊಗರಿ „ „	...	9— 0	9— 8
ತೊಗರಿಬೇಳೆ ಗೋಣಿ ೧ಕ್ಕೆ	...	11— 0	15— 8
ಉದ್ದು ಮುಡಿ ೧ಕ್ಕೆ	...	4— 6	4—10
ಹೆಸರು „ „	...	4—10	5— 0
ರಾಗಿ ಗೋಣಿ ೧ಕ್ಕೆ	...	5— 0	6— 4
ಊರು ಬೆಲ್ಲ ಖಂಡಿ ೧ಕ್ಕೆ	...	35— 0	40— 8
ಉಪ್ಪು ಗೋಣಿ „	...	4— 8	—
ಕೊಬ್ರಿ ಖಂಡಿ „	...	47— 8	55— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	28— 0	—
ಎಳ್ಳಿಂಡಿ ಖಂಡಿ ೧ಕ್ಕೆ	...	35— 0	—
ಕೊಬ್ರಿ ಎಣ್ಣೆ ಮಣ ೧ಕ್ಕೆ	...	4—10	5—10
ಎಳ್ಳೆಣ್ಣೆ ಡಬ್ಬಿಗೆ	...	—	7— 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	—	6— 5
ಮೋರಿಸ್ ಸಕ್ಕರೆ ಮಣ ೧ಕ್ಕೆ	...	3—10	—
ಮೆಣಸಿನ ಕಾಯಿ ಮಣ ೧ಕ್ಕೆ	...	2— 8	4— 2
ಸಾಸಿವೆ ಮುಡಿ ೧ಕ್ಕೆ	...	5— 8	6— 0
ಕೊತ್ತಂಬರಿ ಮುಡಿ ೧ಕ್ಕೆ	...	2— 8	3— 0
ನೇಟಿವ ಕಾಫಿ ಖಂಡಿ ೧ಕ್ಕೆ	...	150— 0	155— 0
ನೇಟಿವ ಪೀಬರಿ ಕಾಫಿ ಖಂಡಿ ೧ಕ್ಕೆ	...	180— 0	182— 8
ಮಾನ್‌ಸೂನ್ ಏ ಏ ಕಾಫಿ ಖಂಡಿ ೧ಕ್ಕೆ	...	185— 0	190— 0
ಬಿಳಿ ಗೋಟು ಅಡಿಕೆ ಖಂಡಿ ೧ಕ್ಕೆ (ಹಳ್ತು)		100— 0	115— 0
ಕಾಳುಮೆಣಸು ಖಂಡಿ ೧ಕ್ಕೆ	...	102— 8	105— 0
ಯಾಲಕ್ಕಿ ಮಣ ೧ಕ್ಕೆ ಕೊಡಗು	...	25— 0	25— 8
„ „ „ ಸಕಲೇಶಪುರ	...	26— 0	30— 0
„ „ „ ಬೀಜ	...	38— 0	39— 0
ಗೇರುಬೀಜ ಮುಡಿ ೧ಕ್ಕೆ	...	4— 6	4— 8
ಬತ್ತ ಮುಡಿ ೧ಕ್ಕೆ	...	1— 8	1—10
ಎಳ್ಳು ಮುಡಿ ೧ಕ್ಕೆ	...	6—12	7— 0
ತುಪ್ಪ ಮಣ ೧ಕ್ಕೆ	...	18— 8	19— 0
ಕಬ್ಬಿಣ ಖಂಡಿ ೧ಕ್ಕೆ	...	35— 0	37— 8
ತಾಂಬ್ರ ತಗಡು ಮಣ ೧ಕ್ಕೆ	...	9—12	9—14
ಪವನು ೧ಕ್ಕೆ	...	22— 8	—
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	12— 8	14— 0
ಚೀನಿ ಬೆಳ್ಳಿ ಸೇರು ೧ಕ್ಕೆ	...	17— 8	18 - 0
ಹಿತ್ತಾಳೆ ತಗಡು ಮಣ ೧ಕ್ಕೆ	...	10— 0	10— 0
ಹೊಸತ್ತು ಬಿಳಿಗೋಟು ಖಂಡಿ ೧ಕ್ಕೆ	...	75— 0	85— 0

ಮಂಗಳೂರು ಹಂಚು I ಕ್ಲಾಸ್—1000ಕ್ಕೆ ರೂ. 26ರಿಂದ 30
„ ದಂಬೆಗಳು „ „ ರೂ. 70ರಿಂದ 80
ನೆಲಕ್ಕೆ ಹಾಸುವ ಇಟ್ಟಿಗೆಗಳು „ „ ರೂ. 35ರಿಂದ 40

ಮಂಗಳೂರಿನಲ್ಲಿ ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ	ಘಂಟೆ	ತಲಪುವ	ಘಂಟೆ
ಮಿಕ್ಸೆಡ್	ಬೆಳಿಗ್ಗೆ	5-55	ರಾತ್ರಿ	9-0
ಕಾಂಜಂಗಾಡ್ ಪ್ಯಾಸಂಜರ್	ಬೆಳಿಗ್ಗೆ	8-25	ಮಧ್ಯಾಹ್ನ	1-55
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ	9-50	ಸಂಜೆ	4-25
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	1-0	ಮಧ್ಯಾಹ್ನ	2-45
ಕಾಸರಗೋಡ್ ಪ್ಯಾಸಂಜರ್	ಮಧ್ಯಾಹ್ನ	3-25	ಸಂಜೆ	6-25
ಶಟಲ್	ಸಂಜೆ	5-30	ಬೆಳಿಗ್ಗೆ	9-26

ಶಕ ೧೮೫೭ ಯುವ ಸಂ। ೧೯೩೬ನೇ ಇಸವಿ ಜನವರಿ ಮಾಹೆ ಪಂಚಾಂಗ

ತಾರೀಖು	ವಾರಗಳ	ಚಾಂದ್ರಮಾನ			ಸೌರಮಾನ		ನಕ್ಷತ್ರಗಳು		ಸೂರ್ಯ	
	ಹೆಸರು	ಮಾಸ	ತಿಥಿ	ಕಾಲ	ಮಾಸ	ತೇದಿ	ಹೆಸರು	ಕಾಲ	ಉದಯ	ಅಸ್ತ
1	2	3	4	5	6	7	8	9	10	11
				ಘ. ವಿ.				ಘ. ವಿ.	ಗಂ. ನಿ.	ಗಂ. ನಿ.
1	ಬುಧವಾರ	ಪುಷ್ಯ ಶುದ್ಧ	7	41 1	[illegible]	17	ಉಭಾ.	56 38	6 39	6 4
2	ಗುರುವಾರ		8	39 16		18	ರೇವತಿ	35 7	6 39	6 4
3	ಶುಕ್ರವಾರ		9	36 25		19	ಅಶ್ವನಿ	54 31	6 40	6 5
4	ಶನಿವಾರ		11	32 37		20	ಭರಣಿ	52 3	6 40	6 5
5	ಆದಿತ್ಯವಾರ		12	28 2		21	ಕೃತ್ತಿಕ	48 52	6 41	6 5
6	ಸೋಮವಾರ		13	22 53		22	ರೋ.	45 10	6 41	6 6
7	ಮಂಗಳವಾರ		14	17 17		23	ಮೃಗ.	41 8	6 41	6 6

ರಾಹುಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ.
ಭಾನು	ಸಾಯಂಕಾಲ	4½	6
ಸೋಮ	ಬೆಳಿಗ್ಗೆ	7½	9
ಮಂಗಳ	ಸಾಯಂಕಾಲ	3	4½
ಬುಧ	ಬೆಳಿಗ್ಗೆ	12	1½
ಗುರು	ಸಾಯಂಕಾಲ	1½	3
ಶುಕ್ರ	ಬೆಳಿಗ್ಗೆ	10½	12
ಶನಿ	ಬೆಳಿಗ್ಗೆ	9	10½

ಗುಳಿಕಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ
ಭಾನು	ಸಾಯಂಕಾಲ	3	4½
ಸೋಮ	„	1½	3
ಮಂಗಳ	ಬೆಳಿಗ್ಗೆ	12	1½
ಬುಧ	„	10½	12
ಗುರು	„	9	10½
ಶುಕ್ರ	„	7½	9
ಶನಿ	„	6	7½

MESSRS. RAJULU & CO.,

DISTRICT DEALERS FOR ADDISON & CO. LTD., MADRAS,

MANGALORE.

For Morris, Plymouth, Airflow ler & De Soto Cars,
Dodge Trucks, Ariel & Trium Motor Cycles.

"Announcing a remarkable Car, THE NEW MORRIS EIGHT"
Outstanding road performance with exceptional
economy in maintenance costs.

DODGE Trucks furnish more service. It will deliver more work with less loss of time and with greater profits.

MR. L. SEQUEIRA,
Sales Representative,
Messrs. Rajulu & Co.

ದಿ ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಮುಖ್ಯ ಕಚೇರಿ:—ಮದ್ರಾಸು. ಪೋಸ್ಟು ಬಾಕ್ಸ್ ನಂಬ್ರ 182.

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.
'ರಿಜಿಸ್ಟ್ರಾರ್ ಓಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತಗಳು ಅತ್ಯಾಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ. ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

ಬೇಕಾಗಿದ್ದಾರೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಪ್ರತಿನಿಧಿಗಳಾಗುವ ಏಜಂಟರು ಬೇಕು.
ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.
(2) ಕನ್ವೀನರ್, ಕೂರ್ಗ್ ಲೋಕಲ್‌ಬೋರ್ಡು ಓಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶ್ಯೂರೆನ್ಸ್ ಸೊಸೈಟಿ, C/o ಕೂರ್ಗ್ ಕೊ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್ ಮಡಿಕೇರಿ, ಕೊಡಗು.
(3) ವೈ. ಶ್ರೀನಿವಾಸಯ್ಯ, ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ-ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು.

ಸ್ಟೀಮರ್ ಚಲಾವಣೆಯ ಸಮಯದ ಪಟ್ಟಿ

(ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿ)

ಮುಂಬಾಯಿಂದ ಮಂಗಳವಾರ ಮಧ್ಯಾಹ್ನ 12-30ಕ್ಕೆ ಹೊರಟು ಮಂಗಳೂರನ್ನು ಗುರುವಾರ ಬೆಳಿಗ್ಗೆ 9 ಘಂಟೆಗೆ ತಲ್ಪಿ ಅಂದೇ ಮಧ್ಯ ರಾತ್ರಿ ಹೊರಟು ಕಲ್ಲಿಕೋಟೆಯನ್ನು ಸ್ಟೀಮರು ಶುಕ್ರವಾರ ಬೆಳಿಗ್ಗೆ 11-30ಕ್ಕೆ ತಲ್ಪುವದು. ಕಲ್ಲಿಕೋಟೆಯಿಂದ ಶುಕ್ರವಾರ ಮಧ್ಯಾಹ್ನ 12-30ಕ್ಕೆ ಹೊರಟು ಅಂದೇ ಮಧ್ಯರಾತ್ರಿ ಮಂಗಳೂರನ್ನು ತಲ್ಪಿ ಶನಿವಾರ ಬೆಳಿಗ್ಗೆ 10 ಘಂಟೆಗೆ ಹೊರಟು ಮುಂಬಾಯಿಯನ್ನು ಸೋಮವಾರ ಬೆಳಿಗ್ಗೆ 7 ಘಂಟೆಗೆ ತಲ್ಪುತ್ತದೆ. ಮುಂಬಾಯಿಯಿಂದ ಶುಕ್ರವಾರ ಮಧ್ಯಾಹ್ನ 12-30ಕ್ಕೆ ಹೊರಟ ಸ್ಟೀಮರು ಮಂಗಳೂರಿಗೆ ಸೋಮವಾರ ಬೆಳಿಗ್ಗೆ 6ಕ್ಕೆ ತಲ್ಪಿ, ಮಂಗಳವಾರ ಬೆಳಿಗ್ಗೆ 9ಕ್ಕೆ ಹಿಂತಿರುಗಿ ಗುರುವಾರ ಮಧ್ಯಾಹ್ನ 12ಕ್ಕೆ ಮುಂಬಾಯಿಯನ್ನು ತಲಪುವದು.

ಬಿಳೇ ತೊನ್ನು—

ಮತ್ತೂ ಕುಷ್ಠ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೀ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ನೂರಾರು ಮಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

Vaidiya Raj Akhila Kishori Ram,
No. 223, P. O., Katri Sarai. (GAYA).
ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

COORG FOREST DEPARTMENT.

SANDALWOOD AUCTION.

Mercara, the 5th December, 1935.

71 tons, more or less, of cleaned sandalwood will be sold by public auction at Fraserpet Koti on Thursday the 23rd January, 1936 at 1 P. M.

For further particulars please apply to the Chief Forest Officer, Coorg, Mercara.

3, 24-12

WANTED

Three Beautiful young ladies as Bill Writers and Supervisors for a high class BRAHMIN Hotel and Restaurant.

Apply with photos to:—

Sastry's Hotel & Restaurant,
Chickpet, BANGALORE CITY.

4, 10-12.

ERED NO. M. 1393. ವಾರ್ಷಿಕ ಚಂದಾ ರೂ. 2-8-0. SINGLE COPY ONE AN



KANTEERAVA MANGALORE

THE MOST WIDELY CIRCULATED KANARESE WEEKLY

VOL. XVII MANGALORE, TUESDAY, DECEMBER 31, 1935. NO. 39.

ನಮ್ಮ ಬ್ಯಾಲೆನ್ಸ್ ಷೀಟುಗಳೇ ಇರುವ ವಿದ್ಯಮಾನಗಳನ್ನು ಪ್ರಕಟಿಸುತ್ತವೆ.

"ಸ್ವದೇಶಿ"ಯ ಜಾಗ್ರತಿಯ ಕಾಲದಲ್ಲಿ ಸ್ಥಾಪನೆಗೊಂಡ, ಕಲ್ಕತ್ತೆಯ "ನ್ಯಾಶನಲ್" ದಿನದಿನಕ್ಕೂ ಬಲಗೊಂಡು ಪುಷ್ಟಿಯಾಗಿ, ಪರಿಣಾಮದಲ್ಲಿ, ಅದು ಇಂದು ಪೂರ್ವದೇಶಗಳ ಜೀವವಿಮಾ ಕಾರ್ಯಾಲಯಗಳಲ್ಲಿ ಪ್ರಮುಖವೆನ್ನಿಸಿದೆ. ಈ ಸಂಸ್ಥೆಯು, ಈ ವ್ಯವಹಾರ ನಡೆಸಿರುವ ಸುಮಾರು 30 ವರ್ಷಗಳ ಕಾಲದಲ್ಲಿ, ಪಾಲಿಸಿದಾರರಿಗೂ, ಅವರ ಹಕ್ಕುದಾರರಿಗೂ ಇಷ್ಟೊಂದು ಅಲ್ಪಾವಧಿಯಲ್ಲಿಯೇ "ಕ್ಲೈಮುಗಳ" ಪಾವತಿಗಾಗಿ 1,30,00,000 ರೂಪಾಯಿಗಳಿಗೂ ಮಿಕ್ಕು ಸಲ್ಲಿಸಿರುವ ದಷ್ಟೇ ಅಲ್ಲದೆ, ಕಂಪೆನಿಯು ಆಸ್ತಿಯ ರೂಪದಲ್ಲಿ ರೂಪಾಯಿ 2,50,00,000ಗಳಿಗೂ ಹೆಚ್ಚಾಗಿ ಸಂಗ್ರಹಿಸಿಡಲೂ ಸಮರ್ಥವಾಗಿದೆ. ಜೀವನದಲ್ಲಿ ಉಳಿಸಲಾದ ಗಂಟಿನೊಡನೆ ಜೂಜಾಡಲು ಬಯಸದವರ ಆತುರಪೂರ್ವಕವಾದ ಆಲೋಚನೆಗೆ ಒಳಗಾಗಲು ಈ ನಿಜ ವಿದ್ಯಮಾನಗಳೇ ಸಾಕೆನ್ನಬಹುದಾಗಿದೆ. ಇದು ನಿಮ್ಮ ಪರ್ಯಾಲೋಚನೆಗೂ ವಿತರ್ಕಕ್ಕೆ ಒಳಗಾಗಬಾರದು?

ನಿಮಗೆ ಬೇಕಾದುದೇನೆಂದು ನೀವು ನಮಗೆ ತಿಳಿಸಿದರೇ ಸಾಕು; ಮಿಕ್ಕ ವಿಚಾರಗಳನ್ನೆಲ್ಲ ನಾವೇ ನೋಡಿಕೊಳ್ಳುವೆವು.

ನ್ಯಾಶನಲ್ ಇನ್ಶ್ಯುರೆನ್ಸ್ ಕಂಪೆನಿ, ಲಿಮಿಟೆಡ್,
ಹೆಡ್ ಆಫೀಸು, ಕಲ್ಕತ್ತ.

ಏಜನ್ಸಿಯ ಶರ್ತಗಳಿಗೆ ಬರೆದುಕೊಳ್ಳಿ:—
ಬ್ರಾಂಚ್ ಸೆಕ್ರೆಟರಿ, ನ್ಯಾಶನಲ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್,
362, ಚೈನಾ ಬಜಾರ್ ರೋಡ್, ಎಸ್ಪ್ಲೆನೇಡ್, ಮದ್ರಾಸ್.

ಅಥವಾ

ದಿ ಆರ್ಗನೈಜಿಂಗ್ ಸೆಕ್ರೆಟರಿ,
ಸಬ್ ಆಫೀಸ್,
171, ನ್ಯೂ ಸ್ಟ್ರೀಟ್, ಮಧುರೆ.

ದಿ ಚೀಫ್ ಏಜೆನ್ಸಿ,
ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್,
ಬೆಂಗಳೂರು ಸಿಟಿ.

ಬೆಂಕಿ ಮತ್ತೂ ಮೋಟರ್ ಅವಗಡಗಳ ಇನ್ಶ್ಯೂರೆನ್ಸಿಗಾಗಿ
ದಿ ಅಸೋಸಿಯೇಟೆಡ್ ನ್ಯಾಶನಲ್ ಫಯರ್ ಮತ್ತೂ ಜನರಲ್ ಇನ್ಶ್ಯುರೆನ್ಸ್ ಕೋ., ಲಿಮಿಟೆಡ್,
ಎಂಬೀ ಸಂಸ್ಥೆಯೊಡನೆ ವಿಚಾರಿಸಿರಿ.

S. K. M.

ಸಿದ್ಧ ಕಲ್ಪ ಮಕರಧ್ವಜ
(ರಿಜಿಸ್ಟರ್ಡ್)

ನಿಶ್ಶಕ್ತಿ, ನರಗಳ ಬಲಹೀನತೆ, ಅಜೀರ್ಣ, ಉಬ್ಬುಸ, ಮೇಹವ್ಯಾಧಿ, ಮೇಹ ವ್ರಣಗಳು, ಸ್ತ್ರೀ ಸಂಬಂಧದಿಂದುಂಟಾಗುವ ವ್ಯಾಧಿಗಳು, ಸ್ತ್ರೀಯರ ಗರ್ಭಾಶಯ ಮತ್ತು ಸೂತಿಕಾ ಸಂಬಂಧವಾದ ಎಲ್ಲಾ ವ್ಯಾಧಿಗಳು, ಚಿಕ್ಕಂದಿನ ದುರ್ನಡತೆಯ ಪರಿಣಾಮವಾಗಿ ಉಂಟಾಗುವ ವೀರ್ಯಕ್ಷಯ ಮತ್ತು ಬಲಹೀನತೆ ಇವುಗಳಿಗೆಲ್ಲಾ ಮಹಾಮಹಿಮೆಯುಳ್ಳ ದಿವ್ಯೌಷಧ ಇದು ಒಂದೇ. ೨೦ ವರ್ಷಗಳಿಂದ ಪ್ರಖ್ಯಾತಿಹೊಂದಿ ಅನೇಕ ಸುವರ್ಣ ಪದಕಗಳನ್ನೂ ಮತ್ತು ಯೋಗ್ಯತಾಪತ್ರಗಳನ್ನೂ ಹೊಂದಿರುತ್ತದೆ.

ಕ್ರಯ ೬೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ರೂ. ೧೦.

THE MADRAS
AYURVEDIC PHARMACY (LTD.),
Madras—P. O. Box 151, 289 Esplanade,
180, Mount Rd., MADRAS.

THE BANK OF MANGALORE, LTD.,
Head Office:—SRI LAXMINARAYAN BLDGS., CAR ST: MANGALORE. Branch:—MOODABIDRI.
ದಿ ಬೇಂಕ್ ಆಫ್ ಮಂಗಳೂರು, ಲಿಮಿಟೆಡ್, ಮಂಗಳೂರು.

Authorised Capital ಅಧಿಕೃತ ಮೂಲಧನ } Rs. 2,00,000.
Subscribed Capital ಚಂದಾ ಅರ್ಪಿಸಿದ್ದು } Rs. 28,325.
Paid-up Capital ಕೆತ್ತು ಬಂದದ್ದು } Rs. 6,025.

STATEMENT OF AFFAIRS AS ON 30TH JUNE 1935.

Capital ಪಾಲು ಪಸ್ತಾಲಿಕರಿಂದ ವಸೂಲಾದ ಧನ	ರೂ.	6,025— 0— 0	Furniture and Safe ಟ್ರಿಜರಿ ವಗೈರೆ	ರೂ.	1,050— 0— 0
Reserve Fund ಕ್ಷೇಮ ನಿಧಿ	ರೂ.	500— 0— 0	Authorised Investments ಚಿನ್ನಾಭರಣ, ವ ಇತರ ಜವಾಬ್ದಾರಿಯ ಮೇಲ್ಲಿ	ರೂ.	94,325—14— 6
Deposits, Fixed, Current, etc. ನಿರಖು, ಚಾಲ್ತಿ ಇತ್ಯಾದಿ ಠೇವಣಾತಿಗಳು	ರೂ.	74,707— 0— 9	Bills per contra ಬಿಲ್ಸ್ ಜಮಾ ಇರುವಂತೆ ಬಹಾ	ರೂ.	16,037— 9— 5
Due to Bankers ಬೇಂಕರರಿಗೆ ಸಲ್ಲತಕ್ಕದ್ದು	ರೂ.	16,582— 1—10	Sundries ಸಾದಿಲವಾರು	ರೂ.	1,827— 6— 7
Bills for Collection ಜಮಾ ಮಾಡು[illegible] ಇರುವ ಬೀಲುಗಳು	ರೂ.	16,037— 9— 2	Cash in hand and with Bankers at call ಕೈಯಲ್ಲಿ ಇರತಕ್ಕ ವ, ಬೇಂಕರರಲ್ಲಿರತಕ್ಕ ನಗದಿ ಶಿಲ್ಕು	ರೂ.	4,130— 1— 2
Sundries ಸಾದಿಲವಾರು	ರೂ.	3,519— 3—11			
	ರೂ.	117,370—15— 8		ರೂ.	117,370—15— 8

Fixed Deposits ನಿರಖು ಠೇವಣಾತಿ.

For 2 years 6½% ಎರಡು ವರ್ಷ ವ್ಯಾದೆಯವುಗಳಿಗೆ. For 6 months 5% ಆರು ತಿಂಗಳ ವ್ಯಾದೆಯವುಗಳಿಗೆ.
For 1 year 6% ಒಂದು ವರ್ಷ „ For 3 months 4½% ಮೂರು ತಿಂಗಳ „

Current, Savings Bank, Cumulative Deposits are accepted at most favourable rates. ಚಾಲ್ತಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಎಂಬ ಸಂಚಯದ [illegible]
Drafts on Madras, Bombay, Calicut and Bangalore issued. Bills for collections received. ಮದ್ರಾಸು, ಮುಂಬಯಿ, ಕಲಿಕೋಟೆ, ಮತ್ತು ಬೆಂಗಳೂರು [illegible]
ಚೆಕ್ಸ್ ಮತ್ತು ಬಿಲ್ಸ್ ಓಫ್ ಎಕ್ಸ್‌ಚೇಂಜ್ ಹಿಂದೂಸ್ಥಾನದಲ್ಲೆಲ್ಲಾ ಕಡೆಗಳದ್ದು ವಸೂಲು ಮಾಡಿ ಯಾ, ವಟಾಯಿಸಿಕೊಡಲಾಗುವುವು. Savings Bank Deposits Interest allowed on [illegible]
at 4—6—0% ಸೇವಿಂಗ್ಸ್ ಬ್ಯಾಂಕ್ ಡಿಪೋಜಿಟಿನ ದಿವಸಂಪ್ರತಿ ಶಿಲ್ಕಿನ ಮೇಲೆ 4—6—0% ಬಡ್ಡಿ ಕೊಡಲ್ಪಡುವುದು.

ALL KINDS OF BANKING BUSINESS UNDERTAKEN.
A FEW SHARES ARE STILL AVAILABLE AT PAR.
APPLY FOR PARTICULARS.

ಸಾಮಾನ್ಯ ಬೇಂಕಿನ ಎಲ್ಲಾ ತರಹ ವಹಿವಾಟುಗಳು ನಡಿಸಲ್ಪಡುವುವು.
ಮೂಲಬೆಲೆಗೆ ಕೆಲವು ಪಾಲುಗಳೂ ಮಾರಾಟಕ್ಕಿವೆ.
ವಿಶೇಷ ಮಾಹಿತಿ ಬಗ್ಗೆ ಆಫೀಸಿಗೆ ಬರಕೊಳ್ಳುವುದು.